ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಗಂಗಾರಾಂ ಬಡೇರಿಯಾ

ಗಣಿ ಹಗರಣ ಆರೋಪಿ

ಸಂಪುಟ 11 | ಸಂಚಿಕೆ 22 | ಪುಟ 16 | ಮೇ 22-28, 2017 | ರೂ. 10/-

web: www.janashakthi.co.in | e-mail : js_weekly@yahoo.com

ಯಶಸ್ವಿ ಚಾರಿತ್ರಿಕ

Democratic Youth Federation of India

ಮುಸ್ಲಿಂ ಯುವ ಸಮಾವೇಶ

ಮೇ. 14-15 2017
ಶಾಂತಿ ನಿಲಯ
ಬಲ್ಮಠ, ಮಂಗಳೂರು







ಮೋದಿ 3 ವಿಫಲ ವರ್ಷಗಳು





ಈಗ ಉದ್ಯೋಗ ಸೃಷ್ಟಿಯಾಗುತ್ತಿರುವ ವೇಗದಲ್ಲಿ
ಮೋದಿ ಭರವಸೆ "ವಾರ್ಷಿಕ 2 ಕೋಟಿ"
ಉದ್ಯೋಗ ಸೃಷ್ಟಿಗೆ 77 ವರ್ಷ ಬೇಕು.

- ಬೃಂದಾ ಕಾರಟ್,
ಸಿಪಿಐಎಂ ಪೊಲಿಟ್ ಬ್ಯೂರೋ ಸದಸ್ಯರು.

cpimkarnataka.org CPIM Karnataka @cpimkarnataka

ಸಹರಾನಪುರ: ಯೋಗಿಯ ಜಂಗಲ್ ರಾಜ್ ಸ್ಯಾಂಪಲ್



ಬಡ್ತಿ ಮೀಸಲಾತಿ ರ್‍ಯಾಲಿ



ರೈತರ ಅಹೋ ರಾತ್ರಿ ಧರಣಿ

ದೇಶ ಪ್ರೇಮಿ ಸಮಾವೇಶ ಏಕೆ?

ಉತ್ತರಪ್ರದೇಶದಲ್ಲಿ ಜಾತಿ ಮತ್ತು ಕೋಮು ಹಿಂಸಾಚಾರದ ಭೀತಿ
ಮಧ್ಯಪ್ರವೇಶಿಸಿ ದಲಿತರಿಗೆ ನ್ಯಾಯ ಒದಗಿಸಲು ರಾಷ್ಟ್ರಪತಿಗಳಿಗೆ ಮನವಿ



ಮೇ 17ರಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ಸುಭಾಷಿಣಿ ಅಲಿ ಇತ್ತೀಚೆಗೆ ಜಾತಿಗಲಭೆಗಳಿಗೆ ಗುರಿಯಾದ ಉತ್ತರಪ್ರದೇಶದ ಸಹರಾಣಪುರ ಜಿಲ್ಲೆಯ ಶಬ್ಬಿರ್‌ಪುರದ ದಲಿತ ಕುಟುಂಬಗಳೊಂದಿಗೆ ರಾಷ್ಟ್ರಪತಿಗಳನ್ನು ಭೇಟಿಯಾಗಿ ಒಂದು ಮನವಿ ಪತ್ರವನ್ನು ಸಲ್ಲಿಸಿದರು. ಇದರಲ್ಲಿ ಈ ದಲಿತ ಕುಟುಂಬಗಳಿಗೆ ನ್ಯಾಯ ಒದಗಿಸಲು ಮಧ್ಯಪ್ರವೇಶಿಸಬೇಕು ಎಂದು ರಾಷ್ಟ್ರಪತಿಗಳನ್ನು ಅವರು ಕೋರಿದ್ದಾರೆ. ರಾಷ್ಟ್ರಪತಿಗಳು ಈ ದಲಿತ ಕುಟುಂಬಗಳ ಮಾತುಗಳನ್ನು ಸಹಾನುಭೂತಿಯಿಂದ ಕೇಳಿ ಆತಂಕ ವ್ಯಕ್ತಪಡಿಸಿದರು ಮತ್ತು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಸಾಧ್ಯವಾದುದನ್ನು ಮಾಡುವುದಾಗಿ ಹೇಳಿದರು.

ರಾಷ್ಟ್ರಪತಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಶಬ್ಬಿರ್‌ಪುರದಲ್ಲಿ ನಡೆದ ಘಟನೆಯನ್ನು ವಿವರಿಸುತ್ತ ರಾಷ್ಟ್ರಪತಿಗಳಿಗೆ ಸಲ್ಲಿಸಿದ ಮನವಿ ಪತ್ರ ಈಗ ಈ ರಾಜ್ಯದಲ್ಲಿ ಉಂಟಾಗಿರುವ ಪರಿಸ್ಥಿತಿಯತ್ತ ಅವರ ಗಮನ ಸೆಳೆದಿದೆ. ಬಿಜೆಪಿ ಸರಕಾರದ ರಚನೆಯ ನಂತರ ಇಲ್ಲಿನ ಸ್ವಯಂನೇಮಿತ ಕಾವಲುಕೋರ ಗ್ಯಾಂಗ್‌ಗಳಿಗೆ, ಅದರಲ್ಲೂ ಮುಖ್ಯಮಂತ್ರಿಗಳದ್ದೇ ಸಂಘಟನೆಯಾದ ಹಿಂದೂ ಯುವ ವಾಹಿನಿಯ ಮಂದಿಗೆ ಭಾರೀ ಕುಮ್ಮಕ್ಕು ಸಿಕ್ಕಂತಾಗಿದೆ. ಅವರು ವಿವಿಧ ಜನವಿಭಾಗಗಳ ಮೇಲೆ ಮನಬಂದಂತೆ ಹಲ್ಲೆ ನಡೆಸುತ್ತಿದ್ದಾರೆ. ಇದರಲ್ಲಿ ಬಿಜೆಪಿ ಮುಖಂಡರೂ, ಶಾಸಕರೂ, ಸಂಸದರೂ ಶಾಮೀಲಾಗುತ್ತಿದ್ದಾರೆ. ಪರಿಸ್ಥಿತಿ ಆಳುವ ಪಕ್ಷದ ಕೃಪಾಪೋಷಣೆಯಲ್ಲಿ ಹೀಗೇ ಮುಂದುವರೆದರೆ ರಾಜ್ಯದೆಲ್ಲೆಡೆಗಳಲ್ಲಿ ಜಾತಿ ಮತ್ತು ಕೋಮು ಹಿಂಸಾಚಾರ ಹರಡುವ ಭೀತಿಯುಂಟಾಗಿದೆ ಎಂದು ಈ ಮನವಿ ಪತ್ರ ಹೇಳಿದೆ.

ಆದ್ದರಿಂದ ರಾಷ್ಟ್ರಪತಿಗಳು ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು ಎಂದು ಮನವಿ ಪತ್ರ ಕೋರಿದೆ. ಏಕೆಂದರೆ ದಲಿತ ಸಮುದಾಯದ ಕಲ್ಯಾಣ ಮತ್ತು ಭದ್ರತೆ ಸರಕಾರದ ಹೊಣೆ. ಈ ಸಮುದಾಯದವರು ಅವಮಾನ, ತಿರಸ್ಕಾರದೊಂದಿಗೆ ಆರ್ಥಿಕ ನಷ್ಟಗಳನ್ನೂ ಅನುಭವಿಸಿದ್ದಾರೆ, ಇವರ ಅಹವಾಲುಗಳಿಗೆ ಗಮನ ನೀಡುವಂತೆ, ಅವರಿಗೆ ಸೂಕ್ತ ಪರಿಹಾರಗಳು ಮತ್ತು ನ್ಯಾಯ ಒದಗುಂತೆ ಮತ್ತು ಅವರ ಮೇಲಿನ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಬೇಕು ಎಂದು ಮನವಿ ಪತ್ರ ರಾಷ್ಟ್ರಪತಿಗಳನ್ನು ಕೋರಿದೆ.

ಕೇರಳ ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸಲು ರಾಜ್ಯಪಾಲರನ್ನು ಬಳಸುವ ಬಿಜೆಪಿ-ಆರೆಸ್ಸೆಸ್ ಕುತಂತ್ರ

ಕೇರಳದ ಎಲ್‌ಡಿಎಫ್ ಸರಕಾರ ಒಂದು ವರ್ಷವನ್ನು ಪೂರ್ಣಗೊಳಿಸುತ್ತಿರುವ ವೇಳೆಗೆ ತನ್ನ ಚುನಾವಣಾ ಪ್ರಣಾಳಿಕೆಯನ್ನು ಒಂದೊಂದಾಗಿ ಜಾರಿಗೊಳಿಸುತ್ತಿರುವಾಗ ಬಿಜೆಪಿ-ಆರೆಸ್ಸೆಸ್ ಈ ಸರಕಾರವನ್ನು ಅಸ್ಥಿರಗೊಳಿಸಲು ರಾಜ್ಯಪಾಲರನ್ನು ಬಳಸಲು ಮುಂದಾಗಿದೆ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹದಗೆಡುತ್ತಿದೆ, ಆದ್ದರಿಂದ ಸಾಮಾನ್ಯವಾಗಿ ಗಡಿಪ್ರದೇಶಗಳಲ್ಲಿ ಬಳಸುವ, ಈಗ ಕರಾಳ ಶಾಸನವೆಂದು ಕುಖ್ಯಾತವಾಗಿರುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ (ಎಎಫ್‌ಎಸ್‌ಪಿಎ) ಯನ್ನು ಲಾಗೂ ಮಾಡಬೇಕು ಎಂಬ ಹಾಸ್ಯಾಸ್ಪದ ಬೇಡಿಕೆಯನ್ನು ಬಿಜೆಪಿ ಮುಖಂಡರು ರಾಜ್ಯಪಾಲರ ಮುಂದಿಟ್ಟಿದ್ದಾರೆ ಎಂದು ವರದಿಯಾಗಿದೆ.

ಇದನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಕಾನೂನು-ವ್ಯವಸ್ಥೆ ರಾಜ್ಯ ಅಧಿಕಾರ ವ್ಯಾಪ್ತಿಯೊಳಕ್ಕೆ ಬರುವ ವಿಷಯ ಎಂಬುದನ್ನು ಬಿಜೆಪಿ ಮುಖಂಡರಿಗೆ ನೆನಪಿಸಿದ್ದಾರೆ.

ಸಿಪಿಐ(ಎಂ) ಕಣ್ಣೂರಿನಲ್ಲಿ ಶಾಂತಿ ನೆಲೆಗೊಳ್ಳಬೇಕೆಂದು ಬಯಸುತ್ತದೆ. ಇದಕ್ಕಾಗಿ ತಾನೇ ಮುತುವರ್ಜಿ ವಹಿಸಿದೆ. ಮುಖ್ಯಮಂತ್ರಿಗಳು ಕರೆದ ಸಭೆಯಲ್ಲಿ ಆರೆಸ್ಸೆಸ್-ಬಿಜೆಪಿ ಮತ್ತು ಸಿಪಿಐ(ಎಂ) ನಡುವೆ ಈ ಬಗ್ಗೆ ಸಂವಾದವನ್ನು ಏರ್ಪಡಿಸಲು ಪ್ರಯತ್ನಿಸಲಾಗಿದೆ. ಸಿಪಿಐ(ಎಂ) ಕಾರ್ಯಕರ್ತರು ಯಾವುದೇ ಸಂದರ್ಭದಲ್ಲಿ ಉದ್ರೇಕಿತರಾಗುವುದಿಲ್ಲ, ರಾಜಕೀಯ ಹಿಂಸಾಚಾರಕ್ಕೆ ಇಳಿಯುವುದಿಲ್ಲ ಎಂಬ ನಿಲುವಿಗೆ ಬದ್ಧರಾಗಿದ್ದಾರೆ ಎಂದು ಕೊಡಿಯೇರಿಯವರು ಹೇಳಿದ್ದಾರೆ.

ಈ ನಡುವೆ ಬಿಜೆಪಿ ರಾಜ್ಯ ಅಧ್ಯಕ್ಷರ ಟ್ವಿಟರ್‌ನಲ್ಲಿ ಕಣ್ಣೂರಿನಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಸಾವನ್ನು ಸಿಪಿಐ(ಎಂ) ಕಾರ್ಯಕರ್ತರು ಸಂತೋಷದಿಂದ ಆಚರಿಸುತ್ತಿದ್ದಾರೆ ಎಂದು ಹೇಳುವ ಹುಸಿ ವೀಡಿಯೋವನ್ನು ಹಾಕಿದ್ದಾರೆ ಎಂಬ ಆಪಾದನೆಯ ಮೇಲೆ ಎಫ್‌ಐಆರ್ ಹಾಕಲಾಗಿದ ಎಂದು ವರದಿಯಾಗಿದೆ.

ಕುಲಾಂತರಿ ಸಾಸಿವೆಯ ವಾಣಿಜ್ಯ ಉತ್ಪಾದನೆಗೆ ಶಿಫಾರಸು: ಎಐಕೆಎಸ್ ಆತಂಕ
"ಕಾರ್ಪೊರೇಟ್‌ಗಳ ಪ್ರಯೋಜನವಲ್ಲ ಜನಗಳ, ಪರಿಸರದ ಮತ್ತು ರೈತರ ಹಿತಗಳು ಮುಖ್ಯವಾಗಬೇಕು"

ಜೆನೆಟಿಕ್ ಇಂಜಿನಿಯರಿಂಗ್ ಮೌಲ್ಯನಿರ್ಣಯ ಸಮಿತಿ(ಜಿಇಎಸಿ) ಕುಲಾಂತರಿ ಸಾಸಿವೆಯ ವಾಣಿಜ್ಯ ಉತ್ಪಾದನೆಗೆ ಅವಕಾಶ ನೀಡಬೇಕು ಎಂದು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿರುವ ಬಗ್ಗೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಆತಂಕ ವ್ಯಕ್ತಪಡಿಸಿದೆ. ಈ ವಿಷಯದ ಬಗ್ಗೆ ಆರೋಗ್ಯ ಮತ್ತು ಪರಿಸರ ಅಪಾಯ ಕುರಿತಂತೆ ವಿವಿಧ ಸಂಘಟನೆಗಳು ಹಾಗೂ ವ್ಯಕ್ತಿಗಳು ವ್ಯಕ್ತಪಡಿಸಿರುವ ಸಂದೇಹಗಳನ್ನು ನಿವಾರಿಸಿದ ನಂತರವೇ ಸರಕಾರ ಇದನ್ನು ನಮ್ಮ ದೇಶದ ಗದ್ದೆಗಳಲ್ಲಿ ಬಳಸಲು ಬಿಡಬೇಕು ಎಂದು ಅದು ಆಗ್ರಹಿಸಿದೆ.

ಎಐಕೆಎಸ್ ಕೃಷಿಯಲ್ಲಿ ಯಾವುದೇ ರೀತಿಯಲ್ಲಿ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಬಳಕೆಯನ್ನು ಮೇಲ್ದರ್ಜೆಗೆ ಏರಿಸುವುದನ್ನು ವಿರೋಧಿಸುವುದಿಲ್ಲ. ಆದರೆ ಹೀಗೆ ಮಾಡುವಾಗ ಕೋಟ್ಯಂತರ ಜನಗಳ ಜೀವ, ಪರಿಸರ ಮತ್ತು ರೈತರ ಜೀವನಾಧಾರಗಳ ಬಗ್ಗೆ ಉಪೇಕ್ಷೆ ಆಗದಂತೆ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ. ಸರಕಾರ ಸಾರ್ವಜನಿಕ ಹಿತಗಳನ್ನು ಅಪಾಯಕ್ಕೊಡ್ಡಿ ಕೃಷಿ-ರಾಸಾಯನಿಕ ವ್ಯವಹಾರದಲ್ಲಿರುವ ಕಾರ್ಪೊರೇಟ್‌ಗಳಿಗೆ ಪ್ರಯೋಜನ ಒದಗಿಸುವಂತಾಗಬಾರದು ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಕುಲಾಂತರಿ ಸಾಸಿವೆ ಭಾರೀ ಪ್ರಮಾಣದಲ್ಲಿ ಸಸ್ಯನಾಶಕಗಳನ್ನು ಹೀರಿಕೊಳ್ಳುತ್ತದೆ. ಇದರಲ್ಲಿರುವ ನರಗಳಿಗೆ ಸಂಬಂಧಪಟ್ಟ ಜೀವ ವಿಷಾಣು ಗ್ಲುಫೋಸಿನೇಟ್ ಬಗ್ಗೆ, ಅದು ಎಷ್ಟು ಪ್ರಮಾಣದಲ್ಲಿರುತ್ತದೆ, ಅದರಿಂದ ತೊದರೆಯಾಗದಂತೆ ಆರೋಗ್ಯ ಸುರಕ್ಷಿತತೆಯ ಕ್ರಮಗಳೇನು, ಪರಿಸರದ ಮೇಲೆ ಅದರ ಪ್ರಭಾವ ಏನು, ನಿಸರ್ಗದಲ್ಲಿ ಸಮತೋಲನದ ಮೇಲೆ ಪರಿಣಾಮಗಳೇನು ಇತ್ಯಾದಿಗಳಲ್ಲಿ ಆಗಿರುವ ಸಂಶೋಧನೆಗಳ ಸೂಕ್ತ ಮಾಹಿತಿಗಳನ್ನು ಜಿಇಎಸಿ ಒದಗಿಸಿಲ್ಲ. ಈ ಹಿಂದೆ ಕುಲಾಂತರಿ ಹತ್ತಿಯಲ್ಲಿ ಭಾರತದ ರೈತರಿಗೆ ಬಹಳ ಕಹಿ ಅನುಭವಗಳಾಗಿವೆ ಎಂದು ಎಐಕೆಎಸ್ ನೆನಪಿಸಿದೆ.

ಈ ಸಾಸಿವೆ ಬೀಜದಲ್ಲಿರುವ ಸಸ್ಯನಾಶಕವನ್ನು ಸಿಂಪಡಿಸಿದರೆ ಅದರಲ್ಲಿ ರಾಸಾಯನಿಕ ವಿಷ ಎಲ್ಲ ರೀತಿಯ ಜೀವ ಸ್ವರೂಪಗಳನ್ನು ನಾಶ ಪಡಿಸಬಲ್ಲದು, ಅದು ಪರಿಸರ ಮತ್ತು ಜೀವ ವೈವಿಧ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತದ್ದು. ಇಂತಹ ವಿಷಗಳನ್ನು ಹೊಂದಿರುವ ಬೆಳೆಗಳು ಉಂಟು ಮಾಡಬಹುದಾದ ದೀರ್ಘಾವಧಿಯ ಪರಿಣಾಮಗಳನ್ನು ಪರಿಶೀಲಿಸಬೇಕಾಗಿದೆ. ಕುಲಾಂತರಿ ಸಾಸಿವೆಗೆ ಸಂಬಧಿಸಿದಂತೆ ಇದನ್ನು ಮೂರು ತಿಂಗಳಿಗೂ ಹೆಚ್ಚು ಕಾಲ ಸೇವಿಸಿದ ಪ್ರಾಣಿಗಳ ರಕ್ತ ವಿಶ್ಲೇಷಣೆ ನಡೆಸಿದ ವರದಿಗಳೇನೂ ಇಲ್ಲ.

ಭಾರತದಲ್ಲಿ ಸಾಸಿವೆಯನ್ನು ಎಣ್ಣೆ ತೆಗೆಯಲು ಮತ್ತಿತರ ವಾಣಿಜ್ಯ ಉದ್ದೇಶಗಳಿಗೆ ಮಾತ್ರವೇ ಅಲ್ಲ, ಸಾಸಿವೆ ಬೀಜ ಮತ್ತು ಎಲೆಗಳನ್ನು ವಿವಿಧ ತಿಂಡಿ-ತಿನಸುಗಳಲ್ಲಿ ನೇರವಾಗಿ ಸೇವಿಸಲಾಗುತ್ತದೆ., ಆಯುರ್ವೇದ ಔಷಧಿಗಳಲ್ಲೂ ಬಳಸಲಾಗುತ್ತದೆ. ಆದ್ದರಿಂದ ಆರೋಗ್ಯದ ಸುರಕ್ಷಿತತೆಯ ಪ್ರಶ್ನೆ ಹೆಚ್ಚು ಮುಖ್ಯದ್ದಾಗುತ್ತದೆ. ಇದರಲ್ಲಿ ನೀರು ಕೂಡ ಕಲುಷಿತಗೊಳ್ಳುವ ಅಪಾಯವಿದೆ.

ಅಲ್ಲದೆ ಈ ಕುಲಾಂತರಿ ಬೀಜಗಳು ಕೃಷಿ-ರಾಸಾಯನಿಕ ಕಾರ್ಪೊರೇಟ್‌ಗಳಿಗೆ ಪೇಟೆಂಟ್ ರಕ್ಷಣೆ ಒದಗಿಸಿವುದರಿಂದ ಹಳೆಯ ದೇಶೀ ಸಾಸಿವೆಯನ್ನು ಹಿಂಡಿ ಹಿಪ್ಪೆಮಾಡುತ್ತವೆ, ಈ ಬೆಳೆಗೆ ಬೇಕಾಗುವ ಬೀಜಗಳು ಮತ್ತು ರಸಗೊಬ್ಬರಗಳಲ್ಲಿ ಅವಕ್ಕೆ ಗುತ್ತೇದಾರಿಕೆಯೂ ಸಿಗುತ್ತದೆ.

ಇದಲ್ಲದೆ ಕೃಷಿ ರಾಜ್ಯಪಟ್ಟಿಯಲ್ಲಿರುವ ವಿಷಯ. ಆದ್ದರಿಂದ ಕೇಂದ್ರ ಸರಕಾರ ಈ ಕುರಿತ ನಿರ್ಧಾರ ಕೈಗೊಳ್ಳುವ ಮೊದಲು ಪ್ರತಿಯೊಂದು ರಾಜ್ಯ ಸರಕಾರದೊಡನೆ ಸಮಾಲೋಚನೆ ನಡೆಸಬೇಕಾಗುತ್ತದೆ ಎಂದೂ ಎಐಕೆಎಸ್ ನೆನಪಿಸಿದೆ.

ವಿಕಲಾಂಗರ ಹಕ್ಕುಗಳ ಕಾಯ್ದೆಯ ಆಶಯವನ್ನು ಬಿಂಬಿಸದ ನಿಯಮಗಳು
ಸಂಸತ್ತಿನಲ್ಲಿ ನೀಡಿದ ಆಶ್ವಾಸನೆಯನ್ನು ಪಾಲಿಸಿ – ಮಂತ್ರಿಗಳಿಗೆ ಯೆಚೂರಿ ಪತ್ರ

2016ರ ಚಳಿಗಾಲದ ಅಧಿವೇಶನದಲ್ಲಿ ವಿಕಲತೆಗಳಿರುವ ವ್ಯಕ್ತಿಗಳ ಹಕ್ಕುಗಳ ಮಸೂದೆಯ ಅಂಗೀಕಾರ ಬಿಟ್ಟು ಬೇರೆ ಯಾವುದೇ ಶಾಸನಗಳನ್ನು ಕುರಿತ ಕಲಾಪಗಳು ನಡೆದಿರಲಿಲ್ಲ. ಪಕ್ಷಬೇಧವಿಲ್ಲದೆ ಈ ಮಸೂದೆ ಕಾಯ್ದೆಯಾಗಲು ಎಲ್ಲರೂ ಬೆಂಬಲ ನೀಡಿ ಈ ಕಾಯ್ದೆ ರೂಪಿತಗೊಂಡಿದೆ. ಏಕೆಂದರೆ ವಿಶ್ವಸಂಸ್ಥೆ ಈ ಕುರಿತ ಅಧಿನಿರ್ಣಯವನ್ನು ಅಂಗೀಕರಿಸಿ ಒಂದು ದಶಕವಾದ ಮೇಲಷ್ಟೇ ಬಹಳ ವಿಳಂಬದಿಂದ ನಮ್ಮಲ್ಲಿ ಈ ಕಾಯ್ದೆ ಬಂದಿದೆ.

ಆದರೆ ಈ ಕಾಯ್ದೆಯ ಅಡಿಯಲ್ಲಿ ನಿಯಮಗಳನ್ನು ರೂಪಿಸುವಾಗ ಈ ಕಾಯ್ದೆಯ ಮೂಲ ಆಶಯಗಳನ್ನು ಬಿಂಬಿಸದ ಕೆಲವು ನಿಯಮಗಳನ್ನು ರಚಿಸಲಾಗಿದೆ. ಅಲ್ಲದೆ ಈ ನಿಯಮಗಳನ್ನು ರೂಪಿಸುವ ಸಮಿತಿಯಲ್ಲಿ ಈ ಕ್ಷೇತ್ರದಲ್ಲಿ ಬಹಳ ಸಮಯದಿಂದ ಸಕ್ರಿಯವಾಗಿರುವ ಸಂಘಟನೆಗಳಿಗೆ ಸರಿಯಾದ ಪ್ರಾತಿನಿಧ್ಯ ನೀಡಿಲ್ಲ ಎಂಬ ದೂರುಗಳೂ ಇವೆ ಎಂದು ರಾಜ್ಯಸಭಾ ಸದಸ್ಯರೂ ಆಗಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಿ ಥಾವರ್‌ಚಂದ್ ಗೆಹ್ಲೋಟ್‌ರವರಿಗೆ ಪತ್ರ ಬರೆದು ಇದನ್ನು ಸರಿಪಡಿಸುವಂತೆ ಕೋರಿದ್ದಾರೆ.

ನಿರ್ದಿಷ್ಟವಾಗಿ ಮಸೂದೆಯ ವಿಭಾಗ 3ರಲ್ಲಿನ ಉಪವಿಭಾಗ 3 ರಲ್ಲಿ ವಿಕಲತೆ ಆಧಾರದಲ್ಲಿ ನೇಮಕಗಳಲ್ಲಿ ಯಾವುದೇ ಪಕ್ಷಪಾತ ನಡೆಸಲು ಅವಕಾಶವಾಗದಂತೆ ನೋಡಿಕೊಳ್ಳಲು ಯೆಚೂರಿಯವರು ತಿದ್ದುಪಡಿಯನ್ನು ಸೂಚಿಸಿದ್ದರು. ಆದರೆ ಈ ಕುರಿತು ಮಂತ್ರಿಗಳು ಆಶ್ವಾಸನೆ ನೀಡಿದ್ದರಿಂದ ಈ ತಿದ್ದುಪಡಿಗೆ ಅವರು ಆಗ್ರಹ ಪಡಿಸಿರಲಿಲ್ಲ. ಆದರೆ ಈಗ ರೂಪಿಸಿರುವ ನಿಯಮಗಳಲ್ಲಿ ಈ ಆಶ್ವಾಸನೆಯತ್ತ ಗಮನ ನೀಡಿಲ್ಲ.

ಈ ಉಪವಿಭಾಗ ಒಂದು "ನ್ಯಾಯಬದ್ಧ ಉದ್ದೇಶ ಸಾಧನೆಗೆ' ಇಂತಹ ಪಕ್ಷಪಾತ ಮಾಡಬಹುದು ಎಂಬರ್ಥ ಬರುವಂತಿದೆ. ಇದನ್ನು ದುರುಪಯೋಗ ಪಡಿಸಿಕೊಳ್ಳಲು ಬಿಡುವುದಿಲ್ಲ ಎಂದು ಮಂತ್ರಿಗಳು ಆಶ್ವಾಸನೆ ನೀಡಿದ್ದರೂ, ಈ ಕುರಿತು ನಿಯಮಗಳನ್ನು ರೂಪಿಸುವಾಗಲೂ ಇದು ಹಾಗೆಯೇ ಉಳಿದಿದೆ, ಮಂತ್ರಿಗಳ ಆಶ್ವಾಸನೆಯನ್ನು ಪಾಲಿಸಿಲ್ಲ. 'ನ್ಯಾಯಬದ್ಧ ಉದ್ದೇಶ ಸಾಧನೆ' ಎಂದರೇನು ಎಂದು ಸ್ಪಷ್ಟವಾಗಿ ನಿರೂಪಿಸದೆ, ಇದರಿಂದ ತೊಂದರೆಗೊಳಗಾದವರು ಅದು ನ್ಯಾಯಬದ್ಧ ಅಲ್ಲ ಎಂದು ಸಾಬೀತು ಪಡಿಸಬಹುದು, ಅಥವ ಈ ಕುರಿತ ಮುಖ್ಯ ಆಯುಕ್ತರು ಅಥವ ರಾಜ್ಯ ಆಯುಕ್ತರಿಗೆ ಅಹವಾಲು ಸಲ್ಲಿಸಬಹುದು ಎಂದಷ್ಟೇ ಹೇಳಲಾಗಿದೆ. ಸಂಬಂಧಪಟ್ಟ ವ್ಯಕ್ತಿಗಳ ಮೇಲೆಯೇ ಈ ರೀತಿ ಹೊಣೆ ಹೊರಿಸುವುದು ಸರಿಯಲ್ಲ, ಈ ರೀತಿ ಸಾಬೀತು ಪಡಿಸುವ ಹೊಣೆ ನೇಮಕ ಮಾಡುವವರದ್ದು ಎಂದಾಗಬೇಕು ಎಂದು ಯೆಚುರಿಯವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಇದು ನಮ್ಮ ಸಮಾಜದಲ್ಲಿ ಅತ್ಯಂತ ಅಂಚಿಗೆ ತಳ್ಳಲ್ಪಟ್ಟಿರುವ ಒಂದು ವಿಭಾಗಕ್ಕೆ ಕೆಲವು ಹಕ್ಕುಗಳ ಆಶ್ವಾಸನೆ ನೀಡುವ ಕಾಯ್ದೆಗೆ ಸಂಬಂಧಪಟ್ಟದ್ದಾದ್ದರಿಂದ ಅದನ್ನು ಅಂತಿಮಗೊಳಿಸುವ ಮೊದಲು ಸಂಬಂಧಪಟ್ಟ ಎಲ್ಲರನ್ನೂ ಒಳಗೊಳ್ಳುವುದು ಅಗತ್ಯ ಎಂದು ಯೆಚೂರಿಯವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಗಣಿ ಹಗರಣಗಳೂ ಸಿಬಿಐ ದಾಳಿಗಳೂ

ಸಂಪಾದಕೀಯ

ಬಳ್ಳಾರಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ 'ಜಂತಕಲ್ ಗಣಿ ಕಂಪೆನಿ'ಗೆ ಅಕ್ರಮ ಗಣಿಗಾರಿ–ಕೆಗೆ ಅವಕಾಶ ನೀಡಿದ್ದ ಆರೋಪದ ಪ್ರಕರಣದಲ್ಲಿ ಐಎಎಸ್ ಅಧಿಕಾರಿ ಗಂಗಾರಾಮ್ ಬಡೇರಿಯಾ ಅವರನ್ನು ಎಸ್ಐಟಿ (ವಿಶೇಷ ತನಿಖಾ ತಂಡ) ಅಧಿಕಾರಿಗಳು ಮೇ 15ರಂದು ಬಂಧಿಸಿದ್ದಾರೆ. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ವರದಿಯಲ್ಲಿ ಹೆಸರಿಸಿರುವ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಮೂರು ತಿಂಗಳಲ್ಲಿ ವರದಿ ನೀಡುವಂತೆ ಸುಪ್ರೀಂ ಕೋರ್ಟ್ ಇದೇ ಮಾರ್ಚಿನಲ್ಲಿ ಎಸ್ಐಟಿಗೆ ನಿರ್ದೇಶನ ನೀಡಿತ್ತು. 1989ರ ತಂಡದ ಐಎಎಸ್ ಅಧಿಕಾರಿಯಾಗಿರುವ ಬಡೇರಿಯಾ, ಸದ್ಯ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಆಗಿದ್ದಾರೆ. ರಾಜ್ಯ ರಾಜಕಾರಣದಲ್ಲಿ ಬಿರುಗಾಳಿ ಎಬ್ಬಿಸಿದ ಅಕ್ರಮ ಗಣಿಗಾರಿಕೆ ಹಗರಣದ ತನಿಖೆ ನಡೆಸುತ್ತಿರುವ ಎಸ್ಐಟಿ ಬಂಧಿಸಿರುವ ಮೊದಲ ಐಎಎಸ್ ಅಧಿಕಾರಿ ಬಡೇರಿಯಾ. ಈ ಹಿಂದೆ, ನಿವೃತ್ತ ಐಎಎಸ್ ಅಧಿಕಾರಿಗಳಾದ ಶಮೀಮ್ ಬಾನು, ಶಿವಲಿಂಗಮೂರ್ತಿ ಅವರನ್ನು ಸಿಬಿಐ ಬಂಧಿಸಿತ್ತು.

ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರ ನೇತೃತ್ವದಲ್ಲಿ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆದಿತ್ತು. ಭಾಗ–2ರ ವರದಿಯಲ್ಲಿ ಗಣಿ ಉದ್ಯಮಿ ವಿನೋದ್ ಗೋಯಲ್ ಮಾಲೀಕತ್ವದ ಜಂತಕಲ್ ಎಂಟಪ್ರೈಸಸ್ ನಡೆಸಿದ ಅಕ್ರಮ ಅದಿರು ಸಾಗಣೆ ಕುರಿತು ಉಲ್ಲೇಖಿಸಲಾಗಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಕಬ್ಬಿಣದ ಅದಿರನ್ನು ಸಾಗಿಸಲು ಅನುಮತಿ ನೀಡುವಂತೆ 2007ರಲ್ಲಿ ಈ ಕಂಪೆನಿ ಕರ್ನಾಟಕ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಇದಕ್ಕೆ ಪೂರಕವಾಗಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಪಡೆಯಲಾಗಿತ್ತು ಎನ್ನಲಾದ ನಿರಾಕ್ಷೇಪಣಾ–ಪತ್ರವನ್ನು ಅರ್ಜಿ ಜೊತೆ ಲಗತ್ತಿಸಲಾಗಿತ್ತು. ಆಗ ಗಣಿ ಇಲಾಖೆ ನಿರ್ದೇಶಕರಾಗಿದ್ದ ಗಂಗಾರಾಂ ಬಡೇರಿಯಾ ಅವರು ಈ ಕಂಪೆನಿಗೆ ಅನುಮತಿ ನೀಡಲು ರೂ. 10 ಲಕ್ಷ ಲಂಚ ಪಡೆದಿರುವುದನ್ನು ಎಸ್ಐಟಿ ಅಧಿಕಾರಿಗಳು ಪತ್ತೆ ಹಚ್ಚಿದ್ದರು. ಜಂತಕಲ್ ಮಾಲೀಕ ವಿನೋದ್ ಗೋಯಲ್ ರೂ. 10 ಲಕ್ಷ ಮೊತ್ತದ ಚೆಕ್ ಅನ್ನು ಬಡೇರಿಯಾ ಅವರ ಪುತ್ರ ಗಗನ್ ಬಡೇರಿಯಾ ಹೆಸರಿಗೆ ನೀಡಿದ್ದರು. ಈ ಮೊತ್ತ ಮಗನ ಖಾತೆಗೆ ವರ್ಗಾವಣೆಯಾಗಿತ್ತು.

'ಲಂಚ ಪಡೆದ ಬಡೇರಿಯಾ ಅರಣ್ಯ ಮತ್ತು ಪರಿಸರ ಸಚಿವಾಲಯದ ನಕಲಿ ನಿರಾಕ್ಷೇಪಣಾ–ಪತ್ರವನ್ನು–ಆಧರಿಸಿ, ಅದಿರು ಸಾಗಿಸಲು ಅನುಮತಿ ನೀಡಿದ್ದರು' ಎಂದು ಎಸ್ಐಟಿ ಅಧಿಕಾರಿಗಳು ತಿಳಿಸಿದ್ದಾರೆ. ಈ ಅನುಮತಿ ಆಧರಿಸಿ ಕಂಪೆನಿ 1.70 ಲಕ್ಷ ಟನ್ ಅದಿರನ್ನು ಅಕ್ರಮವಾಗಿ ಸಾಗಿಸಿತ್ತು. ಅರಣ್ಯ ಸಚಿವಾಲಯದ ನಿರಾಕ್ಷೇಪಣಾ?ಪತ್ರ ನಕಲಿ ಎಂಬುದು ಪತ್ತೆಯಾದಾಗ, ಚಿತ್ರದುರ್ಗ ಜಿಲ್ಲೆಯ ವಲಯ ಅರಣ್ಯ ಅಧಿಕಾರಿ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಇದೇ ಪ್ರಕರಣದಲ್ಲಿ ಎಚ್.ಡಿ. ಕುಮಾರಸ್ವಾಮಿ ಮತ್ತು ಧರಂಸಿಂಗ್ ಅವರ ಹೆಸರು ಕೂಡ ಇದೆ. ಎಸ್.ಎಂ. ಕೃಷ್ಣ ವಿರುದ್ಧ ತನಿಖೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಗಂಗಾರಾಂ ಬಡೇರಿಯಾ, 'ಗಣಿ ಗುತ್ತಿಗೆ ನವೀಕರಣ ಹಾಗೂ ಅದಿರು ಸಾಗಣೆ ಅನುಮತಿ ನೀಡಿದ ಸಮಯದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ, ಒತ್ತಡ ಹೇರಿದ್ದರು' ಎಂದು ಹೇಳಿಕೆ ನೀಡಿದ್ದರು. ಈ ಕಾರಣಕ್ಕೆ ಕುಮಾರಸ್ವಾಮಿ ಅವರನ್ನೂ ಮೇ 18ರಂದು ವಿಚಾರಣೆಗೆ ಒಳಪಡಿಸಲಾಗಿದೆ.. ಬಂಧನದ ಸಾಧ್ಯತೆ ಇದ್ದಿದ್ದರಿಂದ, ಈ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಕುಮಾರಸ್ವಾಮಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ಸಿಟಿ ಸಿವಿಲ್ ನ್ಯಾಯಾಲಯ, ಅವರಿಗೆ ಈಗಾಗಲೇ ಏಳು ದಿನಗಳ (ಮೇ24ರವರೆಗೆ) ಷರತ್ತು ಬದ್ಧ ತಾತ್ಕಾಲಿಕ ಜಾಮೀನು ನೀಡಿದೆ. ರಾಜ್ಯ ಸರಕಾರ ಅಧಿಕಾರಿಗಳ ಮೇಲೆ ಪ್ರಕರಣಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸಿತು ಎಂಬ ಆಪಾದನೆಗಳೂ ಕೇಳಿ ಬಂದಿವೆ.

ಗಣಿಗಾರಿಕೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ವರದಿಯಲ್ಲಿ 'ಖನಿಜ ಮತ್ತು ಲೋಹ ಮಾರಾಟ ನಿಗಮ' (ಎಂಎಂಟಿಸಿ) ನಿಗದಿಪಡಿಸಿದ್ದ ಕ್ಕಿಂತಲೂ ಕಡಿಮೆ ದರಕ್ಕೆ ಅದಿರು ಮಾರಾಟ ಮಾಡಿ, ರಾಜ್ಯ ಸರ್ಕಾರಿ ಸ್ವಾಮ್ಯದ 'ಮೈಸೂರು ಮಿನರಲ್ಸ್'ಗೆ (ಎಂಎಂಎಲ್) ಭಾರಿ ನಷ್ಟ ಮಾಡಿದ್ದಾರೆ ಎಂಬುದರ ಬಗ್ಗೆಯೂ ಉಲ್ಲೇಖ ಇದೆ. ವರದಿಯಲ್ಲಿ ಹೆಸರಿಸಲಾದ ಆರು ಹಾಲಿ ಮತ್ತು ನಿವೃತ್ತ ಅಧಿಕಾರಿಗಳ ಕೊರಳಿಗೆ ಅಕ್ರಮ ಗಣಿಗಾರಿಕೆ ಉರುಳು ಬಿಗಿದುಕೊಳ್ಳುವ ಸಾಧ್ಯತೆಯಿದೆ. ವಿ. ಉಮೇಶ್, ಎಂ.ಆರ್.ಪೆರುಮಾಳ್, ಕೆ.ಎಸ್. ಮಂಜುನಾಥ್, ಡಿ.ಎಸ್. ಅಶ್ವಥ್, ಜೀಜಾ ಹರಿಸಿಂಗ್, ಮಹೇಂದ್ರ ಜೈನ್ ಹಾಗೂ ಜಿ.ವಿ. ಕೊಂಗವಾಡ ಅವರನ್ನು ವರದಿಯಲ್ಲಿ ಹೆಸರಿಸಲಾಗಿದೆ. ಕರ್ತವ್ಯ ಲೋಪ ಎಸಗಿರುವ ಈ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡು, ಸಂಸ್ಥೆಗೆ ಆಗಿರುವ ನಷ್ಟ ತುಂಬಿಕೊಳ್ಳುವಂತೆ ಲೋಕಾಯುಕ್ತ ವರದಿ ಶಿಫಾರಸು ಮಾಡಿದೆ.

ರಾಜ್ಯದ ಗಣಿ ಸಂಪನ್ಮೂಲಗಳನ್ನು ಲೂಟಿ ಮಾಡಿದ, ಪರಿಸರವನ್ನು ಹಾಳುಗಡೆವಿದ ಹಲವು ಹಗರಣಗಳಲ್ಲಿ ಲೋಕಾಯುಕ್ತ ಸಂತೋಷ ಹೆಗಡೆಯವರ ವರದಿಯಲ್ಲಿ ಹೆಸರಿಸಲಾದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ವಿರುದ್ಧ 10 ವರ್ಷಗಳ ದೀರ್ಘ ವಿಳಂಬದ ನಂತರವಾದರೂ, ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುತ್ತಿರುವುದು ಸ್ವಾಗತಾರ್ಹ. ರಾಜ್ಯದ ಗಣಿ ಹಗರಣಗಳಲ್ಲಿ ಮೂರೂ ಪ್ರಮುಖ ಪಕ್ಷಗಳ ನಾಯಕರೂ ಭಾಗಿಯಾಗಿದ್ದರು. ಶಾಮೀಲಾಗಿದ್ದರು. ತನಿಖೆ ಕ್ರಮಗಳು ಆಯ್ದ ಕೆಲವು ಪ್ರಕರಣಗಳಲ್ಲಿ ಮಾತ್ರ ನಡೆಯುತ್ತಿವೆಯೇ ಎಂಬ ಅನುಮಾನ ಏಳುವುದು ಸಹಜ. ಇದೇ ಸಮಯದಲ್ಲಿ ಗಣಿ ಹಗರಣಕ್ಕೆ ಇನ್ನೊಂದು ಹೆಸರು ಎಂದು ಕುಪ್ರಸಿದ್ಧವಾದ ಜನಾರ್ದನ ರೆಡ್ಡಿ ಮೇಲಿನ ಸುಮಾರು ಒಟ್ಟು 35 ಸಾವಿರ ಕೋಟಿ ರೂ. ಮೊತ್ತದ ಹಲವು ಹಗರಣದ ಕೇಸುಗಳನ್ನು ಸಿಬಿಐ ಮುಚ್ಚುವ ಹಿಂತೆಗೆಯುತ್ತಿರುವುದು, ತನಿಖೆ/ದೋಷಾರೋಪಣೆ ವಿಳಂಬ ಮಾಡುತ್ತಿರುವುದು ವರದಿಯಾಗುತ್ತಿದೆ.

ಕರ್ನಾಟಕ ಮತ್ತು ಗೋವಾದ ಬಂದರುಗಳ ಮೂಲಕ ಅಕ್ರಮ ಗಣಿ ಸಾಗಾಣಿಕೆ ಮಾಡಿದ ಹಲವು ಕೇಸುಗಳನ್ನು ಮುಚ್ಚಲು ಸಿಬಿಐ ಶಿಫಾರಸು ಮಾಡಿದೆ. ತನ್ನ ತನಿಖೆಯ ನಂತರ "ಯಾವುದೇ ಪುರಾವೆ ಸಿಕ್ಕಿಲ್ಲ"ವೆಂದು ಸಿಬಿಐ ಕಾರಣ ಕೊಟ್ಟಿದೆ. ಸಿಬಿಐನ ಈ ಕ್ರಮಗಳ ಬಗ್ಗೆ ಮಾಜಿ ಲೋಕಾಯುಕ್ತ ಸಂತೋಷ ಹೆಗಡೆ ತೀವ್ರ ಆಕ್ರೋಶ ಹಾಗೂ ಆತಂಕ ವ್ಯಕ್ತ ಪಡಿಸಿದ್ದಾರೆ. ಬಂದರುಗಳಲ್ಲಿದ್ದ 2.4 ಲಕ್ಷ ಟನ್ ಎಲ್ಲಿ ಮಾಯವಾಯಿತು? ಹಾಗಿದ್ದರೆ ಮೂರು ವರ್ಷಗಳ ತನಿಖೆಯ ನಂತರ ಲೋಕಾಯುಕ್ತ ಸಂಗ್ರಹಿಸಿದ ಪುರಾವೆಗೆ ಬೆಲೆಯಿಲ್ಲವೇ ? – ಎಂದು ಹೆಗಡೆಯವರು ಖಾರವಾಗಿ ಪ್ರಶ್ನಿಸಿದ್ದಾರೆ. ಕರ್ನಾಟಕ ಮತ್ತು ಆಂದ್ರ ಪ್ರದೇಶ ರಾಜ್ಯಗಳಲ್ಲಿ ಜನಾರ್ದನ ರೆಡ್ಡಿ ಮೇಲಿನ 63 ಕೇಸುಗಳು ನಡೆಯುತ್ತಿವೆ. ಬಂದರುಗಳ ಮೂಲಕ ಅಕ್ರಮ ಗಣಿ ಸಾಗಾಣಿಕೆ ಮಾಡಿದ ಕೇಸುಗಳನ್ನು ಈಗಾಗಲೇ ಹೇಳಿದ ಹಾಗೆ "ಪುರಾವೆಗಳ ಅಭಾವ"ದಿಂದ ಮುಚ್ಚುವ ಪ್ರಕ್ರಿಯೆ ಸಾಗಿದೆ. ಸಿಬಿಐ ಬಳಿ ಇರುವ ಪ್ರಕರಣಗಳಲ್ಲಿ 28ರಲ್ಲಿ ಚಾರ್ಜ್ ಸೀಟ್ ಹಾಕಿದ್ದರೂ ಪ್ರಗತಿ ಬಹಳ ಮಂದಗತಿಯಲ್ಲಿದೆ. 10 ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಸಹ ಹಾಕಿಲ್ಲ. ಆಂಧ್ರಟ ಪ್ರದೇಶಥಲ್ಲಿ ನಡೆಯುತ್ತಿರುವ ಒಬಲಾಪುರಂ ಪ್ರಕರಣ 'ಅಂತರ–ರಾಜ್ಯ ಗಡಿ ವಿವಾದ"ದ ಕಾರಣಕ್ಕೆ ತನಿಖೆಯೇ ಆರಂಭವಾಗಿಲ್ಲ. ಯೆಡಿಯೂರಪ್ಪ ಅವರು ಭಾಗಿಯಾಗಿದ್ದ ಪ್ರಕರಣದಲ್ಲಿ ಅವರನ್ನು ಖುಲಾಸೆ ಮಾಡಲಾಗಿದೆ. ಜನಾರ್ದನ ರೆಡ್ಡಿ ವಿರುದ್ಧ ಇ.ಡಿ. ಹಾಕಿದ್ದ ಕೇಸುಗಳನ್ನು ಹೈಕೋರ್ಟ್ ತಾಂತ್ರಿಕ ಕಾರಣಗಳಿಗೆ ವಜಾ ಮಾಡಿದೆ. ಇ.ಡಿ. ಸುಪ್ರೀಂ ಕೋರ್ಟಿಗೆ ಅಪೀಲು ಹೋಗದೆ ಸುಮ್ಮನಿದೆ.

ಗಣಿ ಪ್ರಕರಣಗಳಲ್ಲಿ ಮೂರೂ ಪಕ್ಷಗಳ ಪ್ರಮುಖ ನಾಯಕರು ಶಾಮೀಲಾಗಿರುವುದರಿಂದ ನಿಜವಾಗಿಯೂ ಈ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ತೆಗದುಕೊಂಡು ಹೋಗುವ ಬದಲು, ಅದನ್ನು ರಾಜಕೀಯ ದಾಳವಾಗಿ ಬಳಸುವ ಸಾಧ್ಯತೆಯೇ ಹೆಚ್ಚು. ಇದಕ್ಕೆ ಬಿಜೆಪಿ ಕೇಂದ್ರ ಸರಕಾರವೇ ಮೇಲ್ಪಂಕ್ತಿ ಹಾಕಿದೆ. ಹಲವು ಬಲಿಗಳನ್ನು ತೆಗೆದುಕೊಂಡಿರುವ ಮಧ್ಯಯ ಪ್ರದೇಶದ ಬಿಜೆಪಿ ಮುಖ್ಯ ಮಂತ್ರಿಗಳೇ ಸಿಲುಕಿರುವ ಭೀಕರ ವ್ಯಾಪಂ ಹಗರಣದ ತನಿಖೆಯಲ್ಲಿ ಯಾವುದೇ ಪ್ರಗತಿ ಆಗಿಲ್ಲ. ಆದರೆ ವಿರೋಧ ಪಕ್ಷಗಳ ನಾಯಕರ/ ಅವರ ಸಂಬಂಧಿಕರ (ಉದಾ. ಲಾಲು ಪ್ರಸಾದ್ ಯಾದವ್, ಕಾರ್ತಿ ಚಿದಂಬರಂ0) ಮೇಲೆ ಏಕಾಏಕಿ ಸಿಬಿಐ, ಇ.ಡಿ. ದಾಳಿಗಳು ನಡೆದಿವೆ. ಇದರಲ್ಲಿ ಮೋದಿ ಸರಕಾರದ 3 ವರ್ಷಗಳ ಪೂರೈಕೆಯ ಸುತ್ತಮುತ್ತ, ಮಾಧ್ಯಸಮಗಳಲ್ಲಿ ಸರಕಾರದ ವೈಫಲ್ಯಗಳಿಂದ ಬೇರೆ ಕಡೆಗೆ ಗಮನ ತಿರುಗಿಸುವುದು ಉದ್ದೇಶವೆಂಬುದು ಢಾಳಾಗಿ ಕಾಣುತ್ತಿದೆ. ಕರ್ನಾಟಕದ ವಿಧಾನಸಭೆ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಇಂತಹ ದಾಳಿಗಳು ಬಹುಶಃ ಹೆಚ್ಚಲಿವೆ. ಗಣಿ ಹಗರಣದ ಎಲ್ಲಾ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವ ಬಗ್ಗೆ ಸಾರ್ವಜನಿಕ ಒತ್ತಡ ಹಾಕಬೇಕಾಗಿದೆ. ●



ಜೂನ್ 4 2017, ಮೈಸೂರು

ದೇಶ ಪ್ರೇಮಿ ಸಮಾವೇಶ ಏಕೆ ?

ಕಳೆದ ಸಾರ್ವತ್ರಿಕ ಚನಾವಣೆ ಸಂದರ್ಭದಲ್ಲಿ ಅಭಿವೃದ್ದಿಯ ಕನಸುಗಳನ್ನು ಬಿತ್ತಿ ಕೋಮುವಾದವನ್ನು ಅಂತರ್ಗಾಮಿ ಪ್ರಚಾರಕ್ಕೆ ಬಳಸಿಕೊಂಡು ಒಂದು ಬಲ ಪಂಥೀಯ ಪ್ರತಿಗಾಮಿ ಬಿ.ಜೆ.ಪಿ ಸರ್ಕಾರ ಕೇಂದ್ರದಲ್ಲಿ ಸ್ಥಾಪಿತವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಜನತೆಯನ್ನು ಘೋಷಣೆಗಳ ಮೂಲಕ, ಭಾವುಕ ಪ್ರಶ್ನೆಗಳ ಮೂಲಕ, ಹುಸಿ ರಾಷ್ಟ್ರವಾದದ ಮೂಲಕ, ದಿಕ್ಕು ತಪ್ಪಿಸುತ್ತಾ ಬಂದಿರುವ ನರೇಂದ್ರ ಮೋದಿಯವರ ಸರ್ಕಾರವು ಇಂದು ಜನರ ಬದುಕಿನ ಪ್ರಶ್ನೆಗಳಿಗೆ ಉತ್ತರಿಸುವ ಬದಲು ಜನರನ್ನು ಇನ್ನೂ ಸಂಕಷ್ಟಕ್ಕೆ ತಳ್ಳುವ ಕಾರ್ಪೋರೇಟ್ ಪರವಾದ ನೀತಿಗಳನ್ನು ಜಾರಿಗೊಳಿಸುತ್ತಿದೆ. ಪ್ರಶ್ನಿಸುವವರನ್ನು "ದೇಶ ದ್ರೋಹಿ" ಗಳೆಂದು ಬಿಂಬಿಸುವ ಮೂಲಕ ಜನರ ಪ್ರಜಾಸತ್ತಾತ್ಮಕ ಹಕುಗಳನ್ನು ದಮನಗೊಳಿಸಲಾಗುತ್ತಿದೆ. ದಲಿತರು, ಅಲ್ಪಸಂಖ್ಯಾತರ ಮೇಲೆ ನಿರಂತರ ಹತ್ಯೆ ದಾಳಿ ಕೊಲೆಗಳನ್ನು ಎಸಗಲಾಗುತ್ತಿದೆ. ಕೋಮುಗಲಭೆಗಳನ್ನು ಸೃಷ್ಟಿಸುವ ಕರ್ಮಠ ಹಿಂದು ಸಂಪ್ರದಾಯಗಳನ್ನೇ ದೇಶದ ಸಂಸ್ಕೃತಿಯೆಂದು ಬಿಂಬಿಸುವ ಮೂಲಕ ಮೋದಿಯವರ ಸರ್ಕಾರವು ತನ್ನ ಉದ್ದೇಶಿತ ರಹಸ್ಯ ಕಾರ್ಯಸೂಚಿಯನ್ನು ಅನಾವರಣಗೊಳಿಸಲು ಮುಂದಾಗುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕ್, ಚುನಾವಣಾ ಆಯೋಗಗಳಂತಹ ಸಂವಿಧಾನಿಕ ಸ್ವಾಯತ್ತ ಸಂಸ್ಥೆಗಳಲ್ಲಿ ಮಧ್ಯ ಪ್ರವೇಶ ಮಾಡಿ ಅವುಗಳನ್ನು ದುರ್ಬಳಕೆ ಮಾಡಲು ಹೊರಟಿದೆ. ಅಭಿವೃದ್ಧಿಯ ಕನಸುಗಳನ್ನು ಕೋಟ್ಯಾಂತರ ಯುವ ಮನಸ್ಸುಗಳಲ್ಲಿ ಬಿತ್ತಿ ರಾಜಕೀಯ ಲಾಭ ಪಡೆಯುವ ಭರದಲ್ಲಿ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆಯನ್ನು ಪ್ರಧಾನಿ ಮೋದಿಯವರು ನೀಡಿದರು. ಆದರೆ ಕಳೆದ ಮೂರು ವರ್ಷಗಳ ಸರ್ಕಾರದ ಪ್ರಗತಿ ಪತ್ರ ಇದಕ್ಕೆ ವ್ಯತಿರಿಕ್ತವಾಗಿದ್ದು ಕೇವಲ 1,35 ಲಕ್ಷ ಉದ್ಯೋಗಗಳು ಅದೂ ಅಸಂಪ್ರದಾಯಿಕ ಕ್ಷೇತ್ರಗಳಲ್ಲಿ ಸೃಷ್ಟಿಯಾಗಿರುವುದು ಬಹಿರಂಗವಾಗಿದೆ.

ಕಾರ್ಪೋರೇಟ್ ಬಂಡವಾಳಕ್ಕೆ ಪೂರಕವಾಗಿ ಕೋಮುವಾದವನ್ನು ಪ್ರತಿಪಾದಿಸಲಾಗುತ್ತಿದೆ. ಸಾಮಾಜಿಕ ಕ್ಷೋಭೆಯನ್ನು ಸೃಷ್ಟಿಸುವ ಮೂಲಕ

ಪುಟ 4 ಕ್ಕೆ

ತಪ್ಪು–ಒಪ್ಪು

ಜನಶಕ್ತಿಯ ಸಂಚಿಕೆ 21ರ (ಮೇ 15–21) ಮುಖಪುಟದ ಮಾಸ್ಟ್ ನಲ್ಲಿ ಪ್ರಕಟವಾದ ಚಿತ್ರ ಹೊಸದಾಗಿ ನೇಮಕವಾದ ಐ.ಸಿ.ಎಸ್.ಎಸ್. ಆರ್. ಅಧ್ಯಕ್ಷ ಪ್ರೊ. ಬ್ರಿಜ್ ಬಿಹಾರಿ ಕುಮಾರ್ ಅವರದಲ್ಲ. ತಪ್ಪಿಗಾಗಿ ವಿಷಾದಿಸುತ್ತೇವೆ. – ಸಂ.

ಮಾಗಡಿ: ನಾಗಶೆಟ್ಟಿಹಳ್ಳಿ ದಲಿತರ ಮೇಲೆ ದೌರ್ಜನ್ಯ ಸವರ್ಣೀಯ ಜಮಿನ್ದಾರರ ಅಟ್ಟಹಾಸ

ಬೆಂಗಳೂರು ಮಹಾನಗರದ ಅಂಚಿನಲ್ಲೇ ಇರುವ ಮಾಗಡಿ ತಾಲೂಕಿನ ನಾಗಶೆಟ್ಟಿಹಳ್ಳಿಯಲ್ಲಿ ಲಿಂಗಾಯತ ಸವರ್ಣಿಯರು ದಲಿತರ ಗುಡಿಸಲಿಗೆ ಬೆಂಕಿ ಇಟ್ಟಿದ್ದಾರೆ. ಅಂಬೇಡ್ಕರ್ ಭವನಕ್ಕಾಗಿ ನಿರ್ಮಿಸಿದ ಗುಡಿಸಲಲ್ಲಿ ಇದ್ದ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಬಾವಚಿತ್ರಕ್ಕೂ ಬೆಂಕಿ ಇಟ್ಟಿದ್ದಾರೆ. ಈ ಕ್ರೌರ್ಯ ನಡೆದಿದ್ದು 10 ಮೇ 2017 ರಂದು.

ಮಾಗಡಿ ತಹಸಿಲ್ದಾರರು 1978 ರಲ್ಲಿ ಮೇಲ್ ಜಾತಿ ಬಡವರು ಸೇರಿದಂತೆ 18 ಜನರಿಗೆ ಉಚಿತ ನಿವೇಶನದ ಹಕ್ಕುಪತ್ರ ನೀಡಿದ್ದಾರೆ. ಅದರಲ್ಲಿ 14 ಜನ ಪರಿಶಿಷ್ಟ ಜಾತಿಯ ಮಾದಿಗ ಜನಾಂಗಕ್ಕೆ ಸೇರಿದವರು. 1994 ರಲ್ಲಿ ಈ ಎಲ್ಲಾ ದಲಿತರು ಖಾತೆ ಮಾಡಿ ಕೊಡಿ ನಾವು ಮನೆ ಕಟ್ಟಿಸಿ ಕೊಳ್ಳುತ್ತೇವೆ ಎಂದು ಹಲವು ಬಾರಿ ಸಂಬಂಧ ಪಟ್ಟ ಪಂಚಾಯತಿ ಅಧಿಕಾರಿಗಳಿಗೆ ಮನವಿ ಮಾಡಿದರು ಖಾತೆ ಮಾಡಿ ಕೊಡಲಿಲ್ಲ. ಬದಲಿಗೆ ಬಸವೇಶ್ವರ ಜೀರ್ಣೋದ್ಧಾರ ಸಮಿತಿಗೆ ವರ್ಗಾವಣೆಯಾಗಿ ಖಾತೆ ಮಾಡಿಕೊಟ್ಟ ಮುಜರಾಯಿ ಇಲಾಖೆಯಿಂದ ಅನುದಾನ ಪಡೆದು ಬಸವೇಶ್ವರ ದಾವಸ್ಥಾನ ಮತ್ತು ಲಿಂಗಾಯತ ಸಮುದಾಯ ಭವನ ನಿರ್ಮಿಸಿಕೊಂಡಿದ್ದಾರೆ.



ಆದರೆ ಈ ದೇವಸ್ಥಾನ ಮತ್ತು ಸಮುದಾಯ ಭವನಕ್ಕೆ ದಲಿತರಿಗೆ ಪ್ರವೇಶವಿಲ್ಲ. ಈ ದೇವಸ್ಥಾನ ಮುಂದಿನ ಜಾಗದಲ್ಲಿ ಪ್ರತಿವರ್ಷ ಗಣೇಶ ಹಬ್ಬ ಆಚರಿಸಲಾಗುತ್ತಿದ್ದು. ಈ ವರ್ಷ ಪೊಲೀಸರ ಮೂಲಕ ಕೋಮುಗಲಭೆ ಆಗುತ್ತದೆಂದು ಹೇಳಿ ದಲಿತರು ನಡೆಸುತ್ತಿದ್ದ ಗಣೇಶ ಉತ್ಸವವನ್ನು ನಿಲ್ಲಿಸಿದ್ದಾರೆ.

ಸರ್ಕಾರವೇ ಹಕ್ಕು ಪತ್ರ ನೀಡಿದ್ದರೂ, ಮೇಲ್ಜಾತಿ ಬಲದಿಂದ ಈ ಜಾಗವನ್ನು ಆಕ್ರಮಿಸಿಕೊಂಡಿದ್ದಾರೆ. ಸಿವಿಲ್ ಕೋರ್ಟ್‌ನಲ್ಲಿ ಒಂದು ದಾವೆ ಹೂಡಿ ಅದರ ಮೂಲಕ ಮೇಲ್ ಅಧಿಕಾರಿಗಳ ಕುಮಕ್ಕು ಪಡೆದು ನಿರಂತರವಾಗಿ ದಲಿತರ ಮೇಲೆ ದೌರ್ಜನ್ಯ ನಡೆಸಿದ್ದಾರೆ.

ಮಾಗಡಿ ತಾಲೂಕ್‌ನ ಶಾಸಕರಾದ ಬಾಲಕೃಷ್ಣರವರು ಈ ಜನರೊಂದಿಗೆ ಪಂಚಾಯತಿ ನಡೆಸಿದ್ದರಾದರೂ ಈ ಜಾಗವನ್ನು ದಲಿತರಿಗೆ ಕೊಡಿಸುವಲ್ಲಿ ವಿಫಲರಾಗಿದ್ದಾರೆ. ಕಾರಣ ಲಿಂಗಾಯತರ ಮತ ಒಲೈಸುವುದೇ ಆಗಿದೆ. ಆ ಊರಿನ ದಲಿತರು ದೇವಸ್ಥಾನದ ಮುಂದೆ ಇರಬಾರದು ಏಕೆಂದರೆ ಮಾಂಸ ತಿನ್ನುತ್ತಾರೆ ದೇವಸ್ಥಾನ ಮೈಲಿಗೆ ಯಾಗುತ್ತದೆ ಎಂದು ಜಾತಿ ತಾರತಮ್ಯ ಮಾಡುತಿದ್ದಾರೆ.

ಈ ಕೃಕುತ್ಯಕ್ಕೆ ನಾಯಕತ್ವ ನೀಡುತ್ತಿರುವುದು ಗುರುಬಸಪ್ಪ ಎಂಬ ನಿವೃತ್ತ ಲಿಂಗಾಯತ ಮೇಸ್ತ್ರು. ಯಾವ ಮಕ್ಕಳಿಗೆ ಪಾಠವನ್ನು ಮಾಡಿ ಸೈ ಎನಿಸಿಕೊಂಡಿಲ್ಲ. ಅನೇಕ ಹೆಣ್ಣು ಮಕ್ಕಳನ್ನು ಹಾಳು ಮಾಡಿರುವ ಕೇಸುಗಳಿವೆ. ಇವರ ಮೇಲೆ ಜಾತಿ ತಾರತಮ್ಯದ ದೂರು ಮಾಗಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಆದರೆ ಪೊಲೀಸರು ಇದುವರೆವಿಗೂ ಇವರನ್ನು ಬಂಧಿಸಲಿಲ್ಲ. ಪೊಲೀಸ್ ಅಧಿಕಾರಿ ನಂದೀಶ್ ಲಿಂಗಾಯತ್‌ರಾಗಿದ್ದು ಈ ಎಲ್ಲಾ ಕೃತ್ಯಗಳಿಗೆ ಬಹಿರಂಗವಾಗಿಯೇ ಬೆಂಬಲ ನೀಡುತ್ತಿದ್ದಾರೆ.

ಮೇ 10 ರಂದು ಇನ್ಸ್‌ಪೆಕ್ಟರ್ ಆರ್ಡರ್ ಪಡೆದು ಇಲ್ಲಿಯವರೆವಿಗೂ ಯಾವ ಸೂಚನೆಯನ್ನು ನೀಡದೆ 2 ಪೊಲೀಸ್ ವ್ಯಾನ್, 50-60 ಪೊಲೀಸರು, ನಂದೀಶ್ ಮಾಗಡಿ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಮೊಕದ್ದಮೆ ಹೂಡಿ ಲಿಂಗಾಯತರು ಮಾರಕಾಸಗಳೊಂದಿಗೆ ಗುಂಪುಕಟ್ಟಿಕೊಂಡು ಈ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿ ಬೇಲಿ ಹಾಕಿದ್ದಾರೆ ಮತ್ತು ಕಾಪೌಂಡ್ ಕಟ್ಟುತ್ತಿದ್ದಾರೆ.

ಮೇ 11 ರಂದು ಮಾಗಡಿ ನಾಗಶೆಟ್ಟಿಯಲ್ಲಿ ನಡೆಸಿದ ಅಮಾನುಷ ದೌರ್ಜನ್ಯವನ್ನು ಖಂಡಿಸಿ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ತಾಲೂಕಿನ ಸ್ಥಳೀಯ ಮುಖಂಡರಾದ ಮಾಜಿ ತಾಲೂಕ್ ಪಂಚಾಯತ್ ಅಧ್ಯಕ್ಷರಾದ ಕೃಷ್ಣ, ಮಾಜಿ ಸದಸ್ಯರು ಜಯರಾಮ್, ದೊಡ್ಡಿ ಲಕ್ಷ್ಮಣ್, ಮಾಗಡಿಯ ತಾಲೂಕ್ ಸ್ಥಳೀಯವಾಗಿ ನಾಗಶೆಟ್ಟಿಹಳ್ಳಿ ಜನರು ಸೇರಿದಂತೆ ಹೊನ್ನ ಗಂಗಾಸ್ವಾಮಿ, ಗವಿರಿದು, ಜಾವನೇ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ಹೋರಾಟದಲ್ಲಿ ಭಾಗವಹಿಸಿದ ದಲಿತ ಹಕ್ಕುಗಳ ಸಮಿತಿ ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡಿ ನಾಗಶೆಟ್ಟಹಳ್ಳಿಯಲ್ಲಿ ದಲಿತರ ದೌರ್ಜನ್ಯವನ್ನು ಖಂಡಿಸಿ ಈ ಹೋರಾಟ ಜಿಲ್ಲಾದ್ಯಂತ ವಿಸ್ತರಿಸುವುದಾಗಿ "ನಾಗಶೆಟ್ಟಿ ಚಲೋ" ಕಾರ್ಯಕ್ರಮ ಹಮ್ಮಿಕೊಂಡು ಹೋರಾಟ ತೀವ್ರಗೊಳಿಸುವ ಎಚ್ಚರಿಕೆಯನ್ನು ನೀಡಿದ್ದಾರೆ. ದಲಿತ ಹಕ್ಕುಗಳ ಸಮಿತಿ ಬೆಂ. ದಕ್ಷಿಣ ಜಿಲ್ಲಾ ಸಂಚಾಲಕ ರಾಜಶೇಖರ ಮೂರ್ತಿ ಬೆಂಬಲದೊಂದಿಗೆ, ದಲಿತ ಹಕ್ಕುಗಳ ಸಮಿತಿ ನಾಯಕಿ ವನಜ ಈ ಹೋರಾಟದ ನೇತೃತ್ವ ವಹಿಸಿದಾರೆ.

ಗದಗ ಹಾಸ್ಟೆಲ್ ನೌಕರರ ಹೋರಾಟ

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಮಂಜುನಾಥ ಚವ್ಹಾಣ ಅವರಿಗೆ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದಿಂದ ಮನವಿ ಕೊಡಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಸಂಚಾಲಕರಾದ ಪೀರು ರಾಠೋಡ ಮಾತನಾಡಿ ಶ್ರೀ ಮುರಾರ್ಜಿ ದೇಸಾಯಿ ವಸತಿ ಶಾಲೆ ಮಲಕಸಮುದ್ರದಲ್ಲಿ ಹೊರಗುತ್ತಿಗೆ ನೌಕರರು ತಮ್ಮ 7 ತಿಂಗಳದ ಬಾಕಿ ಇರುವ ವೇತನ, ಇಎಸ್ಐ ಕೇಳಲು ಹೋದರೆ ಕೆಲಸ ಬಿಡಿಸಿದ್ದಾರೆ. ಮರಳಿ ಕೆಲಸ ಕೊಡುತ್ತೇವೆ ಎಂದು 6 ತಿಂಗಳು ಕಳೆದರು ಕೆಲಸ ಕೊಡದೆ ಸತಾಯಿಸುತ್ತಿದ್ದಾರೆ. ಗುತ್ತಿಗೆದಾರರು ಮತ್ತು ಅಧಿಕಾರಿಗಳು ಒಂದಾಗಿ ನೌಕರರಿಗೆ ಸತಾಯಿಸುತ್ತಾರೆ. ಜಿಲ್ಲೆಯ ಹೊರಗುತ್ತಿಗೆ ನೌಕರರ ಇಪಿಎಫ್. ಇಎಸ್ಐ, ಕಡಿತ ಮಾಡಿದ ಹಣವನ್ನು ನೌಕರರ ಖಾತೆಗೆ ಜಮಾ ಮಾಡದೆ ಕೊಳ್ಳೆ ಹೊಡೆಯುತ್ತಿದ್ದಾರೆ. ಗುತ್ತಿಗೆ ನಿಯಮಗಳನ್ನು ಉಲ್ಲಂಘನೆ ಮಾಡಲಾಗುತ್ತಿದೆ. ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು., ಎಂದರು.

ಕಳೆದ ಕೆಲವು ತಿಂಗಳಿನಿಂದ ಬಾಕಿ ಇರುವ ವೇತನವನ್ನು ಕೊಡಬೇಕು. ವಾರದ ರಜೆ ಕೊಡಬೇಕು. ಹಬ್ಬದ ರಜೆ ಕೊಡಬೇಕು. ನೌಕರನ್ನು ಕೀಳಾಗಿ ಕಾಣುವದು ಹಾಗೂ ಮಾನಸಿಕವಾಗಿ ಹಿಂಸೆಯನ್ನು ನೀಡುವದು, ಬೈಯುವದು, ನಿಂದಿಸುವ, ಅವರಿಗೆ ಕೆಲಸ ನಿರಾಕರಿಸಿ ಕಿರುಕುಳ ಕೊಡುವ, ಸ್ವಂತ ನಿರ್ಧಾರದ ಮೇಲೆ ಬೇರೆ ಕಡೆಗೆ ವರ್ಗಾಯಿಸುವ ಪ್ರವೃತ್ತಿಗಳನ್ನು ಸ್ಥಳೀಯ ಅಧಿಕಾರಿ ವರ್ಗದವರು ಕೈಬಿಟ್ಟು ಹೊರ ಗುತ್ತಿಗೆ ನೌಕರರೊಂದಿಗೆ ಸೌಹಾರ್ದತವಾಗಿ ನಡೆದುಕೊಳ್ಳಬೇಕು. ಗೈರು ಹಾಜರಿ ಕಾರಣಕ್ಕಾಗಿ ನೌಕರರ ವೇತನದಲ್ಲಿ ಅಕ್ರಮ ಕಡಿತ ಮಾಡಬಾರದು. ಹೊರಗುತ್ತಿಗೆ ಪದ್ಧತಿಯನ್ನು ಕೈಬಿಟ್ಟು ನಮ್ಮ ಸೇವೆಯನ್ನು ಖಾಯಂಗೊಳಿಸಲು ಆಗ್ರಹಿಸಿ ಮತ್ತು ಅಲ್ಲಿಯರೆಗೂ ಸಮಾನ ಕೆಲಸಕ್ಕ ಸಮಾನವೇತನ ನೀಡಲು ಒತ್ತಾಯಿಸಿ ಸರಕಾರಿ ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆ, ಕಾಲೇಜುಗಳಲ್ಲಿ ದುಡಿಯುತ್ತಿರುವ "ಡಿ" ವೃಂದದ ಹೊರಗುತ್ತಿಗೆ ನೌಕರರು ದಿನಾಂಕ : ಮೇ 25ರಿಂದ ರಿಂದ ಜಿಲ್ಲಾಡಳಿತ ಭವನದ ಎದುರಿಗೆ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಲಾಗುವುದು, ಎಂದು ಹೇಳಿದರು.

ಈ ಸಂದರ್ಭದಲ್ಲಿ ರೂಪಣ್ಣ ಜಾಟೋತ್ತರ ಮಾತನಾಡಿ ನಾವು ಈ ಹಿಂದ ಅನೇಕ ಸಲ ಸತ್ಯಾಗ್ರಹಗಳನ್ನು ಮಾಡಿ ಗುತ್ತಿಗೆದಾರರ ಶೋಷಣೆಯಿಂದ ನಮ್ಮನ್ನು ಮುಕ್ತಗೊಳಿಸಬೇಕೆಂದು ಆಗ್ರಹಿಸುತ್ತಾ ಬಂದಿದ್ದೇವೆ. ಆದರೆ ಗುತ್ತಿಗೆದಾರರ ಶೊಷಣೆ ಮುಂದುವರೆಯುತ್ತಿದೆ. ಗುತ್ತಿಗೆದಾರರು ದುಡಿಯುವವರಿಗೆ ಸರ್ಕಾರ ನಿಗದಿ ಪಡಿಸಿದ ವೇತನ ನೀಡುವುದಿಲ್ಲ. ತಿಂಗಳುಗಟ್ಟಲೆ ವೇತನ ನೀಡದೆ ಸತಾಯಿಸುತ್ತಿರುತ್ತಾರೆ. ಸಮಾಜ ಕಲ್ಯಾಣ ಇಲಾಖೆ,



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ಕರ್ನಾಟಕ ಸರ್ಕಾರ ಅಂಗ ಸಂಸ್ಥೆಗಳಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಬೆಂಗಳೂರು, ನಡೆಸುತ್ತಿರುವ ಮುರಾರ್ಜಿ ದೇಸಾಯಿ, ರಾಣಿ ಚೆನ್ನಮ್ಮ ಮತ್ತು ವಾಜಪೇಯಿ ವಸತಿ ಶಾಲೆ, ವಸತಿ ಕಾಲೇಜುಗಳಲ್ಲಿ ಹಾಗೂ ಏಕಲವ್ಯ ಆಶ್ರಮ ಶಾಲೆಗಳಲ್ಲಿ ಹೊರಗುತ್ತಿಗೆ ನೌಕರರಾಗಿ ದುಡಿಯುವ ಎಲ್ಲರೂ ದಿನಾಂಕ : ಮೇ 25 ರಂದು ನಡೆಯುವ ಧರಣಿಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀಮತಿ ಮಂಜುಳಾ ಕೆಲೂರು, ಮಷ್ಪಾ ಹೂಗಾರ, ಭಿಮವ್ವ ದೊಡ್ಡಮನಿ, ಕಸ್ತೂರಿ ಹೆಬಸೂರ, ಸುಜಾತ ಮಲಕಸಮುದ್ರ, ಜ್ಯೋತಿ ಮುಳಗುಂದ, ಗಾಯತ್ರಿ ಮಾಳೋದಿ, ದ್ರಾಕ್ಷಾಯಣಿ ಹಾದಿಮನಿ ಮುಂತಾದವರು ಭಾಗವಹಿಸುವವರು.

ದೇಶ ಪ್ರೇಮಿ ಸಮಾವೇಶ ಏಕೆ........ ಪುಟ 3 ರಿಂದ

ಹಿಂದೂ ಅಸ್ಮಿತೆಯನ್ನು ಜಾಗೃತಗೊಳಿಸಲಾಗುತ್ತದೆ. ಗೋ ರಕ್ಷಣೆಯ ಹೆಸರಿನಲ್ಲಿ ಮುಸ್ಲಿಂ ಸಮುದಾಯ, ದಲಿತ ಸಮುದಾಯಗಳ ಮೇಲೆ ಹಲ್ಲೆ, ಕೊಲೆ ನಡೆಸುವಂತಹ ಮುಕ್ತ ಸ್ವಾತಂತ್ರ್ಯವನ್ನು ಸಂಘ ಪರಿವಾರದ ಸಂಸ್ಥೆಗಳಿಗೆ ನೀಡಲಾಗಿದೆ. ದೇಶದ ಭೌದ್ಧಿಕ ಕೇಂದ್ರಗಳಾದ ವಿಶ್ವವಿದ್ಯಾಲಯಗಳಲ್ಲಿ ಬಿಜೆಪಿಯ ವಿಧ್ಯಾರ್ಥಿ ರಂಗದ ಅವ್ಯಾಹತ ಹಿಂಸೆಯಿಂದಾಗಿ ವಿಶ್ವವಿದ್ಯಾಲಯಗಳು ರಣರಂಗವಾಗಿ ಬದಲಾಗುತ್ತಿದೆ. ಚೆನ್ನೈ ನ ಐಐಟಿ ಯ ಅಂಬೇಡ್ಕರ್ ಪೆರಿಯಾರ್ ಅಧ್ಯಯನ ಗುಂಪಿನ ಮೇಲೆ ನಿಷೇಧ, ಜೆ.ಎನ್.ಯು.ನಲ್ಲಿ ವಿಧ್ಯಾರ್ಥಿಗಳ ಮೇಲೆ ದೇಶ ದ್ರೋಹದ ಆಪಾದನೆ, ಎಫ್.ಟಿ.ಐ.ಐ ನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಯ ಮೇಲೆ ದಮನ ಕಾರ್‍ಯಕ್ರಮಗಳನ್ನು ಕೈಗೊಳ್ಳುವುದು, ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ರೋಹಿತ್ ವೆಮುಲಾರ ಶೈಕ್ಷಣಿಕ ಹತ್ಯೆ - ಇವು ಇತ್ತಿಚಿನ ಕೆಲವು ವಿದ್ಯಮಾನಗಳಾಗಿವೆ. ಗುಜರಾತಿನ ಊನಾದಲ್ಲಿ ದಲಿತರ ಮೇಲೆ ಹಲ್ಲೆ, ದಲಿತ ಮಹಿಳೆಯನ್ನು ನಗ್ನಗೊಳಿಸುವುದು, ಮೀಸಲಾತಿ ವಿರೋಧಿ ಹೇಳಿಕೆ ನೀಡುವುದು, ಮಹಿಳೆಯರ ಕುರಿತು ಅವಹೇಳನಕಾರಿ ಹೇಳಿಕೆ ನೀಡುವುದು, ಬಿ.ಜೆ.ಪಿ ಹಾಗೂ ಅದರ ಸಂಬಂಧಿತ ವ್ಯಕ್ತಿ/ಸಂಘಟನೆಗಳ ನಿಜವಾದ ಬಣ್ಣವನ್ನು ಬಯಲು ಮಾಡಿವೆ.

ಸಂವಿಧಾನದ ಪೀಠಿಕೆಯಲ್ಲಿ ಒಟ್ಟು ಸಂವಿಧಾನದ ಆಶಯಗಳಾದ ಸಮಾನತೆ, ಭಾತೃತ್ವಗಳು ಇಂದು ಬಿ.ಜೆ.ಪಿ ಸರ್ಕಾರ ಆಳ್ವಿಕೆಯಲ್ಲಿ ಅರ್ಥಹೀನವಾಗಿವೆ. ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆಗಳು ತೀವ್ರವಾಗಲು ಮೋದಿ ಸರ್ಕಾರದ ಕಾರ್ಪೋರೇಟ್ ಪರವಾದ ನೀತಿಗಳೇ ಕಾರಣವಾಗಿದೆ. ಭಾರತೀಯ ಬಹುಮುಖಿ ಸಮಾಜವನ್ನು ಧರ್ಮ ಜಾತಿಗಳ ನೆಲೆಗಳಲ್ಲಿ ವಿಭಜಿಸುವ ಕ್ರಮಗಳು ಪುರಾತನ ಶೋಷಕ ಸಂಸ್ಕೃತಿಯ ಪುನರುತ್ಥಾನವಲ್ಲದೆ ಮತ್ತೇನು ಅಲ್ಲ. ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆಯೊದಗಿರುವ ಈ ಸಂದರ್ಭದಲ್ಲಿ ಸಂವಿಧಾನವನ್ನು ಉಳಿಸುವ ಪ್ರಜಾಸತ್ತಾತ್ಮಕ ಅನಿವಾರ್ಯ ಸಂಧರ್ಭದಲ್ಲಿ ನಾವಿದೇವೆ. ಈ ನಿಟ್ಟಿನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಜೂನ್ 4, 2017 ರಂದು ಮೈಸೂರಿನಲ್ಲಿ ಸಂವಿಧಾನ ಉಳಿಸುವ ದೇಶಪ್ರೇಮಿ ಸಮಾವೇಶವನ್ನು ಹಮ್ಮಿಕೊಂಡಿದೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್‍ಯದರ್ಶಿಗಳಾದ ಕಾಂ.ಸೀತಾರಾಂ ಯೆಚೂರಿಯವರು ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಸಂವಿಧಾನವನ್ನು ಪ್ರೀತಿಸುವ, ಆಶಯಗಳು ಕುರಿತು ಅಭಿಮಾನ ಹೊಂದಿರುವ ಎಲ್ಲಾ ಜನ ವಿಭಾಗಗಳು ಸಮಾವೇಶದಲ್ಲಿ ಭಾಗವಹಿಸಿ, ಕೈಜೋಡಿಸಬೇಕಾಗಿದೆ. ■

ನಾಳಿನ ಕಾರ್ಯಕ್ರಮಗಳು

- **ಕೇಂದ್ರದ ಜನ-ವಿರೋಧಿ ನೀತಿಗಳ ವಿರುದ್ಧ ರಾಜ್ಯ ವ್ಯಾಪಿ ಪ್ರಚಾರಾಂದೋಲನ ವಾರ ಮೇ 17-24, ಮೇ 25 ಪ್ರತಿಭಟನೆ,** ಸಿಪಿಐ(ಎಂ)
- **ಮಹಾ ಕಾಲ್ನಡಿಗೆ ಜಾಥಾ,** ಮೇ 16-ಜೂನ್ 3, ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ
- **"ಸಂವಿಧಾನದ ಮೂಲಭುತ ಆಶಯಗಳು ಮತ್ತು ಸವಾಲುಗಳು" ವಿಚಾರ ಸಂಕಿರಣ,** ಮೇ 24, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಜನಸಂಘಟನೆ, ಮೈಸೂರು
- **ಕೆ.ಆರ್.ಶ್ರೀಯಾನ್ ಅಭಿನಂದನ ಮತ್ತು ಆತ್ಮಕಥನ ಲೋಕಾರ್ಪಣೆ,** ಮೇ 28, ಮಂಗಳೂರು
- **ಖಾಸಗೀಕರಣದ ವಿರುದ್ಧ ಸಾರ್ವಜನಿಕ ಉದ್ಯಮಗಳ ಮುಷ್ಕರ,** ಮೇ 30, ಜೆ.ಎ.ಎಫ್.
- **"ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ" ಕಾರ್ಯಾಗಾರ,** ಜೂನ್ 3-4, ಸಿ.ಐ.ಟಿ.ಯು. ಬೆಂಗಳೂರು
- **ರಾಜ್ಯ ಮಟ್ಟದ "ಸಂವಿಧಾನ ಉಳಿಸಿ ದೇಶಪ್ರೇಮಿ" ಸಮಾವೇಶ** ಜೂನ್ 4 ಮೈಸೂರು
- **ಬಗರ್ ಹುಕುಂ ಸಕ್ರಮಕ್ಕೆ ಪ್ರಚಾರಾಂದೋಲನ,** ಕರ್ನಾಟಕ ಪ್ರಾಂತ ರೈತಸಂಘ, ಜೂನ್ 1-2ನೇ ವಾರ
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1-2, ಕುಂದಾಪುರ

ಚಿಕ್ಕಬಳ್ಳಾಪುರ ಮಹಾ ಕಾಲ್ನಡಿಗೆ ಜಾಥಾ ಸಾಗಿದೆ



ಚಿಕ್ಕಬಳ್ಳಾಪುರ ಜಿಲ್ಲೆಯ ಜನರ ಮತ್ತು ರೈತ-ಕೃಷಿಕೂಲಿಕಾರರ ಹಲವು ಹಕ್ಕೊತ್ತಾಯಗಳ ಬಗ್ಗೆ ಜಾಗೃತಿ ಮೂಡಿಸಲು ಚಿಂತಾಮಣಿಯಿಂದ ಚಿಕ್ಕಬಳ್ಳಾಪುರದ ವರೆಗೆ ಮೇ 16ರಿಂದ ಜೂನ್ 3 ರವರೆಗೆ ಮಹಾ ಕಾಲ್ನಡಿಗೆ ಜಾಥಾ ಆರಂಭವಾಗಿ ಜಿಲ್ಲೆಯಾದ್ಯಂತ ಸಾಗಿದೆ. ಜಾಥಾವನ್ನು ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ ಸಂಘಟಿಸುತ್ತಿದೆ. ಮೇ 16ರಂದು ಚಿಂತಾಮಣಿಯ ಆಜಾದ್ ಚೌಕದಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯ ಕಾ. ಬಿ ವಿ ರಾಘವುಲು ಉದ್ಘಾಟಿಸಿ ಮಹಾ ಕಾಲ್ನಡಿಗೆ ಜಾಥಾಕ್ಕೆ ಚಾಲನೆ ನೀಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ.ಜಿ.ವಿ.ಶ್ರೀರಾಮರೆಡ್ಡಿ ಮುಖ್ಯ ಅತಿಥಿಯಾಗಿದ್ದರು.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಪರಸ್ಪರ ದೂಷಣೆ ನಿಲ್ಲಿಸಿ ರೈತರ ಸಾಲ ಮನ್ನಾ ಮಾಡಬೇಕು. ಬಯಲುಸೀಮೆ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಯೋಜನೆ ರೂಪಿಸಬೇಕು ಎಂದು ಕಾ. ಬಿ ವಿ ರಾಘವುಲು ಹೇಳಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ.ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ರೈತರ ಸಾಲ ಮನ್ನಾ ಮಾಡಬೇಕು, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು ಎಂಬುದು ಹೋರಾಟದ ಪ್ರಮುಖ ಬೇಡಿಕೆಯಾಗಿದೆ ಎಂದು ಹೇಳಿದರು.

ಮಹಾ ಕಾಲ್ನಡಿಗೆ ಜಾಥಾ ಈ ಕೆಳಗಿನ ಹಕ್ಕೊತ್ತಾಯಗಳಿಗೆ ಒತ್ತಾಯಿಸುತ್ತಿದೆ:

- ರೈತರು ಮತ್ತು ಕೃಷಿ ಕಾರ್ಮಿಕರ ಸಾಲ ಮನ್ನಾಗೆ ಒತ್ತಾಯಿಸಿ.
- ರೈತರ ಬೆಳೆ ನಷ್ಟ ಪರಿಹಾರ ಎಕರೆಗೆ 25 ಸಾವಿರ ನೀಡಲು ಒತ್ತಾಯಿಸಿ.
- ಕುಡಿಯುವ ನೀರು, ಮೇವು ಸಮರ್ಪಕವಾಗಿ ವಿತರಣೆಗೆ ಒತ್ತಾಯಿಸಿ.
- ತಾರತಮ್ಯವಿಲ್ಲದೆ ಬರಗಾಲ ಕೊನೆವರೆಗೆ ಎಲ್ಲಾ ಕುಟುಂಬಗಳಿಗೆ 35 ಕೆ.ಜಿ. ಪಡಿತರ ವಿತರಣೆಗೆ ಒತ್ತಾಯಿಸಿ.
- ಬರಗಾಲದ ನಿಮಿತ್ತ ಎಲ್ಲಾ ಕುಟುಂಬಗಳಿಗೂ 200 ದಿನ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ನೀಡಲು ಆಗ್ರಹಿಸಿ.
- ಶಾಶ್ವತ ನೀರಾವರಿ ಯೋಜನೆಗಳ ಜಾರಿಗಾಗಿ ಒತ್ತಾಯಿಸಿ.
- ಬರಗಾಲದ ನಿಮಿತ್ತ ವಿದ್ಯಾರ್ಥಿಗಳ ಶುಲ್ಕ ರದ್ದತಿಗೆ ಒತ್ತಾಯಿಸಿ.
- ರೈತರ ಆತ್ಮಹತ್ಯೆಗಳನ್ನು ತಡೆಯಲು ಡಾ॥ ಸ್ವಾಮಿನಾಥನ್ ವರದಿಜಾರಿಗೆ ಆಗ್ರಹಿಸಿ.
- ಭಗರ್ ಹುಕುಂ, ಅರಣ್ಯ ಭೂಮಿ ಊಳಿಮೆ ಮಾಡುತ್ತಿರುವ ಬಡ ಕುಟುಂಬಗಳಿಗೆ ಭೂಮಿ ಕಾಯಂ ಮಾಡಬೇಕು.
- ಎಲ್ಲಾ ಬಡವರಿಗೆ ಮನೆ-ನಿವೇಶನ ನೀಡಬೇಕು.



ವಿಜಯಪುರ: ಸರಿಯಾಗಿ ಬರ ಪರಿಹಾರದ ಕೆಲಸಗಳನ್ನೇ ಪ್ರಾರಂಭಿಸಿಲ್ಲ!

ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿಯು ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಹೊರಡಿ ವಿಜಯಪುರ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಪ್ರತಿಭಟನಾ ಸಭೆ ನಡೆಸಿ, ರೈತರನ್ನು ಉದ್ದೇಶಿಸಿ ಮಾತನಾಡಿದ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಅಣ್ಣಾರಾಯ ಈಳಗೇರ ಅವರು ರಾಜ್ಯದಲ್ಲಿ ಜಿಲ್ಲೆಯಲ್ಲಿ ಕಳೆದ 4-5 ವರ್ಷಗಳಿಂದ ಮಳೆ ಇಲ್ಲದೆ ತೀವ್ರವಾದ ಬರಗಾಲ ಅನುಭವಿಸುತ್ತಿದ್ದರೂ ಕೇಂದ್ರದ ಬಿಜೆಪಿ ಸರಕಾರವಾಗಲಿ ರಾಜ್ಯದ ಕಾಂಗ್ರೆಸ್ ಸರಕಾರವಾಗಲಿ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲವೆಂದರು.

ವಿಜಯಪುರ ಜಿಲ್ಲೆ ಬರಗಾಲ ಜಿಲ್ಲೆ ಎಂದು ಘೋಷಿಸಿರುವ ಕರ್ನಾಟಕ ಸರಕಾರವು ಸರಿಯಾಗಿ ಬರ ಪರಿಹಾರದ ಕೆಲಸಗಳನ್ನೇ ಪ್ರಾರಂಭಿಸಿಲ್ಲ ಎಂದರು. ನೀರಾವರಿ ಯೋಜನೆಗಳಾದ ಮುಳವಾಡ ಏತ ನೀರಾವರಿ, ಚಿಮ್ಮಲಗಿ ಏತ ನೀರಾವರಿ, ಕೆರೆಗೆ ನೀರು ತುಂಬುವ ಯೋಜನೆಗಳು ಆಮೆ ನಡಿಗೆ-ಯಂತೆ ಮಂದಗತಿಯಿಂದ ನಡೆಯುತ್ತಿವೆ. ಜಿಲ್ಲೆಯ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಈ ಹಿಂದೆ ಆಪಾದನೆ ಮಾಡಿರುವ ಕಳಪೆ ಮಟ್ಟದಿಂದ ಕೂಡಿರುವ ಚಿಮ್ಮಲಗಿ ಏತ ನೀರಾವರಿ ಕಾಮಗಾರಿಗಳಿಗೆ ಕಾರಣ-ರಾದ ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗಳ ಮೇಲೆ ಯಾವ ಕ್ರಮ ಕೈಕೊಂಡರು ತಿಳಿಯಲಿಲ್ಲ.

ಈಗ ಜಾರಿ ಇರುವ ಎನ್‌ಬಿಸಿ ಕಾಲುವೆಯು 80ನೇ ಕಿ.ಮೀ ವರೆಗೆ ನಡೆದಿರುವ ಕೆಲಸಗಳು ಸರಿ ಪ್ರಮಾಣವಾಗಿಲ್ಲ ಹಾಗೂ ಕಳಪೆ ಮಟ್ಟದಿಂದ ಕೂಡಿದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆಯು ತನಿಖೆಯಾಗಬೇಕು ಎಂದರು.

ಈ ಹಿಂದೆ ನಿರ್ಮಿಸಿರುವ ಐಬಿಸಿ ಕಾಲುವೆಗಳಲ್ಲಿ ಸೀಳು ಗಾಲುವೆ ಕಿರುಗಾಲುವೆ ಹೊಲಗಾಲುವೆಗಳು ಸರಿಯಾಗಿ ನಿರ್ಮಿಸದೆ ಇರುವುದರಿಂದ ಅನೇಕ ರೈತರ ಹೊಲಗಳಲ್ಲಿ ನೀರು ನಿಂತು ಸೌಳು ಜವಳಿಗೆ ತುತ್ತಾದರೆ ಇನ್ನೊಂದಡೆ ಕಾಲುವೆಯ ಕೊನೆಯ ಭಾಗದಲ್ಲಿರುವ ರೈತರ ಜಮಿನಿಗೆ ನೀರು ತಲುಪುವದೇ ಇಲ್ಲ. ಇನ್ನು ಕೆಲವು ಕಡೆ ಕಿರು ಕಾಲುವೆಗಳಿಂದ ಹೊಲಗಾಲುವೆಗಳಿಗೆ ನೀರು ಏರುವದೇ ಇಲ್ಲ. ಹೀಗಾದರೆ ಜಿಲ್ಲೆಯ ಬರನಿವಾರಣೆಯಾಗದೆ ತೆ-ರೂರಿಕೆಗೆ ಮಾತ್ರ ಕೆಲಸಗಳಾಗಿವೆ. ಅಲ್ಲದೆ ಗುತ್ತಿಗೆ ದಾರ ಹಾಗೂ ಭ್ರಷ್ಟ ಇಂಜಿನಿಯರುಗಳಿಗೆ ಲೂಟಿ ಮಾಡಲು ಅನಕೂಲವಾದಂತಾಗಿದೆ ಎಂದರು.

ತೊಗರಿ ಹಣ ಶೀಘ್ರ ಪಾವತಿಸಿ:

ಸರಕಾರವು ರೈತರಿಂದ ತೊಗರಿ ಖರಿದಿಸಿ ಸುಮಾರು ಎರಡು ತಿಂಗಳು ಮೇಲಾದರೂ ಹಣ ಪಾವತಿಯಾಗುತ್ತಿಲ್ಲ. ಗುಜರಾಥ ಹಾಗೂ ಮಹಾರಾಷ್ಟ್ರದಲ್ಲಿ ತೊಗರಿ ಖರೀದಿ ಕೇಂದ್ರಗಳು ಚಾಲು ಇದ್ದರು ಕರ್ನಾಟಕದಲ್ಲಿ ಮಾತ್ರ ಮುಂಚಿತವಾಗಿಯೇ



ಬಂದ ಮಾಡಲಾಗಿದೆ ಇದರಿಂದಾಗಿ ಮಾರುಕಟ್ಟೆಯಲ್ಲಿ ತೊಗರಿಯ ಬೆಲೆ 3800 ಕ್ಕೆ ಕುಸಿದಿದ್ದು ರೈತರು ಇನ್ನಷ್ಟು ಸಂಕಷ್ಟಕ್ಕೆ ಈಡಾಗಿದ್ದಾರೆ. ಸರಕಾರವು ಪುನಃ ತೊಗರಿ ಖರೀದಿ ಕೇಂದ್ರಗಳನ್ನು ತೆರೆದು ರೈತರ ರಕ್ಷಣೆಗೆ ಮುಂದಾಗಬೇಕು ಎಂದು ಸರಕಾರಕ್ಕೆ ಆಗ್ರಹಿಸಿದರು.

ನಂತರ ರೈತ ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ಜಿಲ್ಲೆಯ ವಿಜಯಪುರ ಹಾಗೂ ಇಂಡಿ ತಾಲೂಕುಗಳಲ್ಲಿರುವ ಬಡ ರೈತರು ಅನೇಕ ವರ್ಷಗಳಿಂದ ಸರಕಾರಿ ಭೂಮಿ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಈ ಬಗ್ಗೆ ಸಾಕಷ್ಟು ಅರ್ಜಿಗಳನ್ನು ಕೊಡಲಾಗಿದೆ ಅನೇಕ ಹೋರಾಟಗಳನ್ನು ಮಾಡಲಾಗಿದೆ ಆದರೆ ಇನ್ನುವರೆಗೆ ಸರಕಾರವು ಅವರಿಗೆ ಹಕ್ಕು ಪತ್ರ ಕೊಟ್ಟಿರುವುದಿಲ್ಲ ಶೀಘ್ರವಾಗಿ ಅವರಿಗೆ ಹಕ್ಕು ಪತ್ರ ಕೊಡಬೇಕು ಎಂದು ಆಗ್ರಹಿಸಿದರು ಮನೆ ಇಲ್ಲದ ಬಡವರಿಗೆ 80 * 80 ಹಿತ್ತಲು ಸಹಿ ತವಾದ ನಿವೇಶಗಳನ್ನು ಒದಗಿಸಬೇಕು ಎಂದರು.

ಈಗಾಗಲೆ ಸರಕಾರ ಮಂಜೂರ ಮಾಡಿದ ವಿವಿಧ ಯೋಜನೆಯ ಮನೆಗಳ ಹಂಚಿಕೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಅರ್ಹ ಫಲಾನುಭವಿಗಳು ಈ ಮನೆಗಳಿಂದ ವಂಚಿತರಾಗಿದ್ದಾರೆ. ಹಂದಿಗನೂರ ಗ್ರಾಮ ಪಂಚಾಯತದಲ್ಲಿ ಭ್ರಷ್ಟಾಚಾರ ಅವ್ಯವಹಾರ ನಡೆದ ಮನೆಗಳ ಬಗ್ಗೆ ರೈತ ಸಂಘದಿಂದ ಅರ್ಜಿಕೊಟ್ಟಾಗ ಪಿಡಿಓ ಹಾಗೂ ಅಧ್ಯಕ್ಷರು ಇಬ್ಬರು ಸೇರಿ ಸುಮಾರು 36 ಲಕ್ಷ ರೂಗಳ ಅವ್ಯವಹಾರ ಮಾಡಿದ್ದಾರೆ ಎಂದು ತನಿಖೆಯಿಂದ ಸಾಬೀತಾಗಿದೆ. ಆದರೆ ಮಾಜಿ ಶಾಸಕ ಸುಣಗಾರ ಅವರ ಸಂಬಂಧಿಕರೆನ್ನುವ ಹಿನ್ನಲೆಯಲ್ಲಿ ಅವರ ಮೇಲೆ ಕ್ರಿಮಿನಲ್ ಕೇಸ ಮಾಡುವಲ್ಲಿ ಹಿಪ್ಪರಗಿ ಎಎಸ್‌ಐ ಹಾಗೂ ಸಿಂದಗಿ ತಾಲೂಕಾ ಪಂಚಾಯತ ಇಓ ಇವರು ಕಾನೂನಿನಲ್ಲಿ ಸಡಿಲತೆ ತೋರಿ ಆರೋಪಿಗಳನ್ನು ರಕ್ಷಿಸಲು ಮುಂದಾಗಿದ್ದಾರೆ ಎಂದು ಆಪಾದಿಸಿದರು. ಅಲ್ಲದೆ ಇನ್ನು ಎಷ್ಟು ಪಂಚಾಯತಗಳಲ್ಲಿ ಇಂಥ ಅವ್ಯವಹಾರಗಳು ನಡೆದಿವೆ ಎಂಬ ಬಗ್ಗೆ ಜಿಲ್ಲಾಡಳಿತವು ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಭೀಮರಾಯ ಪೂಜಾರಿ ಅವರು ಮನವಿ ಪತ್ರವನ್ನು ಓದಿ ಜಿಲ್ಲಾಧಿಕಾರಿಗಳ ಪರವಾಗಿ ಪುಷ್ಪಾ ಮೇಲಿನಕೇರಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘದ ಮುಖಂಡರಾದ ಸುರೇಖಾ ರಜಪೂತ, ಸಲೀಮ್ ನಾಯ್ಕೋಡಿ, ಎಸ್.ಜಿ. ಬೋರಗಿ, ರಾಮಣ್ಣ ಶಿರಾಗೋಳ, ಖಾಜೇಸಾಬ ಕೋಲಾರ, ಜಿ.ಎಸ್. ಇಂಗಳಗಿ, ಬಸೀರ ಅಹ್ಮದ ತಾಂಬೆ, ಮುರುಗೇಶ ಹುಣಶ್ಯಾಳ, ಸೋಮಲಿಂಗ ಮಕಣಾಪೂರ, ಸುಮಿತ್ರಾ ಘೋಣಸಗಿ, ಸಿದ್ರಾಮ ಬಂಗಾರಿ ಮುಂತಾದವರು ಉಪಸ್ಥಿತರಿದ್ದರು.

ಸಲೀಮ್ ನಾಯ್ಕೋಡಿ

ಶಕ್ತಿನಗರದಲ್ಲಿ "ಶ್ರಮ ಸಂಭ್ರಮ-2017"

ಇತ್ತೀಚಿಗೆ ಶಕ್ತಿನಗರದಲ್ಲಿ ನಡೆದ "ಕಟ್ಟಡ ಕಾರ್ಮಿಕರ ಹೋರಾಟದ ಫಲಶ್ರುತಿಗೆ ಹತ್ತು ವರುಷಗಳು" ಎಂಬ ಹೆಸರಿನಲ್ಲಿ ನಡೆದ "ಶ್ರಮ ಸಂಭ್ರಮ - 2017" ಸಾಂಸ್ಕೃತಿಕ ವೈಭವ ಕಾರ್ಯಕ್ರಮ ನಡೆಸಲಾಯಿತು. ಜಾನಪದ ಹಾಡುಗಾರ ನಾದಾ ಮಣಿನಾಲ್ಕೂರುರವರು ಜಾನಪದ ಹಾಡುಗಳ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತ್ತು, ಸಭಾ ಕಾರ್ಯಕ್ರಮದಲ್ಲಿ ಸ್ವಾಗತ ಸಮಿತಿ ಗೌರವಾಧ್ಯಕ್ಷರು, ಕೊಂಕಣಿ ಸಾಹಿತ್ಯ ಆಕಾಡೆಮಿ ಮಾಜಿ ಅಧ್ಯಕ್ಷರಾದ ರೊಯ್ ಕ್ಯಾಸ್ತಲಿನೋ, ದೇವಾನಂದ ಪ್ರಧಾನ ಕಾರ್ಯದರ್ಶಿ ಸಿವಿಲ್ ಕಂಟ್ರಾಕ್ಟರ್ ಅಸೋಸಿಯೇಶನ್, ಮಹಾಪೋಷಕರಾದ ಪುರುಷೋತ್ತಮ ದತ್ತನಗರ, ಶಶಿಧರ ಶಕ್ತಿನಗರ, ಕೃಷ್ಣಪ್ಪ ಕೊಂಚಾಡಿ, ಮೋಹನ ಶಕ್ತಿನಗರ, ಮುಖ್ಯ ಅತಿಥಿಗಳಾಗಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ಸಿಡಬ್ಲ್ಯೂಎಫ್‌ಐ ನಗರ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಉಪಸ್ಥಿತರಿದ್ದರು.

ಸಭೆಯಲ್ಲಿ ನಾಟಕ, ಸಿನಿಮಾ, ಕ್ರೀಡೆ, ಸಾಂಸ್ಕೃತಿಕ, ಸಾಮಾಜಿಕ ಶಿಕ್ಷಣ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನಿಸಲಾಯಿತ್ತು. ಸಿನಿಮಾ ಮತ್ತು ನಾಟಕ ರಂಗದಲ್ಲಿ ಸರೋಜಿನಿ ಶೆಟ್ಟಿ, ಶಿಕ್ಷಣ ಕ್ಷೇತ್ರದಿಂದ ಅಂಗನವಾಡಿ ಶಿಕ್ಷಕಿ ವಿಜಯಲಕ್ಷ್ಮಿ, ಕ್ರೀಡಾ ಕ್ಷೇತ್ರದಿಂದ ಕಿಶೋರ್ ಮತ್ತು ಕರಾಟೆ ಪಟ್ಟು ಕೀರ್ತಿಕಾ, ಸಾಂಸ್ಕೃತಿಕ ಕ್ಷೇತ್ರದಿಂದ ದುರ್ಗಾಶ್ರೀ, ಸಾಮಾಜಿಕ ಕ್ಷೇತ್ರದಿಂದ ರುದ್ರ ಭೂಮಿಯ ಕಾರ್ಯಪಾಲಕ ಪದ್ಮನಾಭ ಕುಲಶೇಖರ ಇವರಿಗೆ ಗಣ್ಯರು ಸನ್ಮಾನಿಸಿದರು.

ಸಭಾ ಕಾರ್ಯಕ್ರಮದ ಬಳಿಕ ಮೆಗಾ ಮ್ಯಾಜಿಕ್ ಸ್ಟಾರ್ ಕುದ್ರೋಳಿ ಗಣೇಶ್ ಬಳಗದವರಿಂದ "ಮಸ್ತ್ ಮ್ಯಾಜಿಕ್", ವಿಸ್ಮಯ ವಿನಾಯಕ ತಂಡದಿಂದ "ಕಡೆ ಕೊಡಿ" ಕಾಮಿಡಿ, ಚಿಣ್ಣರ ಮೇಳ ಮಕ್ಕಳಿಂದ "ಸೂರ್ಯ ಬಂದ ಮೇಲೆ" ನಾಟಕ ಹಾಗೂ ಸ್ಥಳೀಯ ಪ್ರತಿಭೆಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಿತು. ಸ್ವಾಗತ ಸಮಿತಿ ಅಧ್ಯಕ್ಷರಾದ ಜಯಪ್ರಕಾಶ್ ಬೊಳ್ಯ, ಪ್ರಧಾನ ಕಾರ್ಯದರ್ಶಿ ಸಂತೋಷ್ ಶಕ್ತಿನಗರ, ಸಿಡಬ್ಲ್ಯೂಎಫ್‌ಐ ಪದವು ವಿಭಾಗ ಸಮಿತಿ ಅಧ್ಯಕ್ಷರಾದ ಉಮೇಶ್ ಶಕ್ತಿನಗರ, ಕಾರ್ಯದರ್ಶಿ ಉಮೇಶ್ ಬೊಳ್ಯ ಉಪಸ್ಥಿತರಿದ್ದರು.

– ಸಂತೋಷ್ ಶಕ್ತಿನಗರ

ಕೇಳಿಸಿದ್ದು


ಮನುಕುಲ ಉಳಿಯಬೇಕೆಂದಿದ್ದರೆ 'ಇನ್ನು ನೂರು ವರ್ಷಗಳಲ್ಲಿ ಈ ಭೂಮಿಯನ್ನು ಬಿಟ್ಟು ಹೊರಡಿ' ಎಂದು ಕಳೆದ ವಾರ ಪ್ರೊ. ಸ್ಟೀಫನ್ ಹಾಕಿಂಗ್ ಹೇಳಿದ್ದು ಎಲ್ಲ ದೇಶಗಳಲ್ಲಿ ಸುದ್ದಿಯಾಯಿತು. ಬೇರೆ ಯಾರಾದರೂ ಹೇಳಿದ್ದಿದ್ದರೆ ಅದು ಜಾಗತಿಕ ಸುದ್ದಿ ಆಗುತ್ತಿರಲಿಲ್ಲ; ಅಷ್ಟು ವೈರಲ್ ಆಗುತ್ತಿರಲಿಲ್ಲ. 'ಆತನಿಗೆ ತಲೆ ಸರಿ ಇಲ್ಲ' ಎಂದು ಸುಮ್ಮನಾಗುತ್ತಿದ್ದರೇನೊ. ಆದರೆ ಈ ವಿಶ್ವಖ್ಯಾತಿಯ ಭೌತವಿಜ್ಞಾನಿ ಸ್ಟೀಫನ್ ಹಾಕಿಂಗ್ ಅಂತಿಂಥ ವ್ಯಕ್ತಿಯಲ್ಲ.

ವಿಜ್ಞಾನವನ್ನು ಹಿಂದಕ್ಕೆ ಸರಿಸಿ, ಕೆಲವರ ಹಿತಾಸಕ್ತಿಗೆ ಹಾಗೂ ಕಂಪನಿಗಳ ಲಾಭಾಸಕ್ತಿಗೇ ಆದ್ಯತೆ ಕೊಡಲೆಂದು ರಾಜಕೀಯ ಧುರೀಣರು ಟೊಂಕ ಕಟ್ಟಿ ನಿಂತರೆ ಇಡೀ ಭೂಮಿಯೇ ಅಪಾಯದತ್ತ ಹೊರಳುವ ಸಂಭವ ಇದೆ. ಈಗ ಅಮೆರಿಕ ಮತ್ತು ಯುರೋಪ್‌ನ ಕೆಲವು ದೇಶಗಳಲ್ಲಿ (ಭಾರತದಲ್ಲೂ) ಆ ಸೂಚನೆಗಳು ಕಾಣುತ್ತಿವೆ.

ಅಮೆರಿಕದಲ್ಲಿ ಟ್ರಂಪ್ ಆಡಳಿತ ಬಂದ ನಂತರ ದಿನದಿನವೂ ವಿಜ್ಞಾನಕ್ಕೆ ಹಿನ್ನಡೆ ಆಗತೊಡಗಿದೆ. ಭೂಮಿ ಬಿಸಿಯಾಗುತ್ತಿರುವುದೇ ಸುಳ್ಳು ಎಂದು ಅಲ್ಲಿನ ಅಧ್ಯಕ್ಷ ಢಣಾಡಂಗುರ ಹೇಳುತ್ತಿದ್ದಾರೆ. ಪೆಟ್ರೋಲ್ ಡೀಸೆಲ್ ಬಳಕೆಯನ್ನು ಕಡಿಮೆ ಮಾಡಬೇಕು ಎಂದು ಪ್ಯಾರಿಸ್ ಒಪ್ಪಂದಕ್ಕೆ 160 ದೇಶಗಳು ಸಹಿ ಹಾಕಿದರೆ ಈತ ಮಾತ್ರ ಇನ್ನಷ್ಟು ಮತ್ತಷ್ಟು ಪೆಟ್ರೋಲ್- ಕಲ್ಲಿದ್ದಲ ಗಣಿಗಾರಿಕೆಗೆ ಕುಮ್ಮಕ್ಕು ಕೊಡುತ್ತಿದ್ದಾರೆ.

ವಿಜ್ಞಾನಿಗಳೇ ದೇಶದ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿದ್ದಾರೆಂಬ ಮನೋಭಾವದ ರಾಜಕಾರಣಿಗಳನ್ನೇ ಹೆಕ್ಕಿ ಹೆಕ್ಕಿ ಪ್ರಮುಖ ಖಾತೆಗಳ ಮುಖ್ಯಸ್ಥರನ್ನಾಗಿ ನೇಮಕ ಮಾಡುತ್ತಿದ್ದಾರೆ. ವಿಜ್ಞಾನಿಯಲ್ಲದ ವ್ಯಕ್ತಿಯನ್ನು ದೇಶದ ಕೃಷಿ ಸಂಶೋಧನಾ ರಂಗದ ಮುಖ್ಯಸ್ಥರನ್ನಾಗಿ ಆಯ್ಕೆ ಮಾಡುತ್ತಾರೆ.

– ನಾಗೇಶ ಹೆಗಡೆ (ಪ್ರಜಾವಾಣಿಯಲ್ಲಿ)



ಕೆ.ಆರ್. ಶ್ರೀಯಾನ್ : ಮೆಲುದನಿಯ ಕಮ್ಯೂನಿಸ್ಟ್ ಹೋರಾಟಗಾರ

ಆರು ದಶಕಗಳಿಗೂ ಮೀರಿ ಕಮ್ಯೂನಿಸ್ಟ್ ಪಕ್ಷದಲ್ಲಿ ಸಕ್ರಿಯರಾಗಿರುವ ಕೆ.ಆರ್.ಶ್ರೀಯಾನ್ ಸ್ವಾತಂತ್ರ್ಯೋತ್ತರ ಭಾರತ ಹಾಗೂ ದಕ್ಷಿಣ ಕನ್ನಡದ ರಾಜಕೀಯ ಸಾಮಾಜಿಕ ತಲ್ಲಣ ಹಾಗೂ ಪರಿವರ್ತನೆಗೆ ಸಾಕ್ಷೀಪ್ರಜ್ಞೆಯಾಗಿದ್ದು, ಕರಾವಳಿ ಕರ್ನಾಟಕದ ಮುನ್ನಡೆಗೆ ಚಾಲಕಶಕ್ತಿಯಾಗಿ ಕಾರ್ಯನಿರತರಾದವರು. ತಮ್ಮ 83ನೇ ವಯಸ್ಸಿನಲ್ಲಿ ಅವರು ಬರೆದ ಆತ್ಮಕತೆ 'ನನ್ನ ಜೀವನ ಕಥನದ ನೆನಪಿನಂಗಳದಿಂದ' ಬರುವ ಮೇ 28 ರಂದು ಸಾಹಿತಿ ಹಾಗೂ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿಯವರಿಂದ ಲೋಕಾರ್ಪಣೆಗೊಳ್ಳಲಿದೆ. ಈ ಸಂದರ್ಭದಲ್ಲಿ ಕೆ.ಆರ್.ಶ್ರೀಯಾನ್ ಕುರಿತು ಈ ಬರಹ ಎರಡು ಕಂತುಗಳಲ್ಲಿ ಪ್ರಕಟವಾಗಲಿದೆ. ಮೊದಲ ಕಂತು ಈ ವಾರ.

ವಾಸುದೇವ ಉಚ್ಚಿಲ

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ಸಿಗರು ಪ್ರಮುಖ ಪಾತ್ರ ವಹಿಸಿದ್ದರೂ, ಅವರಲ್ಲಿ 1935ರಿಂದಲೇ ಕ್ರಿಯಾಶೀಲರಾಗಿದ್ದ ಕಮ್ಯೂನಿಸ್ಟರ ಪಾತ್ರವನ್ನು ಚರಿತ್ರಕಾರರು ಕಡೆಗಣಿಸಿದ್ದಾರೆ. ಈ ಕಮ್ಯೂನಿಸ್ಟರಾದರೋ ಸ್ವಾತಂತ್ರ್ಯ ಹೋರಾಟದ ಜೊತೆಗೇನೇ ದುಡಿಯುವ ಜನ, ಕಾರ್ಮಿಕ ವರ್ಗದ ಹೋರಾಟಗಳನ್ನೂ ದೊಡ್ಡ ಪ್ರಮಾಣದಲ್ಲೇ ಆರಂಭಿಸಿದರು. ಸ್ವಾತಂತ್ರ್ಯ ದೊರೆತ ಬೆನ್ನಿಗೇ ರೈತ ಚಳುವಳಿಯನ್ನೂ ತಮ್ಮ ದೈತ್ಯ ಶಕ್ತಿಯಿಂದ ಮುನ್ನಡೆಸಿದರು. ತಮ್ಮ ವಿದ್ಯಾರ್ಥಿ ದಿನಗಳಲ್ಲಿ ದುಡಿಯುವ ಜನರ ಈ ಚಳುವಳಿಯಿಂದ ಪ್ರಭಾವಿತರಾಗಿ, ವಿದ್ಯಾರ್ಥಿ ದೆಸೆ ಮುಗಿಯುತ್ತಲೇ ಕಮ್ಯೂನಿಸ್ಟ್ ಚಳುವಳಿಗೆ ದುಮುಕಿ ಅರುವತ್ತು ವರ್ಷಗಳಿಗೂ ಮೀರಿ ಚಳುವಳಿಯಲ್ಲಿ ಸಕ್ರಿಯರಾಗಿ ಇರುವ ಕೆ.ಆರ್.ಶ್ರೀಯಾನ್ ಅವರನ್ನು ಹೊರತುಪಡಿಸಿ ನಾಡಿನ ಸಾಕ್ಷಿ ಪ್ರಜ್ಞೆಯಂತೆ ಕ್ರಿಯಾಶೀಲರಾಗಿರುವ ಮತ್ತೊಬ್ಬರು ಬಹುಶ: ಕರ್ನಾಟಕ ರಾಜ್ಯದಲ್ಲಿ ಬೇರೊಬ್ಬರಿಲ್ಲ.

ದಕ್ಷಿಣ ಕನ್ನಡ ಅದರಲ್ಲೂ ಮಂಗಳೂರಿನ ಜನತೆಗೆ ಕೆ.ಆರ್.ಶ್ರೀಯಾನ್ ಗೊತ್ತೇ ಹೊರತು ಕೆ.ರಂಗಪ್ಪ ಶ್ರೀಯಾನ್ ಅಲ್ಲ. ಅಷ್ಟು ಮಟ್ಟಿಗೆ ರಾಜಕೀಯ ಮತ್ತು ಸಾಮಾಜಿಕ ರಂಗದಲ್ಲಿ ಕೆ.ಆರ್.ಶ್ರೀಯಾನ್‌ರದು ಜನಜನಿತ ಹೆಸರು. ಅರುವತ್ತು ವರ್ಷಗಳಿಗೂ ಮೀರಿದ ಅವರ ಸಾಮಾಜಿಕ, ರಾಜಕೀಯ ಜೀವನದಲ್ಲಿ ಅವರು ಕಾರ್ಮಿಕರಿಗಾಗಿ, ರೈತರಿಗಾಗಿ, ದುಡಿಯುವ ಜನತೆಗಾಗಿ ನಡೆಸಿದ ಹೋರಾಟಗಳು ಅದೆಷ್ಟೋ. ಗುತ್ತು, ಶ್ರೀಮಂತಿಕೆ, ಉದ್ಯಮಗಳ ಹಿನ್ನೆಲೆಯಿಂದ ವೈಯುಕ್ತಿಕ ಚರಿಷ್ಮಾಗಳನ್ನು ಬೆಳೆಸಿದ ರಾಜಕೀಯ ಪಕ್ಷಗಳ ನಾಯಕರನ್ನು ನಮ್ಮ ಚರಿತ್ರಕಾರರು, ಬರಹಗಾರರು ನಾಡಿನ ನಾಯಕರೆಂಬಂತೆ ಚಿತ್ರಿಸುತ್ತಾರೆ. ಈ ಬರಹಗಳ ಭರಾಟೆಯಲ್ಲಿ ಕೆ.ಆರ್.ಶ್ರೀಯಾನ್‌ರಂತೆ ಹಂಚಿನ ಕಾರ್ಮಿಕರು, ಬೀಡಿ ಕಾರ್ಮಿಕರು, ಗೋಡಂಬಿ ಕಾರ್ಮಿಕರು, ಕೃಷಿಕೂಲಿಕಾರರು, ರೈತರು, ಭೂರಹಿತರು, ವಸತಿರಹಿತರು ಮೊದಲಾದ ಬಹುಜನ ವಿಭಾಗದ ದುಡಿಯುವ ವರ್ಗಕ್ಕೆ ಹಕ್ಕು, ಸವಲತ್ತುಗಳನ್ನು ಹೋರಾಟಗಳಿಂದ ಒದಗಿಸಿಕೊಟ್ಟವರು ಜನನಾಯಕರೆಂದು ನಿರೂಪಿತರಾಗುವುದಿಲ್ಲ ಮಾತ್ರವಲ್ಲ ಯೂನಿಯನ್ ಲೀಡರ್‌ಗಳು ಎಂಬ ಕೆಳದರ್ಜೆಯ ನಿರೂಪಣೆಗೆ ಒಳಗಾಗುತ್ತಾರೆ. ಅಂಥ ಅವಗಣನೆಗಳನ್ನು ಮೀರಿ ಆರು ದಶಕಗಳನ್ನು ದಾಟಿ ವೃದ್ಧಾಪ್ಯದವರೆಗೂ ದುಡಿಯುವ ಜನತೆಯ ಹೋರಾಟಗಳಲ್ಲಿ ತೊಡಗಿರುವ ಉನ್ನತ ನಾಯಕ ಕೆ.ಆರ್.ಶ್ರೀಯಾನ್ ಅವರು.

ಇವತ್ತು ಮಂಗಳೂರು ಮಹಾನಗರದ ಭಾಗವಾಗಿರುವ ಕೊಂಚಾಡಿಯು 8 ದಶಕಗಳ ಹಿಂದೆ ನಗರದ ಹೊರವಲಯದ ಕೃಷಿಪ್ರಧಾನ ಗ್ರಾಮ ದೇರೆಬೈಲಿನಲ್ಲಿತ್ತು. ಮಂಗಳೂರು ನಗರದಲ್ಲಿ ನೇಯ್ಗೆ, ಬೀಡಿ, ಹಂಚು, ಗೋಡಂಬಿ ಉದ್ಯಮಗಳು ಪ್ರಾರಂಭವಾಗಿ ಏಳಿಗೆ ಹೊಂದುತ್ತಿದ್ದ ಕಾಲ. ಬಡ ರೈತ ಕುಟುಂಬದ ರಾಮ ದೇವಾಡಿಗ ಗುರುವಮ್ಮ ದಂಪತಿಗಳ 9 ಮಕ್ಕಳಲ್ಲಿ ಕೆ.ಆರ್.ಶ್ರೀಯಾನ್ ಏಳನೆಯವರು. ಜನನ 25 ಮೇ 1934. ಅವರ ಮೂವರು ಅಣ್ಣಂದಿರು ಸುಮಾರು 7–8 ಕಿ.ಮೀ.ಗಳಷ್ಟು ನಡೆದು ಮಂಗಳೂರು ನಗರದ ಹಂಚಿನ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಮೂವರು ಅಕ್ಕಂದಿರು ಸಮೀಪದ ಬಿಕರ್ಣಕಟ್ಟೆಯ ಗೋಡಂಬಿ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಗ್ರಾಮದಲ್ಲಿ ಪ್ರಾಥಮಿಕ ಶಾಲೆಗಳೂ, ಮಂಗಳೂರು ನಗರದಲ್ಲಿ ಪ್ರೌಢಶಾಲೆ, ಕಾಲೇಜುಗಳೂ ಶಿಕ್ಷಣ ಒದಗಿಸುತ್ತಿದ್ದವು. ಕೆ.ಆರ್.ಶ್ರೀಯಾನ್ ಕೊಂಚಾಡಿಯ ಶ್ರೀ ರಾಮಾಶ್ರಮ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಮೇಲೆ ಸಮೀಪದ ಪದುವಾ ಹೈಸ್ಕೂಲ್‌ನಲ್ಲಿ ಪ್ರೌಢಶಿಕ್ಷಣವನ್ನು ಮುಂದುವರಿಸಿ, ಶಿಕ್ಷಕ ತರಬೇತಿಯ ಅನುಕೂಲಕ್ಕಾಗಿ ಮಂಗಳೂರಿನ ಗಣಪತಿ ಹೈಸ್ಕೂಲ್‌ನಲ್ಲಿ 10 ಮತ್ತು 11ನೇ ತರಗತಿಗೆ ಹಾಜರಾಗಿ ಮೆಟ್ರಿಕ್ಯುಲೇಷನ್ ಮುಗಿಸಿದರು.

ಸ್ವತಂತ್ರ ಭಾರತದಲ್ಲೂ 1948 ರಿಂದ 1951ರ ಅವಧಿಯಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ನಿಷೇಧವಿತ್ತು. ಬಂಧನದಿಂದ ತಪ್ಪಿಸಲು ದ.ಕ.ಜಿಲ್ಲೆಯ ಮುಖಂಡರೂ ಭೂಗತರಾಗಿದ್ದರು. ಹಂಚು ಕಾರ್ಮಿಕರಾಗಿದ್ದ ಕೆ.ಆರ್.ಶ್ರೀಯಾನ್‌ರ ಅಣ್ಣಂದಿರು ಕಮ್ಯೂನಿಸ್ಟ್ ಪಕ್ಷದ ಬೆಂಬಲಿಗರಾಗಿದ್ದರು. ಹಿರಿಯ ಮುಖಂಡರಾಗಿದ್ದ ಬಿ.ವಿ.ಕಕ್ಕಿಲ್ಲಾಯ ಮತ್ತಿಬ್ಬರು ಮುಖಂಡರು ಕೆ.ಆರ್.ಶ್ರೀಯಾನ್‌ರ ಮನೆಯಲ್ಲಿ ಕೆಲವು ದಿನ ಆಶ್ರಯ ಪಡೆದುಕೊಂಡಿದ್ದರು. ಕೆ.ಆರ್.ಶ್ರೀಯಾನರು ಹೈಸ್ಕೂಲ್ ಕಲಿಯುತ್ತಿದ್ದ ಅವಧಿ. ಪೋಲೀಸರು ಅವರ ಮನೆಗೆ ದಾಳಿ ಇಡುವ ಹಿಂದಿನ ದಿನವಷ್ಟೇ ಭೂಗತ ನಾಯಕರು ಅಲ್ಲಿಂದ ತಪ್ಪಿಸಿ ಬೇರೆಡೆಗೆ ಹೋಗಿದ್ದರು. ಪೋಲೀಸರು ಮನೆಯಲ್ಲೆಲ್ಲಾ ಹುಡುಕಾಡಿ ಬಳಿಕ ಬಾಲಕ ಕೆ.ಆರ್.ಶ್ರೀಯಾನ್‌ರನ್ನು ಉದ್ದೇಶಿಸಿ ಯಾರಾದರೂ ನಿಮ್ಮ ಮನೆಯಲ್ಲಿ ಇದ್ದರೇ ಎಂದು ವಿಚಾರಿಸಿದರು. ಇಲ್ಲವಲ್ಲ ಎಂದು ಉತ್ತರಿಸಿದ್ದರು ಶ್ರೀಯಾನರು. ಕಮ್ಯೂನಿಸ್ಟ್ ಚಳುವಳಿಯ ಅರಿವು ಅವರಿಗೆ ಮೂಡಿದುದು ಈ ಘಟನೆಯಿಂದಲೇ.

1952ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದಾಗ, ಗಣಪತಿ ಹೈಸ್ಕೂಲ್‌ನಲ್ಲಿ ಮೆಟ್ರಿಕ್ ವಿದ್ಯಾರ್ಥಿಯಾಗಿದ್ದ ಕೆ.ಆರ್.ಶ್ರೀಯಾನ್ ತನ್ನ ಸಮವಯಸ್ಕ ಮಿತ್ರರನ್ನು ಕೂಡಿಸಿಕೊಂಡು ಮಂಗಳೂರು ವಿಧಾನಸಭಾ ಕ್ಷೇತ್ರದ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ಎ. ಶಾಂತಾರಾಮ ಪೈಯವರ ಪರವಾಗಿ ಪ್ರಚಾರಕಾರ್ಯ ಆರಂಭಿಸುವುದರ ಮೂಲಕ ತಾನು ಇನ್ನು ಮುಂದೆ ಕಮ್ಯೂನಿಸ್ಟನೇ ಎಂಬುದರ ಪೂರ್ವಸೂಚನೆ ನೀಡಿದ್ದರು.

1953 ರಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ್ದ ತರುಣನೊಬ್ಬನಿಗೆ ಏನೆಲ್ಲಾ ಆಯ್ಕೆಗಳಿದ್ದುವು ಯೋಚಿಸೋಣ. ಶಿಕ್ಷಕ ತರಬೇತಿ ಪೂರ್ವಾರ್ಧವನ್ನು ಮುಗಿಸಿದ್ದ ಅವರಿಗೆ ಶಾಲಾ ಶಿಕ್ಷಕನಾಗುವ ಅವಕಾಶವಿದ್ದುವು. ಟೈಪಿಂಗ್ ತರಬೇತಿ ಹೊಂದಿದ್ದರಿಂದ ಸರಕಾರೀ ಇಲಾಖೆಗಳಲ್ಲೂ ಖಾಸಗೀ ಸಂಸ್ಥೆಗಳಲ್ಲೂ ಬಿಳಿಕಾಲರಿನ ಉದ್ಯೋಗ ಸಿಕ್ಕೇ ಸಿಗುತ್ತಿತ್ತು. ಮುಂಬಯಿಯಲ್ಲಿದ್ದ ಆಪ್ತರು ಮತ್ತೆ ಮತ್ತೆ ಆಹ್ವಾನಿಸುತ್ತಿರುವಾಗ, ಅಲ್ಲಿ ಉದ್ಯೋಗ, ಬಡ್ತಿ ಅಲ್ಲದೆ ಹೆಚ್ಚಿನ ಶಿಕ್ಷಣದ ಅವಕಾಶಗಳಿದ್ದುವು. ಅವುಗಳೆಲ್ಲವನ್ನೂ ತಿರಸ್ಕರಿಸಿ ಕೆ.ಆರ್.ಶ್ರೀಯಾನರು ಪ್ರವೇಶ ಪಡೆದುದು ಮಂಗಳೂರಿನ ಮೈದಾನು ರಸ್ತೆಯಲ್ಲಿದ್ದ ದ.ಕ.ಜಿಲ್ಲಾ ರೈತ ಸಂಘದ ಕಚೇರಿಗೆ.

ಮೆಟ್ರಿಕ್ ಮುಗಿಸಿದ ಬಳಿಕ ಕೆ.ಆರ್.ಶ್ರೀಯಾನರು ಪದಂಗಡಿಯಲ್ಲಿ ಗೋಡಂಬಿ ಕಾರ್ಮಿಕರ ಯೂನಿಯನ್ ಕಚೇರಿಯಲ್ಲಿ ಭೇಟಿಯಾದ ಡಾ|ಎಂ.ಎಸ್.ಶಾಸ್ತ್ರಿಯವರಿಂದ ಆಕರ್ಷಿತರಾಗಿ ಅವರನ್ನು ಆಗೀಗ ಭೇಟಿಯಾಗತೊಡಗಿದರು. ಅದೇ ಸಂದರ್ಭದಲ್ಲಿ ಅದೇ ಕಚೇರಿಯಲ್ಲಿ ಶ್ರೀಯಾನರನ್ನು ಗುರುತಿಸಿದ ಮಾಸ್ತ್ರು ಪಿ. ರಾಮಚಂದ್ರರಾಯರು ನೀವೇಕೆ ಪಾರ್ಟಿಗೆ ಬರಬಾರದೆಂದು ಆಹ್ವಾನವಿತ್ತರು. ಪರಿಣಾಮ ಶ್ರೀಯಾನರು ರೈತ ಸಂಘದ ಕಚೇರಿಯಲ್ಲಿ ಪ್ರತ್ಯಕ್ಷರಾದರು. ರೈತ ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿಯಾಗಿ ಅಂದು ಇದ್ದವರು ಎ.ಕೃಷ್ಣ ಶೆಟ್ಟಿ ಮತ್ತು ಎಂ.ಎಚ್.ಕೃಷ್ಣಪ್ಪನವರು. ಅವರುಗಳು ನಡೆಸಿದ ಸಮರಶೀಲ ರೈತ ಹೋರಾಟಗಳಲ್ಲಿ ಸಾಥ್ ನೀಡಿದವರು ಶ್ರೀಯಾನರು.

1955ರಲ್ಲಿ ನಡೆದ ಮುಲ್ಕಿ ರೈತರ ಧೀರ ಹೋರಾಟ ಅವರ ಚಳುವಳಿಗಳಿಗೆ ಮುನ್ನುಡಿಯಾಯಿತು. ರೈತರ ಹೋರಾಟಗಳಲ್ಲಿ ಹಂಚಿನ ಕಾರ್ಮಿಕರು, ನೇಯ್ಗೆ ಕಾರ್ಮಿಕರು, ಬೀಡಿ ಕಾರ್ಮಿಕರು, ಮುನ್ಸಿಪಲ್ ಕಾರ್ಮಿಕರು ಎಲ್ಲರೂ ಕೂಡಿ ಹೋರಾಟ ಮಾಡುತ್ತಿದ್ದ ಸಂದರ್ಭವದು. ಎ.ಕೃಷ್ಣ ಶೆಟ್ಟರು ಹಂಚಿನ ಕಾರ್ಮಿಕರ ಸಂಘದ ಅಧ್ಯಕ್ಷರಾಗಿದ್ದರು; ಬಿ.ವಿ.ಕಕ್ಕಿಲ್ಲಾಯರು ಕಾರ್ಯದರ್ಶಿಯಾಗಿದ್ದರು. ಬಿ.ವಿ.ಕಕ್ಕಿಲ್ಲಾಯ, ಸಿಂಪ್ಸನ್ ಸೋನ್ಸ್, ಎ.ಶಾಂತಾರಾಮ ಪೈ, ಡಾ|ಎಂ.ಎಸ್.ಶಾಸ್ತ್ರಿ, ಪಿ.ರಾಮಚಂದ್ರ ರಾವ್ ಮೊದಲಾದ ಘಟಾನುಘಟಿ ಕಮ್ಯೂನಿಸ್ಟ್ ನಾಯಕರ ಮಾರ್ಗದರ್ಶನ ಹಾಗೂ ಕಾರ್ಯವೈಖರಿಯಿಂದ ಕೆ.ಆರ್.ಶ್ರೀಯಾನರು ತಮ್ಮ ಚಿಂತನೆ ಹಾಗೂ ಸಮರಶೀಲತೆಯನ್ನು ಹರಿತಗೊಳಿಸಿಕೊಂಡರು.

ಮೆಟ್ರಿಕ್ಯುಲೇಷನ್ ಮುಗಿಸಿ ಏನು ಎತ್ತ ಎಂದು ಆಲೋಚಿಸುತ್ತಿರುವಾಗ ಕ್ರಿಕೆಟ್, ವಾಲಿಬಾಲ್ ಇತ್ಯಾದಿ ಕ್ರೀಡಾಸಕ್ತನಾಗಿದ್ದ ಕೆ.ಆರ್.ಶ್ರೀಯಾನ್ ತನ್ನ ಊರಿನ ಗೆಳೆಯರನ್ನು ಸೇರಿಸಿಕೊಂಡು ಸ್ಥಾಪಿಸಿದ ಕೊಂಚಾಡಿ ಯುವಕ ಕಲಾ ಮಂಡಲಿ ಇಂದಿಗೂ ಇದೆ. ಇದಕ್ಕೆ ಸ್ಫೂರ್ತಿ 1952ರಲ್ಲಿ ಮಂಗಳೂರಿನಲ್ಲಿ ಆರಂಭವಾಗಿದ್ದ 'ಜನಪದ ಕಲಾ ಮಂಡಳಿ' ಎಂಬ ಸಾಂಸ್ಕೃತಿಕ ಸಂಘಟನೆ ಏರ್ಪಡಿಸಿದ್ದ 3 ದಿನಗಳ ಸಾಂಸ್ಕೃತಿಕ ಉತ್ಸವ. ಕೊಂಚಾಡಿ ಯುವಕ ಕಲಾ ಮಂಡಳಿಯ ವಾರ್ಷಿಕೋತ್ಸವಕ್ಕಾಗಿ ಆಡಿದ್ದ ನಾಟಕದಲ್ಲಿ ಭಾಗಿಯಾದ ಬಳಿಕ ಮುಂದಿನ 25 ವರ್ಷಗಳ ಅವಧಿಯಲ್ಲಿ ಶ್ರೀಯಾನರು 15 ಕನ್ನಡ, ತುಳು ನಾಟಕಗಳನ್ನು ಬರೆದುದಲ್ಲದೆ, ನಿರ್ದೇಶನ ಕೂಡಾ ಮಾಡಿದ್ದಾರೆ. ಕಮ್ಯೂನಿಸ್ಟ್ ಪಕ್ಷದಲ್ಲಿ ಜವಾಬ್ದಾರಿ 1978 ರಿಂದ ಅವರಿಗೆ ಬಂದದ್ದಲ್ಲವಾಗಿದ್ದರೆ ಈ ವೇಳೆಗೆ ಇನ್ನೆಷ್ಟೋ ನಾಟಕ ಕೃತಿಗಳು ಅವರಿಂದ ಬರುತ್ತಿತ್ತು. ಅವರು ಕೊನೆಯದಾಗಿ 1980ರಲ್ಲಿ ಬರೆದ, ತೊಪ್ಪಿಲ್ ಬಾಸಿಯವರ ನಾಟಕ ಆಧಾರಿತ 'ಇಲ್ಲ್ ದೆತ್ತಿ ಮಗೆ' ಅವರ ಪ್ರಮುಖ ನಾಟಕ ಕೃತಿಯಾಗಿದ್ದು, ಹಲವಾರು ಮರುಪ್ರದರ್ಶನ ಕಂಡಿದೆ.

ಕೊಂಚಾಡಿ ಯುವಕ ಕಲಾ ಮಂಡಲಿ ಹಾಗೂ ಕೆ.ಆರ್.ಶ್ರೀಯಾನ್ ಅವರ ನಾಟಕಗಳು ಬೇರೆ ಕಡೆ ಯುವಕ ಸಂಘಗಳ ರಚನೆಗೆ ಸ್ಫೂರ್ತಿ ಕೊಟ್ಟಿತು. ಯುವಕ ಸಂಘಗಳು ರಾತ್ರಿಶಾಲೆ ಕ್ರೀಡಾ ಕೂಟಗಳನ್ನು ನಡೆಸಿದವು. ಹಗಲು ಅಧ್ಯಾಪಕರಾಗಿದ್ದು ಬಿಡುವಿನಲ್ಲಿ ಕಮ್ಯೂನಿಸ್ಟ್ ಪ್ರಚಾರಕರಾಗಿದ್ದ ಪಿ.ರಾಮಚಂದ್ರರಾಯರೊಡನೆ ಕೇಂದ್ರೀಕೃತ ಯುವಜನ ಸಂಘಟನೆ ಕಟ್ಟುವ ಬಗ್ಗೆ ಕೆ.ಆರ್.ಶ್ರೀಯಾನರು ಚರ್ಚಿಸಿದರು. ಈಗಾಗಲೇ 7 ಕಡೆ ಶ್ರೀಯಾನರ ಪ್ರೇರಣೆಯಿಂದ ಯುವಕ ಸಂಘಗಳಾಗಿದ್ದು ಆ ಹಿನ್ನೆಲೆಯಲ್ಲಿ 1955ರಲ್ಲಿ 'ಡೆಮೊಕ್ರೆಟಿಕ್ ಯೂತ್ ಲೀಗ್' ಆರಂಭವಾದಾಗ ಡಾ|ಎಂ.ಎಸ್.ಶಾಸ್ತ್ರಿ ಅಧ್ಯಕ್ಷರಾಗಿಯೂ, ಕೆ.ಆರ್.ಶ್ರೀಯಾನ್ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದರು. ಅಂದಿನ ದಿನಗಳಲ್ಲಿ ಈ ಸಂಘಟನೆ ಮಂಗಳೂರಿನ ಯುವಕರ ಚಟುವಟಿಕೆಗಳ ಕೇಂದ್ರವಾಗಿತ್ತು.

ಕೆ.ಆರ್.ಶ್ರೀಯಾನರು ರೈತ ಸಂಘದಲ್ಲಿ ಕೆಲಸ ಮಾಡುತ್ತಿದ್ದ ಹೊಸದರಲ್ಲಿ ಅಂದರೆ 1954ರಲ್ಲಿ ನಡೆದ ಹಂಚು ಕಾರ್ಮಿಕರ ಮುಷ್ಕರದ ವೇಳೆ ಗೂಂಡಾಗಳೊಂದಿಗೆ ಘರ್ಷಣೆಯಲ್ಲಿ ಒಬ್ಬ ಗೂಂಡಾ ಮೃತನಾದ. ಇದರಿಂದ ಕಾರ್ಮಿಕ ಮುಖಂಡರ ಬಂಧನ ಹಾಗೂ ಮೊಕದ್ದಮೆ ನಡೆಯಿತು. ಆ ದಿನಗಳಲ್ಲಿ ಗೋಡಂಬಿ ಕಾರ್ಖಾನೆಗಳಲ್ಲಿ 10,000 ಮಹಿಳಾ ಕಾರ್ಮಿಕರಿದ್ದರು. ಶ್ರೀಯಾನರ ಮನೆ ಸಮೀಪವೂ ಕಾರ್ಖಾನೆಗಳಿದ್ದುವು. ಮಹಿಳೆಯರು ತೀವ್ರ ಶೋಷಣೆಗೆ ಈಡಾಗಿದ್ದರು. 1954ರ ಕಾರ್ಮಿಕರ ಅನ್ನಸತ್ಯಾಗ್ರಹ ಮಹಿಳೆಯರ ಕ್ರಾಂತಿಕಾರಿ ಹೋರಾಟವಾಗಿತ್ತು. ಅವರ ಸತ್ಯಾಗ್ರಹ ಸಂದರ್ಭ ಶ್ರೀಯಾನರು ಕ್ರಾಂತಿಗೀತೆಗಳನ್ನು ಹಾಡುತ್ತಿದ್ದರು. ರೈತರ ಚಳುವಳಿಯಂತೂ 1948 ರಿಂದ ದ.ಕ. ಜಿಲ್ಲೆಯ ಗ್ರಾಮಾಂತರಗಳಲ್ಲಿ ಆರಂಭವಾಗಿತ್ತು. 1954ರಲ್ಲಿ ಪ್ರಥಮ ಬಾರಿಗೆ ಜಿಲ್ಲೆಯ ರೈತರ ಸಮ್ಮೇಳನ ನಡೆದು, 'ಉಳುವವನೆ ಹೊಲದೊಡೆಯ' ನಿರ್ಣಯ ಕೈಗೊಳ್ಳಲಾಯಿತು. ಇದರ ಬಳಿಕ ಜಿಲ್ಲೆಯ ಗ್ರಾಮಾಂತರಗಳಲ್ಲಿ ರೈತ ಸಂಘ, ಗೇಣಿ ರೈತರ ಹೋರಾಟಗಳು ವಿಸ್ತರಣೆಗೊಂಡವು. ರೈತರ ಸಭೆಗಳಲ್ಲಿ ಎಂ.ಎಚ್.ಕೃಷ್ಣಪ್ಪನವರು ಬರೆದ 'ರೈತ ವಿಜಯ' ಯಕ್ಷಗಾನದ ಪ್ರಯೋಗಗಳು ನಡೆದುವು. ತಾಳಮದ್ದಲೆಗಳೂ ನಡೆದುವು. ಅವುಗಳಲ್ಲಿ ಶ್ರೀಯಾನರು ಪಾತ್ರಧಾರಿಗಳಾಗಿರುತ್ತಿದ್ದರು. ಶ್ರೀಯಾನರು ಬರೆದ ರೈತರ ಪ್ರಶ್ನೆಗಳನ್ನು ಕುರಿತಾದ 'ಎಂಕ್ಲೆಗ್‌ಲಾ ಬದುಕೊಡು' ತುಳು ನಾಟಕ, ಅವರೇ ಹಾಡಿದ ಹೋರಾಟದ ಗೀತೆಗಳು ಜನಪ್ರಿಯವಾದುವು. ○





ಸಹರಾನ್‌ಪುರದಲ್ಲಿ ಕೋಮುವಾದಿ–ಜಾತಿವಾದಿ ಶಕ್ತಿಗಳ ಆಟಾಟೋಪ



ಸಹರಾನ್‌ಪುರದಲ್ಲಿ ಎಪ್ರಿಲ್ 24ರ ಮೊದಲ ಘಟನೆಯೇ ಉತ್ತರಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ಸರಕಾರ ಅಧಿಕಾರಕ್ಕೆ ಬಂದ ನಂತರ ಹಿಂದೂತ್ವವಾದಿ ಶಕ್ತಿಗಳಿಗೆ ಹಿಂದೂ ಯುವ ವಾಹಿನಿಯಿಂದ ಇನ್ನಷ್ಟು ಬಲ ಬಂದಿರುವುದರ ಸಂಕೇತವಾಗಿತ್ತು. ಈ ಶಕ್ತಿಗಳಿಗೆ ಉತ್ತೇಜನ ನೀಡುವುದನ್ನು ಮುಂದುವರಿಸಿದರೆ, ಉತ್ತರ ಪ್ರದೇಶ ಜಾತಿ ಮತ್ತು ಕೋಮು ಹಿಂಸಾಚಾರದ ಕುಲುಮೆಯಾಗುತ್ತದೆ.



*** ಪ್ರಕಾಶ್ ಕಾರಟ್**

ಸಹರಾನ್‌ಪುರ ಜಿಲ್ಲೆಯ ಶಬ್ಬೀರ್‌ಪುರ ಗ್ರಾಮದಲ್ಲಿ ದಲಿತರ ಮೇಲೆ ನಡೆದ ದಾಳಿಯು, ಉತ್ತರ ಪ್ರದೇಶದಲ್ಲಿ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ಜಯ ಹಾಗೂ ಆದಿತ್ಯನಾಥ ಸರಕಾರ ರಚನೆಯ ನಂತರ ಕೋಮುವಾದಿ ಮತ್ತು ಜಾತಿವಾದಿ ಶಕ್ತಿಗಳನ್ನು ಹರಿಯಬಿಟ್ಟಿರುವ ಹಿಂಸಾಚಾರಕ್ಕೆ ಸಂಕೇತವಾಗಿದೆ.

ಉತ್ತರ ಪ್ರದೇಶದಲ್ಲಿ ಹೊಸ ಸರಕಾರ ಅಧಿಕಾರ ಸ್ವೀಕಾರ ಮಾಡುತ್ತಲೇ ಮುಸ್ಲಿಮರು ಮತ್ತು ದಲಿತರ ಮೇಲೆ ಹಲ್ಲೆಗಳು ಆರಂಭವಾದವು. ಮಾಂಸದಂಗಡಿಗಳು ಮತ್ತು ಕಸಾಯಿಖಾನೆಗಳನ್ನು ಮುಚ್ಚಿದ್ದರಿಂದ ಲಕ್ಷಾಂತರ ಮುಸ್ಲಿಮರು ಹಾಗೂ ದಲಿತರ ಜೀವನೋಪಾಯ ತೊಂದರೆಗೆ ಸಿಲುಕಿದೆ. ಯೋಗಿ ಅಧಿಕಾರದ ಸೂತ್ರ ಹಿಡಿದಿರುವುದರಿಂದ ಕಟ್ಟಾ ಕೋಮುವಾದಿ ಮತ್ತು ಮೇಲ್ಜಾತಿಯ ಶಕ್ತಿಗಳು ತಮ್ಮ ಮನಬಂದಂತೆ ವರ್ತಿಸುತ್ತಿರುವುದು ಒಂದು ದುಷ್ಟ ಲಕ್ಷಣ. 2002ರಲ್ಲಿ ಯೋಗಿ ಆದಿತ್ಯನಾಥ ರಚಿಸಿದ ಖಾಸಗಿ ಹಿಂಸಾತ್ಮಕ ಕಾವಲುಕೋರತನದ ಪಡೆಯಾದ ಹಿಂದೂ ಯುವ ವಾಹಿನಿ ಇದೀಗ ರಾಜ್ಯದಾದ್ಯಂತ ಸಾವಿರಾರು ಹೊಸ ಸದಸ್ಯರನ್ನು ಸೇರಿಸಿಕೊಳ್ಳುತ್ತಿದೆ. ಇವರು ಲಂಗುಲಗಾಮಿಲ್ಲದ ರೀತಿಯಲ್ಲಿ ಹಿಂದೂತ್ವ ಗಲಭೆಕೋರರಾಗಿ ಕೆಲಸ ಮಾಡುತ್ತಿದ್ದಾರೆ.

ಮೇ 5ರಂದು ಮೇಲ್ಜಾತಿ ಠಾಕೂರರು, ಜಿಲ್ಲಾಡಳಿತ ಅನುಮತಿ ನಿರಾಕರಿಸಿದರೂ ಶಿಮ್ಲಾನಾ ಗ್ರಾಮದಲ್ಲಿ ಮಹಾರಾಣಾ ಪ್ರತಾಪರ ಪ್ರತಿಮೆ ಸ್ಥಾಪನೆ ಸಂಬಂಧ ಮೆರವಣಿಗೆ ನಡೆಸಿದರು. ಮೆರವಣಿಗೆ ಸಾಗುತ್ತಿದ್ದಾಗ ಅದರಲ್ಲಿದ್ದ ಒಂದು ಗುಂಪಿನವರು ಆಕ್ರಮಣಕಾರಿ ಘೋಷಣೆಗಳನ್ನು ಕೂಗುತ್ತಾ ಶಬ್ಬೀರ್‌ಪುರದ ದಲಿತ ಬಸ್ತಿಯತ್ತ ಧಾವಿಸಿದರು. ಮೈಕ್‌ನಲ್ಲಿ ಕರ್ಕಶ ದನಿಯಲ್ಲಿ ಹಾಡುಗಳನ್ನು ಹಾಕಿದರು. ಇವೆಲ್ಲವನ್ನು ಆ ಪ್ರದೇಶದ ದಲಿತರು ಆಕ್ಷೇಪಿಸಿದರು. ಇದೇ ಎಪ್ರಿಲ್ 14ರಂದು ಇದೇ ಗ್ರಾಮದ ದಲಿತರು ಡಾ. ಬಿ.ಆರ್.ಅಂಬೇಡ್ಕರ್ ಪುತ್ಥಳಿಯನ್ನು ಸ್ಥಾಪಿಸಲು ಯತ್ನಿಸಿದಾಗ ಠಾಕೂರರು ಅದನ್ನು ವಿರೋಧಿಸಿದ್ದರು. ಆಡಳಿತ ಕೂಡ ಪ್ರತಿಮೆ ಸ್ಥಾಪನೆಯನ್ನು ನಿಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ, ಮೇಲ್ಜಾತಿಯವರ ದುರಹಂಕಾರ ಮತ್ತು ಭಂಡ ಪ್ರದರ್ಶನವನ್ನು ದಲಿತರು ಆಕ್ಷೇಪಿಸಿದ್ದು ಸರಿಯಾಗಿಯೇ ಇತ್ತು. ಈ ಹಂತದಲ್ಲಿ ಪೊಲೀಸರು ಮಧ್ಯಪ್ರವೇಶ ಮಾಡಿದಾಗ ಠಾಕೂರರನ್ನು ಸೇರಿ–ಕೊಂಡ ಮೇಲ್ಜಾತಿಯ ಇನ್ನಷ್ಟು ಜನರು ದಲಿತರ ಮೇಲೆ ಅಮಾನುಷ ಹಲ್ಲೆ ಮಾಡಿದರು.

65 ಮನೆಗಳು, ಕೃಷಿ ಉಪಕರಣಗಳು, ದನಕರುಗಳ ಮೇವು ಮತ್ತು ಮೋಟರ್ ಸೈಕಲ್‌ಗಳನ್ನು ನಾಶ ಮಾಡಲಾಯಿತು. ವೃದ್ಧರು, ಮಹಿಳೆಯರು ಮತ್ತು ಮಕ್ಕಳೂ ಸೇರಿದಂತೆ ಅನೇಕ ಜನರನ್ನು ಯದ್ವಾತದ್ವಾ ಥಳಿಸಲಾಯಿತು. ಆ ಪೈಕಿ 14ರಿಂದ 15 ಜನರಿಗೆ ಗಂಭೀರ ಗಾಯಗಳಾಗಿವೆ. ಈ ಪರಿಯ ಹಿಂಸಾತ್ಮಕ ಹಲ್ಲೆಗೆ ಪೊಲೀಸರು ಮೂಕಪ್ರೇಕ್ಷಕರಾಗಿದ್ದರು.

ಸಹರಾನ್‌ಪುರದಲ್ಲಿ ಎಪ್ರಿಲ್ 24ರ ಮೊದಲ ಘಟನೆಯಲ್ಲೇ ಹಿಂದೂತ್ವವಾದಿ ಶಕ್ತಿಗಳಿಗೆ ಯುವ ವಾಹಿನಿಯಿಂದ ಇನ್ನಷ್ಟು ಬಲ ಬಂದಿರುವುದು ಗೊತ್ತಾಗುತ್ತದೆ. ಅಂಬೇಡ್ಕರ್ ಜಯಂತಿ ಆಚರಣೆಗೆ–ೆಂದು ಏರ್ಪಡಿಸಲಾಗಿದ್ದ ಮೆರವಣಿಗೆಗೆ ಅಧಿಕಾರಿಗಳು ಅನುಮತಿ ನೀಡಿರಲಿಲ್ಲ. ಆದರೂ ಬಿಜೆಪಿ ನಾಯಕರು ಮೆರವಣಿಗೆ ನಡೆಸಿದ್ದರು. ಆ ಮೆರವಣಿಗೆಯಲ್ಲಿ ದಲಿತರಾರೂ ಭಾಗವಹಿಸಿರಲಿಲ್ಲ ಮತ್ತು ಅದರ ನಿಜವಾದ ಉದ್ದೇಶ ಏನೆಂಬುದು ಅದು ಮುಸ್ಲಿಮರೇ ಹೆಚ್ಚಿರುವ ಪ್ರದೇಶವನ್ನು ಪ್ರವೇಶಿಸಿದಾಗ ಸ್ಪಷ್ಟವಾಗಿತ್ತು. ಅಲ್ಪಸಂಖ್ಯಾತ–ವಿರೋಧಿ ಘೋಷಣೆಗಳನ್ನು ಕೂಗಲಾಯಿತು ಹಾಗೂ ಮುಸ್ಲಿಮರಿಗೆ ಸೇರಿದ ಅನೇಕ ವಾಹನಗಳನ್ನು ಸುಟ್ಟು ಹಾಕಲಾಯಿತು. ಪೊಲೀಸರು ಮಧ್ಯಪ್ರವೇಶ ಮಾಡಿದ್ದರಿಂದ ಬಿಜೆಪಿಯ ಒಂದು ಗುಂಪು ವರಿಷ್ಟ ಪೋಲೀಸ್ ಸೂಪರಿಂಟೆಂಡೆಂಟ್‌ರ ನಿವಾಸದ ಮೇಲೆಯೇ ದಾಳಿ ಮಾಡಿತು. ಅದಾದ ಎರಡು ದಿನಗಳ ನಂತರ ಆ ಪೊಲೀಸ್ ಅಧಿಕಾರಿಯನ್ನು ಅವಮಾನಕರ ರೀತಿಯಲ್ಲಿ ವರ್ಗ ಮಾಡಲಾಯಿತು. ಅಲ್ಲಿಗೆ ಆದಿತ್ಯನಾಥ ಸರಕಾರದ ಉದ್ದೇಶ ಏನೆಂಬುದು ಸ್ಪಷ್ಟವಾಯಿತು. ಇದರಿಂದ ಹಿಂದೂತ್ವ ಕಾವಲುಕೋರರಿಗೆ ಸಹಜವಾಗಿಯೇ ಇನ್ನಷ್ಟು ಪ್ರೋತ್ಸಾಹ ಸಿಕ್ಕಿದಂತಾಗಿದೆ.

ಇದರ ಫಲಿತಾಂಶವೇ ಅನೇಕ ಜಿಲ್ಲೆಗಳಲ್ಲಿ ನಡೆಯುತ್ತಿರುವ ಹಲ್ಲೆಗಳು. ಶಬ್ಬೀರ್‌ಪುರ ಘಟನೆಯ ಕೆಲವೇ ದಿನಗಳ ಮೊದಲು, ಬುಲಂದಶಹರ್ ಜಿಲ್ಲೆಯ ಸೋಹಿ ಗ್ರಾಮದಲ್ಲಿ 54 ವರ್ಷ ಪ್ರಾಯದ ಗುಲಾಮ್ ಅಹಮದ್ ಅವರನ್ನು ಯುವ ವಾಹಿನಿ ಮಂದಿ ಹೊಡೆದು ಕೊಂದು ಹಾಕಿದರು. ಗ್ರಾಮದ ಹಿಂದೂ ಮಹಿಳೆಯೊಬ್ಬಳು ಮುಸ್ಲಿಮ್ ಪುರುಷನೊಂದಿಗೆ ಓಡಿ ಹೋಗಿದ್ದರಿಂದ 'ರೇಗಿ ಹೋದ' ಈ ಮಂದಿ ಈ ಕೊಲೆ ಮಾಡಿದರು ಎನ್ನಲಾಗುತ್ತಿದೆ.

ಇದೀಗ ಸಹರಾನ್‌ಪುರ ಜಿಲ್ಲೆಯ ಆಡಳಿತವು ಸರಕಾರದ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಕಾಣುತ್ತಿದೆ. ಶಬ್ಬೀರ್‌ಪುರ ಸಂತ್ರಸ್ತರಿಗೆ ಪರಿಹಾರ ಮತ್ತು ನ್ಯಾಯ ಕೋರಿ ದಲಿತರು ಮೇ 9ರಂದು ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನಾ ರ್‍ಯಾಲಿ ನಡೆಸಲು ಯೋಜಿಸಿದ್ದರು. ಅದಕ್ಕೆ ಅನುಮತಿ ನಿರಾಕರಿಸಲಾಯಿತು. ದಲಿತರು ಗಾಂಧಿ ಮೈದಾನದಲ್ಲಿ ನೆರೆದು ಶಾಂತಿಯುತ ಮೆರವಣಿಗೆ ಆರಂಭಿಸಿದಾಗ ಅವರ ಮೇಲೆ ಹೇಯವಾಗಿ ಲಾಠಿ ಪ್ರಹಾರ ಮಾಡಲಾಯಿತು. ಅದಕ್ಕೆ ಪ್ರತಿಯಾಗಿ ಕಲ್ಲು ತೂರಾಟ ಹಾಗೂ ದೊಂಬಿ ನಡೆಯಿತು. ಆದರೆ ಪ್ರತಿಭಟನೆಕಾರರು ಸಾಮಾನ್ಯ ನಾಗರಿಕರಿಗೆ ಮೇಲೆ ಯಾವುದೇ ರೀತಿಯಲ್ಲಿ ತೊಂದರೆ ಮಾಡಲಿಲ್ಲ. ಅದಾದ ನಂತರ ಜಿಲ್ಲಾಡಳಿತ ಹುಡುಕಾಟದ ಕಾರ್ಯಾಚರಣೆ ಆರಂಭಿಸಿ ದಲಿತರ ಮೇಲೆ ಗುರಿ ಮಾಡುತ್ತಿದೆ. ಸಂತ್ರಸ್ತರಿಗೆ ಇದುವರೆಗೂ ಯಾವುದೇ ಪರಿಹಾರ ಘೋಷಿಸಿಲ್ಲ.

ಈ ಶಕ್ತಿಗಳಿಗೆ ಉತ್ತೇಜನ ನೀಡುವುದನ್ನು ಮುಂದುವರಿಸಿದರೆ, ಉತ್ತರ ಪ್ರದೇಶವು ಜಾತಿ ಮತು ಕೋಮು ಹಿಂಸಾಚಾರದ ಕುಲುಮೆಯಾಗುತ್ತದೆ.

ಉತ್ತರ ಪ್ರದೇಶ ಸರಕಾರಕ್ಕೆ ತನ್ನ ಪ್ರಾಥಮಿಕ ಸಾಂವಿಧಾನಿಕ ಕರ್ತವ್ಯಗಳನ್ನು ನಿಭಾಯಿಸುವುದನ್ನು ಉಲ್ಲಂಘಿಸಲು ಅವಕಾಶ ನೀಡಬಾರದು. ಶಬ್ಬೀರ್‌ಪುರದ ಎಲ್ಲಾ ಸಂತ್ರಸ್ತ ಜನರಿಗೆ ಆಡಳಿತವು ಪರಿಹಾರ ಹಾಗೂ ಸಹಾಯಹಸ್ತ ಚಾಚಬೇಕು. ದಲಿತರ ಮೇಲೆ ಹಲ್ಲೆ ನಡೆಸಿದ ಎಲ್ಲರನ್ನೂ ಬಂಧಿಸಿ ಶಿಕ್ಷಿಸಬೇಕು. ಹಿಂದೂತ್ವ ಕಾಲಿಕೋರರನ್ನು ಹತ್ತಿಕ್ಕಲು ಪೊಲೀಸರಿಗೆ ಸ್ಪಷ್ಟ ನಿರ್ದೇಶನ ನೀಡಬೇಕು

ಅನು: ವಿಶ್ವ

ಒಂದು ಹಳ್ಳಿಯ ಮಂದಿ ಜಾನುವಾರು ವ್ಯಾಪಾರಿಗಳ ಕಾರುಗಳನ್ನು ರಾತ್ರಿಯಿಂದ ಮರುದಿನ ಮಧ್ಯಾಹ್ನದ ವರೆಗೆ ಬೆನ್ನಟ್ಟಿ ಮೂವರನ್ನು ಜಮ್‌ಶೇದ್‌ಪುರದ ಬಳಿ ಬಡಿದು ಸಾಯಿಸಿದರು.

–ದಿ ಟೆಲಿಗ್ರಾಫ್, ಮೇ 19

ಬಿಜೆಪಿ ಆಳ್ವಿಕೆಯ ಝಾರ್ಖಂಡ್ ಜಂಗಲ್ ರಾಜ್ ಪದವಿಗೆ ಅತ್ಯಂತ ಯೋಗ್ಯ. ಹಿಂದೆ ಲತೇಹಾರ್ ಮುಸ್ಲಿಮ್ ಬಾಲಕ'ರಿಗೆ ನೇಣು. ಈಗ ಇದು. ಸರಕಾರ ಪೂರ್ಣವಾಗಿ ಮೌನ.

***

ಉದ್ಯೋಗ ಬೆಳವಣಿಗೆ ಎಂಟು ವರ್ಷಗಳಲ್ಲೇ ಅತಿ ಕಡಿಮೆ, ಯುವಜನರಿಗೆ ಕಷ್ಟದ ದಿನಗಳು–ಜಯಂತ್ ರಾಯ್ ಚೌಧುರಿ,

–ಟೆಲಿಗ್ರಾಫ್, ಮೇ18

ಮೋದಿ 10 ಕೋಟಿ ಹೊಸ ಉದ್ಯೋಗಗಳ ಆಶ್ವಾಸನೆ ಕೊಟ್ಟರು. ಇಲ್ಲಿದೆ ಸತ್ಯ(ಹೊಸ ಮಾಹಿತಿ ಸರಣಿ ತಂದರೂ ಕೂಡ). ನೌಕರಿ ಬದಲಿಗೆ ನಮಗೆ ನೌಟಂಕಿ (ನಾಟಕ ಪ್ರದರ್ಶನ)

***

ಮೇ16

ಕೇವಲ 6% ಕೃಷಿ ಸಾಲ ಪಾವತಿಯಾಗಿಲ್ಲ, ಆದರೆ ಕಂಪನಿಗಳು ತಮ್ಮ 14% ಸಾಲಗಳನ್ನು ಹಿಂದಿರುಗಿಸಿಲ್ಲ. ಸರಕಾರ ಅವರನ್ನು ಸಾರ್ವಜನಿಕ ವಲಯದ ಘಟಕಗಳ ಮೂಲಕ ಬಚಾವು ಮಾಡುತ್ತದೆ.

ನೆನಪಿರಲಿ, ಬ್ಯಾಂಕುಗಳ ಸಾಲಗಳಲ್ಲಿ ಕೃಷಿ ಸಾಲ ಕೇವಲ 6% ಮತ್ತು ಕಾರ್ಪೋರೇಟ್‌ಗಳ ಸಾಲ 37%. ಇದು ಬಿಕ್ಕಟ್ಟಿನ ಗಂಭೀರತೆಯನ್ನು ಹೆಚ್ಚಿಸಿದೆ.

ಸೀತಾರಾಂ ಯೆಚುರಿ

ಟ್ವಿಟರ್‌ನಲ್ಲಿ

twitter.com/SitaramYechury
FB:https://www.facebook.com/ComradeSRY



***

ಮೇ 15ರಂದು ತ್ರಿಪುರ ಎಸ್‌ಎಫ್‌ಐ ಸಮ್ಮೇಳನದಲ್ಲಿ

ಭವಿಷ್ಯದ ಸೂರ್ಯಕಿರಣಗಳೋ ಅಥವ ಭೂತಕಾಲದ ಅಂಧಕಾರವೋ? ಭಾರತದ ಯುವಜನ ಈ ಸಮರವನ್ನು ಗೆಲ್ಲಬೇಕು.

***

ಮೇ 12ರಂದು ಸರಕಾರ ಬಿಡುಗಡೆ ಮಾಡಿದ ಸಗಟು ಬೆಲೆಗಳ ಸೂಚ್ಯಂಕದ ಹೊಸ ಸರಣಿಯ ಪ್ರಕಾರ ಕಳೆದ ಆರು ತಿಂಗಳಲ್ಲಿ ಹಿಂದೆ ಹೇಳಿದ್ದಕ್ಕಿಂತ ಹೆಚ್ಚಿನ ಬೆಲೆಯೇರಿಕೆ

ಉದ್ಯೋಗ ನಷ್ಟ ಮತ್ತು ಬೆಲೆಗಳಲ್ಲಿ ಏರಿಕೆ. ಸಾಮಾನ್ಯ ಭಾರತೀಯ ಬದುಕುಳಿಯುವದಾದರೂ ಹೇಗೆ? ಕಟ್ಟಕತೆಗಳು ಆಕರ್ಷಕವಾಗಿರುತ್ತವೆ, ಆದರೆ ಅನುಭವಕ್ಕೆ ಬರುವುದು ಸತ್ಯ ಮಾತ್ರ

***

ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಹೊಸ ಸರಣಿ ನೋಟುರದ್ಧತಿಯಿಂದ ಉತ್ಪಾದನಾ ವಲಯದ ಮೇಲೆ ಇನ್ನಷ್ಟು ತೀವ್ರ ದುಷ್ಪರಿಣಾಮವನ್ನು ತೋರಿಸುತ್ತಿದೆ.

– ಮೇ 14

ಇದು ಸರಕಾರೀ ಮಾಹಿತಿಗಳ ಪ್ರಕಾರವೇ ಸಂಘಟಿತ ವಲಯಕ್ಕೆ ಆಗಿರುವ ಧಕ್ಕೆ. ಇನ್ನು ಅನೌಪಚಾರಿಕ/ ಅಸಂಘಟಿತ ವಲಯದ ಕಾರ್ಮಿಕರ ಪರಿಸ್ಥಿತಿಯನ್ನು ಊಹಿಸಿಕೊಳ್ಳಿ.

***

ನಮ್ಮ ಸೇನಾಪಡೆಗಳು ಕಾಶ್ಮೀರಿಗಳಿಗೆ ವಿರುದ್ಧವಾಗಿಲ್ಲ, ನಮ್ಮ ಕೆಲಸ ಭಯೋತ್ಪಾದಕರನ್ನು ಪ್ರತ್ಯೇಕಿಸಿ ಗುರಿಯಿಡುವುದು

– ಸೇನಾಧ್ಯಕ್ಷ ಜನರಲ್ ರಾವತ್, ಮೇ 12

ಜನಗಳನ್ನು ಪ್ರತ್ಯೇಕತಾವಾದಿಗಳಿಂದ ಪ್ರತ್ಯೇಕಿಸಲು ರಾಜಕೀಯ ಪ್ರಕ್ರಿಯೆಯನ್ನು ಅದರೊಂದಿಗೇ ಆರಂಭಿಸಬೇಕು. ಇದುನಾವು ಬಹಳ ಕಾಲದಿಂದ ಮಾಡುತ್ತಿರುವ ಶಿಫಾರಸು

ಮುಸ್ಲಿಂ ಯುವ ಸಮಾವೇಶ: ಚಾರಿತ್ರಿಕ ಯಶಸ್ಸು

ಮೇ 14–15 ರಂದು ಡಿ.ವೈ.ಎಫ್.ಐ. ಅನುಮಾನಿತ, ಅವಮಾನಿತ ಸಮುದಾಯದ ನೋವು ನಲಿವುಗಳ ಕುರಿತು ಚರ್ಚೆ ಸಂವಾದ ನಡೆಸಲು "ಜಾತ್ಯತೀತೆ, ಸಬಲೀಕರಣ, ಮುನ್ನಡೆ"ಯ ಘೋಷಣೆಗಳೊಂದಿಗೆ ಸಂಘಟಿಸಿದ್ದ ಮುಸ್ಲಿಂ ಯುವ ಸಮಾವೇಶ ಯಶಸ್ವಿಯಾಗಿದೆ. ಎರಡು ದಿನಗಳಲ್ಲಿ ಉದ್ಘಾಟನಾ ಮತ್ತು 7 ಗೋಷ್ಠಿಗಳಲ್ಲಿ 17 ಪರಿಣತರು ಹಾಗೂ ಸುಮಾರು 750 ಜನ ಭಾಗವಹಿಸಿದ್ದ ಸಮಾವೇಶ ಹಲವು ರೀತಿಗಳಲ್ಲಿ ಚಾರಿತ್ರಿಕವಾಗಿತ್ತು. ಈ ಚಾರಿತ್ರಿಕ ಸಮಾವೇಶದ ಬಗ್ಗೆ ಒಂದು ವರದಿ.

ಉದ್ಘಾಟನಾ ಗೋಷ್ಠಿ

ಸಮಾನತೆಗೆ ಹೋರಾಡುವ ಎಲ್ಲರಿಗೂ ನಮ್ಮ ಬೆಂಬಲವಿದೆ : ಮೊಯಿದ್ದೀನ್



ಮೇ 14ರ ಬೆಳಿಗ್ಗೆ ಮಂಗಳೂರಿನ ಬಲ್ಮಠದಲ್ಲಿರುವ ಶಾಂತಿ ನಿಲಯದ ದೊಡ್ಡ ಸಭಾಂಗಣ ಕರಾವಳಿ ಮತ್ತು ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಮುಸ್ಲಿಂ ಯುವಜನರು, ಪ್ರಗತಿಪರರು, ಪರಿಣತರಿಂದ ತುಂಬಿ ಹೋಗಿತ್ತು. ಅತಿಥಿಗಳಾಗಿ ಭಾಗವಹಿಸಿದ್ದ ಅಕ್ಷರ ಸಂತ ಹರೇಕಳ ಹಾಜಬ್ಬ ಮೊದಲಿಗೆ ಮುಸ್ಲಿಂ ಸಮುದಾಯದ ವಿವಿಧ ಕ್ಷೇತ್ರಗಳ ಸಾಧಕರ ಕುರಿತು ಮಾಡಲಾಗಿರುವ ಪೋಸ್ಟರ್‌ಗಳ ಪ್ರದರ್ಶನವನ್ನು ಉದ್ಘಾಟಿಸಿದರು. ಈ ಪೋಸ್ಟರ್‌ಗಳ ಪ್ರದರ್ಶನ ಎರಡೂ ದಿನ ಬಿಡುವಿನ ಸಮಯದಲ್ಲಿ ಆಕರ್ಷಣೆಯ ಕೇಂದ್ರವಾಗಿತ್ತು.

ಮುಸ್ಲಿಮರು ಸಾಕಷ್ಟು ಸಮಸ್ಯೆಗಳಿಗೆ ಸಿಲುಕಿದ್ದಾರೆ, ಆ ಸಮಸ್ಯೆಗಳಿಂದ ಹೇಗೆ ಪಾರಾಗಬೇಕೆಂದು ತಿಳಿಯದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳು ತಿನ್ನುವ ಆಹಾರ, ಉಡುಗೆ, ತೊಡುಗೆಗಳಂತಹ ವಿಚಾರಗಳನ್ನು ಚರ್ಚೆಯನ್ನು ಮುನ್ನೆಲೆಗೆ ತಂದು ಸಮುದಾಯವನ್ನು ಅವಮಾನಿಸುತ್ತಿವೆ. ಮುಸ್ಲಿಮರ ಬಗೆಗೆ ಅಸತ್ಯಗಳನ್ನು ಪೂರ್ವಾಗ್ರಹಗಳನ್ನು ಹಬ್ಬಿಸಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಭಾವುಕ ವಿಚಾರಗಳ ಚರ್ಚೆಯಲ್ಲ, ಹಸಿವಿನ ಸಂಕಟದ ಚರ್ಚೆಗಾಗಿ ಈ ಸಮಾವೇಶ ಎಂದರು. ಭಾವನಾತ್ಮಕ ಆದ ಪ್ರತಿಕ್ರಿಯೆಗಳ ಮರೆಯಲ್ಲಿ ನೈಜ ಸಂಕಟ ಹಾಗೂ ತಲ್ಲಣಗಳು ಮರೆಯಾಗಿ ಹೋಗ್ತಿವೆ. ಮುಸ್ಲಿಂ ಸಮುದಾಯವನ್ನು ಅವಮಾನಿತರ ದಮನಿತರ ಸಮುದಾಯ ಎಂದೇ ಪರಿಗಣಿಸಿ ನ್ಯಾಯಯುತ ಹೋರಾಟ ಕಟ್ಟಬೇಕಿದೆ. ಈ ಹಿನ್ನೆಲೆಯಲ್ಲಿ ಈ ಸಮಾವೇಶ ಮಾಡುತ್ತಿದ್ದೇವೆ. ಧಾರ್ಮಿಕ ಐಡೆಂಟಿಟಿಯ ಹಿನ್ನೆಲೆಯಲ್ಲಿ ಯಾವುದೇ ಸ್ವಹಿತಾಸಕ್ತಿಯ ಉದ್ದೇಶ ಇಟ್ಟು–ಕೊಂಡು ಈ ಸಮಾವೇಶ ಮಾಡುತ್ತಿಲ್ಲ ಎಂದು ಡಿ.ವೈ.ಎಫ್.ಐ. ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಹೇಳಿದರು.

ಕಾರ್ಯಕ್ರಮದ ಉದ್ಘಾಟಕರಾಗಿ ಮಾತನಾಡಿದ ಡಿ.ವೈ.ಎಫ್.ಐ.ನ ರಾಷ್ಟ್ರಾಧ್ಯಕ್ಷ ಮೊಹಮ್ಮದ್ ರಿಯಾಜ್ "ಕಳೆದ 37 ವರ್ಷಗಳಿಂದಲೂ ಡಿವೈಎಫ್ಐ ಸಾಮಾಜಿಕ ನೆಲೆಗಟ್ಟಿನಲ್ಲಿ ಕೆಲಸ ಮಾಡುತ್ತ ಬಂದಿದೆ. ದೇಶದ ಹಲವಾರು ಭಾಗಗಳಲ್ಲಿ ನಮ್ಮ ಸಂಘಟನೆ ಇಂತಹ ಹಲವಾರು ಸಮ್ಮೇಳನಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ ಸಮಾಜದ ಎಲ್ಲಾ ತಳ ಸಮುದಾಯದ ಜನರಿಗೆ ಸಾಮಾಜಿಕ, ಆರ್ಥಿಕ ನ್ಯಾಯ ಒದಗಿಸುವ ಮುಖ್ಯ ಉದ್ದೇಶದೊಂದಿಗೆ ಈ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿದ್ದೇವೆ" ಎಂದರು. ಕೋಮುವಾದಿಗಳ ಆಟಾಟೋಪಕ್ಕೆ ಬೆದರಿ ಸ್ವ–ರಕ್ಷಣೆಗಾಗಿ ಹಾಗೂ ಆರೆಸ್ಸೆಸ್ ಅನ್ನು ಎದುರಿಸಲು ಅಲ್ಪಸಂಖ್ಯಾತ ಯುವಕರು ಮೂಲಭೂತವಾದಿ ಸಂಘಟನೆಗಳ ಜೊತೆ ಕೈಜೋಡಿಸುವುದು ಅನಿವಾರ್ಯ ಎಂದು ಭಾವಿಸಿದ್ದಾರೆ, ಅದು ಸರಿಯಲ್ಲ ಎಂದು ಅಭಿಪ್ರಾಯಪಟ್ಟ ರಿಯಾಜ್ ಅಲ್ಪಸಂಖ್ಯಾತ ಕೋಮುವಾದವು ಬಹುಸಂಖ್ಯಾತ ಕೋಮುವಾದವನ್ನು ಮಣಿಸಲಾರದು, ಏಕೆಂದರೆ ಅವೆರೂ ಒಂದೇ ನಾಣ್ಯದ ಎರಡು ಮುಖಗಳು ಎಂದರು. ಅಲ್ಪಸಂಖ್ಯಾತ ಕೋಮುವಾದ ಬಹುಸಂಖ್ಯಾತ ಕೋಮುವಾದ ಒಂದಕ್ಕೊಂದು ಪೂರಕವಾಗಿರುತ್ತವೆ, ಜಾಗತಿಕವಾಗಿ ಹರಡಿರುವ ಐಸಿಸ್ ಇಸ್ಲಾಮೋಫೋಬಿಯಾವನ್ನು ಹುಟ್ಟು ಹಾಕಿದೆ ಎಂದು ಆತಂಕ ವ್ಯಕ್ತಪಡಿಸಿದರು. ಮುಸ್ಲಿಂ ಮೂಲಭೂತವಾದವು ನವ–ಉದಾರವಾದ ಮತ್ತು ಕೋಮುವಾದಗಳನ್ನು ಹೇರುತ್ತಿರುವ ಮೋದಿ ಸರ್ಕಾರಕ್ಕೆ ಕುಮ್ಮಕ್ಕು ನೀಡುತ್ತಿದೆ ಎಂದರು.

ಉದ್ಘಾಟನಾ ಕಾರ್ಯಕ್ರಮದ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಮಾಜಿ ಸಚಿವ ಬಿ ಎ ಮೊಯಿದ್ದೀನ್, ಎಲ್ಲಾ ಜಾತಿಯವರು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾರೆ, ಆದರೆ ಡಿವೈಎಫ್ಐ ನ ಕಾರ್ಯಕರ್ತರು ಎಲ್ಲಾ ಜಾತಿಯ ಜನರ ಹಾಗೂ ಶೋಷಿತ ವರ್ಗದವರ ಸಮಾನತೆಗಾಗಿ ಹೋರಾಡಲು





ಈ ಸಮಾವೇಶ ಆಯೋಜಿಸಿದ್ದಾರೆ ಎಂದರು. ಬದಲಾದ ಸಂದರ್ಭದಲ್ಲಿ ಮುಸ್ಲಿಮರಾಗಿ ನಮ್ಮ ಜಾತ್ಯಾತೀತ ಭಾರತ ದೇಶದಲ್ಲಿ ದೇಶಕ್ಕಾಗಿ ನಾವೇನು ಮಾಡಬೇಕು ನಮ್ಮ ಕೊಡುಗೆ ಏನು ಎಂಬುದನ್ನು ಚರ್ಚಿಸಲು ಇಲ್ಲಿ ಚಿಂತಕರು ಸುಧಾರಕರು ಭಾಗವಹಿಸಿದ್ದಾರೆ, ಎಂದು ಡಿವೈಎಫ್ಐನ ಕಾರ್ಯಕ್ರಮವನ್ನು

ಪುಟ 10 ಕ್ಕೆ

"ರಾಜಕೀಯ ಧ್ರುವೀಕರಣ, ದಮನಿತ ಸಮುದಾಯಗಳ ಐಕ್ಯತೆ" ಗೋಷ್ಠಿ

ಅಂತರಾಷ್ಟ್ರೀಯ ಬಂಡವಾಳ ನಿಯಂತ್ರಿಸುತ್ತದೆ: – ಶ್ರೀರಾಮರೆಡ್ಡಿ



ಮಾಧ್ಯಮ ಗಳಲ್ಲಿ ಮುಸ್ಲಿಮರ ಬಗೆಗಿನ ತಿರುಚಿದ ವರದಿಗಳನ್ನು ಗಮನಿಸಿ, ಮಾಧ್ಯಮಗಳು ಕೋಮುವಾದದ ನಿಯಂತ್ರಣ ದಲ್ಲಿದೆ ಎನ್ನಲಾಗುತ್ತಿದೆ. ಆದರೆ ವಾಸ್ತವವಾಗಿ ಅವು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ನಿಯಂತ್ರಣದಲ್ಲಿವೆ ಎಂಬುದನ್ನು ನಾವು ಗಮನಿಸುವುದಿಲ್ಲ. ಭಾರತದಲ್ಲಿ ಹಣಕಾಸು ಬಂಡವಾಳ ಹಾಗೂ ಕೋಮುವಾದ ಪಾಲುದಾರಿಕೆಯಲ್ಲಿ ದೇಶದ ವಿದ್ಯಾಮಾನವನ್ನು ನಿಯಂತ್ರಿಸುತ್ತದೆ ಎಂಬುದನ್ನು ಗುರುತಿಸಬೇಕಾಗಿದೆ ಎಂಬುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ ಹೇಳಿದರು.

ಪ್ರಾದೇಶಿಕ ಅಸ್ಮಿತೆಯ ಆಧಾರದಲ್ಲಿ ಆಡಳಿತ ನಡೆದ ರಾಜ್ಯಗಳು, ಮತೀಯ ಅಸ್ಮಿತೆಯ ಆಧಾರದಲ್ಲಿ ಕಟ್ಟಲಾದ ರಾಷ್ಟ್ರಗಳು ಏನಾಗಿವೆ ಎಂಬುದು ನಮ್ಮ ಕಣ್ಣೆದುರಿಗಿದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಸಮಾನತೆಗಳಿಂದಾಗಿ ಕೆಳಗೆ ತಳ್ಳಲ್ಪಟ್ಟಿರುವ ದಲಿತ, ಮುಸ್ಲಿಂ, ಹಿಂದುಳಿದ ವರ್ಗಗಳಲ್ಲಿಯೂ 50% ಮಹಿಳಾ ವಿಭಾಗ ಇದ್ದು, ಅವರು ದಮನಿತರಲ್ಲಿಯೇ ದಮನಿತರು ಎಂಬುದನ್ನು ನಾವು ಗುರುತಿಸಬೇಕಾಗಿದೆ. ದಮನಿತರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಇಂದಿರಾಗಾಂಧಿಕಾಲದಲ್ಲಿ 'ಗರೀಬಿ ಹಟಾವೋ' ಘೋಷಣೆ ಹೇಳಿ ದಿಕ್ಕು ತಪ್ಪಿಸಲಾಗಿದೆ. ಇವತ್ತು 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂದು ಹೇಳಿ ದಿಕ್ಕು ತಪ್ಪಿಸಲಾಗುತ್ತಿದೆ. ದೇಶದಲ್ಲಿ ಅತಿಶ್ರಮದಲ್ಲಿ ದುಡಿಯುವ ಸಾಮಾಜಿಕ ವಿಭಾಗದಲ್ಲಿ ಒಂದೋ ದಲಿತರಿರುತ್ತಾರೆ. ಇಲ್ಲವೇ ಮುಸ್ಲಿಮರಿರುತ್ತಾರೆ. ಹಾಗೂ ಮಹಿಳೆಯರಿರುತ್ತಾರೆ. ವ್ಯಕ್ತಿಯೊಬ್ಬ ತನ್ನ ಎರಡು ಹೊತ್ತಿನ ಊಟಕ್ಕಾಗಿ ಇನ್ನೊಬ್ಬನ ಮುಂದೆ ಕೈಚಾಚುವಂಥಹ ಪರಿಸ್ಥಿತಿಗಿಂತ ಅವಮಾನದ ಪರಿಸ್ಥಿತಿ ಜಗತ್ತಿನಲ್ಲಿ ಬೇರಾವುದೂ ಇಲ್ಲ.

ರಾಜಕೀಯ ಧ್ರುವೀಕರಣ ದುಡಿಯುವ ಜನರ ಕೈಗೆ ಅಧಿಕಾರ ದೊರೆಯುವ ನಿಟ್ಟಿನಲ್ಲಿ ನಡೆಯಬೇಕಾಗಿದೆ. ದಲಿತ ನಾಯಕಿ

ಪುಟ 11 ಕ್ಕೆ

ರೈತ, ಕಾರ್ಮಿಕ, ದಲಿತ, ಮುಸ್ಲಿಮ, ಮಹಿಳೆ ಒಟ್ಟಾಗಿ ಕೆಲಸ ಮಾಡಬೇಕಿದೆ: ಪೀರ್ ಬಾಷ

ಹಿಂದೂತ್ವವನ್ನು ಅಪ್ಪಿಕೊಳ್ಳುವ ಮೂಲಕ ಭಾರತ ಪಾಕಿಸ್ಥಾನದ ಕ್ಸೆರಾಕ್ಸ್ ಕಾಪಿ ಆಗುವುದನ್ನು ನಾವು ತಡೆಯಬೇಕಾಗಿದೆ. ದಲಿತರು, ಮುಸ್ಲಿಮರು ಭಾರತದಲ್ಲಿ ವಿಶೇಷವಾಗಿ ಅವಮಾನ ವಂಚನೆಗೆ ಒಳಗಾದ ವಿಭಾಗ. ದಲಿತರು ಕಳೆದ ಎರಡು–ಎರಡೂವರೆ ಸಾವಿರ ವರ್ಷಗಳಿಂದ ಅವಮಾನ, ಸಂಕಟಗಳನ್ನು ಅನುಭವಿಸಿದ್ದಾರೆ. ಆದರೆ ಮುಸಲ್ಮಾನರ ಅವಮಾನ, ಸಂಕಟಗಳು ಕಳೆದ ಹಲವು ದಶಕಗಳದ್ದು. ಭಾರತದಲ್ಲಿ ಆರ್ಥಿಕ ಶೋಷಿತ ವರ್ಗಗಳ ಜೊತೆಗೆ, ಸಾಮಾಜಿಕ ಶೋಷಣೆಗೆ ಒಳಗಾಗ ವರ್ಗಗಳಾಗಿದ್ದಾರೆ ದಲಿತರು, ಮುಸಲ್ಮಾನರು ಮತ್ತು ಮಹಿಳೆಯರು–ಎಂಬುದಾಗಿ ಸಾಮಾಜಿಕ ಕಾರ್ಯಕರ್ತ ಬಿ.ಪೀರ್ ಭಾಷೆ ಹೇಳಿದರು.

ಇಲ್ಲಿ ನಡೆದಿರುವುದು ಮುಸ್ಲಿಮರ ಸಮಾವೇಶವೇ ಹೊರತು ಇಸ್ಲಾಂ ಸಮಾವೇಶವಲ್ಲ. 90% ಮುಸ್ಲಿಮರು ಬಡವರೇ ಆದುದರಿಂದ ವರ್ಗನೆಲೆಯಲ್ಲಿ ಅವರು ದುಡಿಯುವ ವರ್ಗ. ದಮನಿತ ಸಮುದಾಯದ ಐಕ್ಯತೆಯ ಸಂದರ್ಭದಲ್ಲಿ ರೈತ, ಕಾರ್ಮಿಕರೊಂದಿಗೆ ದಲಿತ, ಮುಸ್ಲಿಮರು ಮತ್ತು ಮಹಿಳೆಯರನ್ನು ಒಗ್ಗೂಡಿಸಿ ಮುನ್ನಡೆಯಬೇಕಾಗಿದೆ. ದಲಿತರ, ಮಹಿಳೆಯರ ರಕ್ಷಣೆಯಲ್ಲಿ ಮುಸಲ್ಮಾನರು ಪ್ರಾಣ ತ್ಯಾಗ ಮಾಡಬೇಕಾದ ಸಂದರ್ಭ ಬಂದಲ್ಲಿ ಆ ತ್ಯಾಗ ಈ ದೇಶದ ನಿರ್ಮಾಣ ಮಾಡುತ್ತದೆ ಎಂಬುದಾಗಿ ಬಿ.ಪೀರ್ ಭಾಷಾ ವಿವರಿಸಿದರು.

"ಮುಸ್ಲಿಂ ಸಮುದಾಯದ ಸಾಮಾಜಿಕ–ಶೈಕ್ಷಣಿಕ ಹಿಂದುಳಿದಿರುವಿಕೆ" ಗೋಷ್ಠಿ

ಜೈಲುಗಳಲ್ಲಿ ಮಾತ್ರ ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚಿನ ಮುಸ್ಲಿಮರಿದ್ದಾರೆ : ಪುತ್ತಿಗೆ

ಈ ಗೋಷ್ಠಿಯಲ್ಲಿ "ವಾರ್ತಾ ಭಾರತಿ" ಪ್ರಧಾನ ಸಂಪಾದಕರಾದ ಅಬ್ದುಸ್ಸಲಾಂ ಪುತ್ತಿಗೆ ಹಾಗೂ "ಪ್ರಜಾವಾಣಿ"ಯ ಸಹಾಯಕ ಸಂಪಾದಕರಾದ ಎನ್.ಎ.ಎಂ. ಇಸ್ಮಾಯಿಲ್ ವಿಷಯ ಮಂಡನೆ ಮಾಡಿದರು.

ಮುಸ್ಲಿಂ ಸಮುದಾಯದ ಜನ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಸಾಕಷ್ಟು ಹಿಂದೆ ಉಳಿದಿದ್ದಾರೆ, ಸಂಸತ್ತಿನಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕೇವಲ ಶೇ. 4, ಸಾಕ್ಷರರ ಸಂಖ್ಯೆ ಶೇ. 42, ಆದರೆ ಜೈಲುಗಳಲ್ಲಿ ಮಾತ್ರ ಜಾಸ್ತಿ ಇದ್ದಾರೆಂಬುದು ದುರಂತ ಎಂದು ಪುತ್ತಿಗೆ ಹೇಳಿದರು.

ದೇಶದ ಭಿಕ್ಷಾಟನೆಯಲ್ಲಿ ಕೂಡ ಮುಸ್ಲಿಮರು ಮುಂದಿರುವುದು ಆ ಸಮುದಾಯದ ದಯನೀಯ ಸ್ಥಿತಿಗೆ ಹಿಡಿದ ಕನ್ನಡಿ. ದೇಶದ ಜೈಲುಗಳಲ್ಲಿರುವ ಒಟ್ಟು ಖೈದಿಗಳ ಪೈಕಿ ಶೇಕಡಾ 14 ರಷ್ಟು ಶಿಕ್ಷೆಗೊಳಗಾದ ಖೈದಿಗಳು, ಶೇಕಡಾ25 ರಷ್ಟು ವಿಚಾರಣಾಧೀನ ಖೈದಿಗಳು ಹೀಗಾಗಿ ನಮ್ಮ ಸಮಸ್ಯೆಗಳೇನು ಎಂದು ಪಟ್ಟಿ ಮಾಡಬೇಕಿದೆ ಎಂದು ಅಬ್ದುಸ್ಸಲಾಂ ಪುತ್ತಿಗೆ ಅಭಿಪ್ರಾಯ ಪಟ್ಟರು.

ಬಾಬರಿ ಮಸೀದಿ ಧ್ವಂಸ ಸಮಸ್ಯೆ ನಮ್ಮನ್ನು ಬಹಳ ಕಾಲ ಕಾಡಿತು, ಈಗ ಮೈಕ್‌ನ ಸಮಸ್ಯೆ, ಟ್ರಿಪಲ್ ತಲಾಕ್ ಸಮಸ್ಯೆ ಹೀಗೆ ಇಂತಹ ಸಮಸ್ಯೆಗಳ ಬಗ್ಗೆ ಜೀವಮಾನವಿಡೀ ನಾವು ಮಾತನಾಡುತ್ತಲೇ ಇರುತ್ತೇವೆ. ನಮ್ಮ ಅಜೆಂಡಾವನ್ನು ಬೇರೆಯವರು ನಿರ್ಧರಿಸುತ್ತಿದ್ದಾರೆ. ನಮ್ಮ ಅಜೆಂಡಾವನ್ನು ಆದ್ಯತೆಗಳನ್ನು ನಾವೇ ನಿರ್ಧರಿಸಬೇಕು ಎಂದು ಅವರು ಅಭಿಪ್ರಾಯ ಪಟ್ಟರು.



ಅಭದ್ರತೆ, ಅಸ್ಮಿತೆ, ಇಸ್ಲಾಂ ಸಮುದಾಯ/ಧರ್ಮದ ಬಗ್ಗೆ ವಿಕೃತ ಅಪಪ್ರಚಾರ, ಪ್ರಾತಿನಿಧ್ಯ/ಸಹಭಗಿತ್ವದ ಅಭಾವ, ಗೆಟ್ಟೋಕರಣ (ಪ್ರತ್ಯೇಕಿಸುವಿಕೆ) – ಮುಸ್ಲಿಂ ಸಮುದಾಯದ ಮುಂದಿರುವ ಪ್ರಮುಖ ಸವಾಲುಗಳು. ಮುಸ್ಲಿಂ ಸಮುದಾಯದಲ್ಲಿ ಸುಧಾರಣೆಯಾಗಬೇಕಿರುವುದು ಮುಸ್ಲಿಮರಿಂದಲೇ. ಆದರೆ ಈಗ ಪರಿಸ್ಥಿತಿಯೂ ಮೊದಲಿನಂತಿಲ್ಲ, ಸಮುದಾಯದಲ್ಲಿ ಸಾಕಷ್ಟು ಬದಲಾವಣೆ ಆಗಿದೆ, ಇಂದಿನ ಸ್ಥಿತಿಯಲ್ಲಿ ಮುಸ್ಲಿಮರಿಗೆ ಅಪಾಯ ಇರುವುದು ಧರ್ಮದ ತಿರುಳನ್ನು ಬಿಟ್ಟು ಅಕ್ಷರ ಹಿಡಿದು ಅರ್ಥ ಹುಡುಕುವುದರಲ್ಲಿ ಎಂದು ಪುತ್ತಿಗೆ ಹೇಳಿದರು.

ಪ್ರಜಾವಾಣಿ ದೈನಿಕದ ಸಹಾಯಕ ಸಂಪಾದಕ ಎನ್‌ಎಎಮ್ ಇಸ್ಮಾಯಿಲ್ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಸಕ್ರಿಯವಾಗಿ ಒಳಗೊಳ್ಳುವ ಮೂಲಕ ಕಲಿಕೆ ಶಿಕ್ಷಣದ ಮುಖ್ಯ ಭಾಗವಾಗಬೇಕು ಎಂದು ಹೇಳಿದರು.

ಇಬ್ಬರ ಮಾತುಗಳ ನಂತರ ಸಭಿಕರೊಡನೆ ಪ್ರಶ್ನೋತ್ತರ ಸಂವಾದ ನಡೆಯಿತು.

“ಮುಸ್ಲಿಮರ ರಾಜಕೀಯ ಪ್ರಾತಿನಿಧ್ಯ, ಸಬಲೀಕರಣ” ಗೋಷ್ಠಿ

ಸ್ಟೀರಿಯೋ ಟೈಪ್ ಗ್ರಹೀತಗಳಿಂದಾಗಿ ಅವಕಾಶ–ವಂಚಿತರಾಗಿದ್ದಾರೆ : ಅಸ್ಸಾದಿ



ಟೋಪಿ, ಗಡ್ಡ, ಶೇರ್ವಾನಿ, ಬುರ್ಖಾ, ಆಧುನಿಕವಲ್ಲದ ಹಾಗೂ ಭಯೋತ್ಪಾದಕ ಇತ್ಯಾದಿ ಸ್ಟೀರಿಯೋಟೈಪ್ ಗ್ರಹೀತಗಳಿಂದಾಗಿ ಮುಸ್ಲಿಮರು ತಾವು ಪಡೆಯಬೇಕಾಗಿದ್ದ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ. ಮುಜಾಫರ್ ಅಸ್ಸಾದಿ ಹೇಳಿದರು. ರಾಜಕೀಯ ಪ್ರಾತಿನಿಧ್ಯದ ಕೊರತೆಯೂ ಅಂಥ ಅವಕಾಶಗಳಲ್ಲಿ ಒಂದಾಗಿದೆ. ಅವರಿಗೆ ಬಾಡಿಗೆಗೆ ಮನೆಗಳೂ ಸಿಗುತ್ತಿಲ್ಲ. ಸಾಮಾನ್ಯ ಮಾರುಕಟ್ಟೆ ಮತ್ತು ಯೋಗ್ಯ ಶಿಕ್ಷಣದಿಂದಲೂ ವಂಚಿತರಾಗಿದ್ದಾರೆ. ರಾಜಕೀಯ ಪ್ರಾತಿನಿಧ್ಯ ಎಷ್ಟೊಂದು ಕಡಿಮೆ ಇದೆಯೆಂದರೆ, ಪ್ರಸ್ತುತ ಕರ್ನಾಟಕ ವಿಧಾನಸಭೆಯಲ್ಲಿ 224 ಮಂದಿಯಲ್ಲಿ 11 ಮಂದಿ ಮಾತ್ರವಿದ್ದಾರೆ. ಲೋಕಸಭೆಯಲ್ಲಿ 542 ಮಂದಿಯಲ್ಲಿ ಪ್ರಸ್ತುತ 23 ಮಂದಿ ಮಾತ್ರವಿದ್ದಾರೆ, ಯಾವತ್ತೂ ಲೋಕಸಭೆಯಲ್ಲಿ 49 ಮಂದಿಗಿಂತ ಹೆಚ್ಚು ಮುಸ್ಲಿಮರಿರಲಿಲ್ಲ.

ಕಮ್ಯೂನಿಸ್ಟ್ ಚಳುವಳಿಯನ್ನೂ ಒಳಗೊಂಡು ಎಲ್ಲಾ ರಾಜಕೀಯ ಸಂಘಟನೆಗಳಲ್ಲಿ ಭಾರತದಲ್ಲಿ ಮುಸ್ಲಿಮರಿಗೆ 1947ರ ಮೊದಲು ಅವಕಾಶಗಳಿದ್ದುವು. ಆದರೆ ಆ ಬಳಿಕ ಅವರನ್ನು ಏಕರೀತಿ ಸಮುದಾಯವಾಗಿ ಪರಿಗಣಿಸಲಾಗುತ್ತಿದೆ. ಮುಸ್ಲಿಮರಲ್ಲೂ ಅಶ್ರಫ್, ಅರ್ಝುನ್ ಮತ್ತು ಶೇಖ್ ಎಂಬ ಜಾತಿಗಳಿವೆ, ಇವುಗಳನ್ನು ಕಾನೂನಾತ್ಮಕವಾಗಿ ಕಡೆಗಣಿಸಲಾಯಿತು. ಎಲ್ಲ ಮುಸ್ಲಿಮರ ಪ್ರಶ್ನೆಯಲ್ಲದ ಕಾಶ್ಮೀರ ಸಮಸ್ಯೆ, ಆಲಿಘಡ ವಿ.ವಿ.ಅಲ್ಪಸಂಖ್ಯಾಕ ಸ್ಥಾನಮಾನ, ಗೋಹತ್ಯೆ, ಉರ್ದು ಭಾಷಾ ಸ್ಥಾನಮಾನ–ಈ ನಾಲ್ಕು ಪ್ರಶ್ನೆಗಳನ್ನು ಇಡೀ ಭಾರತದ ಮುಸ್ಲಿಂ ಸಮುದಾಯದ ಪ್ರಶ್ನೆಯಾಗಿ ಬಿಂಬಿಸಲಾಯಿತು. ಈ ಮೇಲಿನ ನಾಲ್ಕೂ ಮುಸ್ಲಿಮೇತರರ ಪ್ರಶ್ನೆಯೂ ಹೌದು ಎಂಬುದನ್ನು ಕಡೆಗಣಿಸಲಾಗಿದೆ.

ಭಾರತದಲ್ಲಿ ಮುಸ್ಲಿಮರು ಬಡತನ ಮತ್ತು ನಿರುದ್ಯೋಗ ತೀವ್ರ ಮಟ್ಟದಲ್ಲಿ ಅನುಭವಿಸುತ್ತಿದ್ದಾರೆ ಎಂಬುದನ್ನು ರಾಜೇಂದರ್ ಸಾಚಾರ್ ಕಮಿಟಿ ವರದಿ ತೋರಿಸಿಕೊಟ್ಟಿದೆ. ಆದರೆ ಪ್ರಸ್ತುತ ಭಾರತದಲ್ಲಿ ಬಡತನ, ನಿರುದ್ಯೋಗಗಳು ಮುಸ್ಲಿಮರಿಗೆ ಸಮಸ್ಯೆಯಾಗಿಲ್ಲ. ಭೌತಿಕ ಅಭದ್ರತೆಯೇ ಅವರ ಸಮಸ್ಯೆಯಾಗಿದೆ. ಈ ಕಾರಣಗಳಿಂದಲಾಗಿ ಸ್ಥಳಾಂತರಗೊಂಡ ಮುಸ್ಲಿಮರು ಗೆಟ್ಟೊಗಳಲ್ಲಿ ವಾಸಿಸುತ್ತಿದ್ದಾರೆ. ಅಲ್ಲದೆ ನಗರದಲ್ಲಿ ಗೆಟ್ಟೊಗಳಾಗಿರುವ ಅಪಾರ್ಟ್‌ಮೆಂಟುಗಳೂ ಇವೆ. ಇದರಿಂದಾಗಿ ಮುಸಲ್ಮಾನರು ಮಧ್ಯಯುಗಕ್ಕೆ ತಳ್ಳಲ್ಪಟ್ಟಿದ್ದಾರೆ. ಹಾಗಾಗಿ ಕೆಳಸ್ತರದ ಮುಸ್ಲಿಮರ ಮೇಲೆ ಇರುವುದು ಉಲೇಮಾಗಳ ಯಜಮಾನಿಕೆಯೇ ಹೊರತು ಶ್ರೀಮಂತರ ಯಜಮಾನಿಕೆಯಲ್ಲ. ಗೆಟ್ಟೊಗಳಲ್ಲಿ ವಾಸವಾಗಿರುವ ಮುಸ್ಲಿಮರಲ್ಲಿ ಬಡವರೊಂದಿಗೆ ಶ್ರೀಮಂತರೂ ಇದ್ದಾರೆ ಎಂದು ಪ್ರೊ.ಅಸ್ಸಾದಿ ವಿವರಿಸಿದರು.

ಸದ್ಯದ ಸಮಸ್ಯೆಗಳ ಪರಿಹಾರ ಬೇಡಿಕೆಗಳಲ್ಲಿ ಮುಸ್ಲಿಮರ ಕೆಳಜಾತಿಗಳಿಗೆ ಮೀಸಲಾತಿ ಪ್ರಥಮದ್ದಾಗಬೇಕಾಗಿದೆ. ಮುಸ್ಲಿಮರು ಸಿವಿಲ್ ಸೊಸೈಟಿ ಗುಂಪುಗಳನ್ನು ರಚಿಸಿಕೊಳ್ಳಬೇಕಾದುದು ಎರಡನೆಯ ಆದ್ಯತೆಯಾಗಬೇಕಾಗಿದೆ. ಮೂರನೆಯದಾಗಿ ಮುಸಲ್ಮಾನರ ಪರವಾಗಿ ಮಾತನಾಡುವ, ಅವರನ್ನು ಪ್ರತಿನಿಧಿಸುವ ಸೆಕ್ಯುಲರ್ ರಾಜಕೀಯ ಪಕ್ಷವೊಂದರ ಅಗತ್ಯವಿದೆ ಎಂಬ ಪರಿಹಾರಗಳನ್ನು ಪ್ರೊ.ಮುಜಾಫರ್ ಅಸಾದಿ ಸೂಚಿಸಿದರು.

“ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಸ್ಲಿಮರ ಕೊಡುಗೆ”

ಸಾಂಸ್ಕೃತಿಕ ಅಸ್ಮಿತೆ ಮುಸ್ಲಿಮರ ಅಸ್ತಿತ್ವದ ಪ್ರಶ್ನೆ ಕೂಡಾ: ತರೀಕೆರೆ



ಈ ಗೋಷ್ಠಿಯಲ್ಲಿ ಪ್ರೊ. ರಹಮತ್ ತರೀಕೆರೆ, ವಿಷಯ ಮಂಡನೆ ಮಾಡಿದರು. ಜೀವನದ ಮೌಲ್ಯಗಳಿಗೆ ಸಂಬಂಧಿಸಿ ಬೌದ್ಧಿಕವಾಗಿ ಕ್ರಿಯಾತ್ಮಕವಾಗಿ ನಮ್ಮ ಸಮುದಾಯ ಏನು ಮಾಡಿದೆ ಎಂಬುದನ್ನು ವಿಶೇಷವಾಗಿ ನೋಡಬೇಕಿದೆ ಎಂದ ರಹ್ಮತ್ ತರೀಕೆರೆ ಮುಸ್ಲಿಮರು ಪ್ರಭುತ್ವದಲ್ಲಿ ಬಹಳ ದೊಡ್ಡ ಬದಲಾವಣೆಗಳನ್ನು ತಂದಿದ್ದಾರೆ ಎಂದರು. ಸಾಂಸ್ಕೃತಿಕವಾಗಿ ಸಂಗೀತದಲ್ಲಿ ಅಮೀರ್ ಖುಸ್ರೋನಿಂದ ಹಿಡಿದು ಇಲ್ಲಿಯವರೆಗೂ ಅವರ ಕೊಡುಗೆಗಳು ಅಪಾರ ಎಂದು ಅಭಿಪ್ರಾಯಪಟ್ಟರು. ಚಿತ್ರಕಲೆಯಲ್ಲಿ, ಸಿನೆಮಾ ರಂಗದಲ್ಲಿ ಎಲ್ಲದರಲ್ಲೂ ಅವರ ಕೊಡುಗೆ ಅಪಾರವಾದುದು ಎಂದು ತರೀಕೆರೆ ಹೇಳಿದರು

ಅರಬ್ ಸಂಸ್ಕೃತಿ ಮತ್ತು ಭಾರತದ ಮುಸ್ಲಿಂ ಒಂದೇ ಅಲ್ಲ. ಇವನ್ನು ಒಂದೇ ಆಗಿ ನೋಡಿದರೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಸ್ಲಿಮರ ಕೊಡುಗೆ ಬಗ್ಗೆ ಮಾತನಾಡುವುದು ಸಮಸ್ಯಾತ್ಮಕವಾಗುತ್ತದೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಸ್ಲಿಮರ ಕೊಡುಗೆ ಬಗ್ಗೆ ಮಾತನಾಡುವಾಗ ಧಾರ್ಮಿಕ ಸೀಮೋಲ್ಲಂಘನೆ, ಸ್ಥಳೀಯತೆ ಮತ್ತು ಬಹುತ್ವಗಳನ್ನು ಪ್ರಮುಖವಾಗಿ ಗುರುತಿಸಬೇಕಾಗುತ್ತದೆ. ಇಸ್ಲಾಂ ನಲ್ಲಿ ಸಂಗೀತ ನಿಷಿದ್ಧವಾದರೂ ಅತ್ಯಂತ ಹೆಚ್ಚಿನ ಮುಸ್ಲಿಮರ ಕೊಡುಗೆ ಬಂದಿರುವುದು ಈ ಕ್ಷೇತ್ರದಲ್ಲೇ. ಸ್ಥಳೀಯ ಹಾಗೂ ಇತರ ಸಮುದಾಯಗಳ ಜನ ಮತ್ತು ಸಂಸ್ಕೃತಿಯ ಜತೆಗೂಡಿಯೇ ಈ ಅನನ್ಯ ಕೊಡುಗೆಗಳು ಸಾಧ್ಯವಾಗಿರುವುದು. ಐದು ಸಾವಿರ ಮೊಹರಂ ಹಾಡುಗಾರರಲ್ಲಿ ಮೂರು ಸಾವಿರ ಹಾಡುಗಾರರು ಮುಸ್ಲಿಮೇತರರು. ಭಾರತದ ವಿವಿಧ ಪ್ರದೇಶಗಳಲ್ಲಿ ಹಲವು ಭಾಷೆಗಳಲ್ಲಿ ಹಲವು ಆಯಾಮಗಳಲ್ಲಿ ವೈವಿಧ್ಯತೆ ಇದೆ. ಪಂಜಾಬಿನ ಬುಲ್ಲೆ ಶಾ, ಕರ್ನಾಟಕದ ಶಿಶುನಾಳ ಶರೀಫ, ಬಂಗಾಳದ ಲಲ್ಲನ್ ಫಕೀರ್ ಇದರ ಉದಾಹರಣೆಗಳು. ಮುಸ್ಲಿಮರ ಕೊಡುಗೆಯನ್ನು ಮೂರು ವಿಧದ ಪ್ರತಿಭೆಗಳಾಗಿ – ವ್ಯಕ್ತಿ ಪ್ರತಿಭೆ, ಸಾಮುದಾಯಿಕ ಪ್ರತಿಭೆ, ಸಾಂಸ್ಥಿಕ ಪ್ರತಿಭೆ – ನೋಡಬಹುದು. ಬಿಸ್ಮಿಲ್ಲಾ ಖಾನ್, ಅಲ್ಲಾ ರಖಾ, ಮುಹಮ್ಮದ್ ರಫಿ, ಮುಂತಾದವರು ವ್ಯಕ್ತಿ ಪ್ರತಿಭೆಗೆ ಉದಾಹರಣೆಗಳು. ಸಾಮುದಾಯಿಕ ಪ್ರತಿಭೆಯ ಉದಾಹರಣೆಗಳು ಕನಾಟಕದ ಮೊಹರಂ ಪದಗಳು, ಬಂಗಾಳದ ಅಂಬಿಗರ ಬವುಲ್ ಹಾಡುಗಳು, ಬನಾರಸ್ ಸೀರೆ ಇತ್ಯಾದಿಗಳು. ಇಂಡೋ–ಇಸ್ಲಾಮಿಕ್ ಶಿಲ್ಪ ಸಾಂಸ್ಥಿಕ ಪ್ರತಿಭೆಯ ಉದಾಹರಣೆ ಎಂದು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಸ್ಲಿಮರ ಕೊಡುಗೆಯ ಹಲವು ಆಯಾಮಗಳನ್ನು ಬಿಚ್ಚಿಟ್ಟರು ಪ್ರೊ. ರಹಮತ್ ತರೀಕೆರೆ.

ಇಸ್ಲಾಂ ಮತ್ತು ಭಾರತದ ಭಕ್ತಿಪಂಥದ ಸಂಕರವಾದ ಸೂಫಿ ಪಂಥ ಭಾರತಕ್ಕೆ ಮುಸ್ಲಿಮರ ಅತಿ ದೊಡ್ಡ ಕೊಡುಗೆ. ಯಾವುದೇ ದೇಶ ಯಾವುದೇ ಸಮುದಾಯದ ಶ್ರೀಮಂತಿಕೆ ಇರುವುದು ಧಾರ್ಮಿಕ ವಿಧಾನಗಳಿಂದಲ್ಲ. ಬದಲಾಗಿ ಸಾಂಸ್ಕೃತಿಕ ಆಚರಣೆಗಳಿಂದಾಗಿ ಎಂದರು. ಎಲ್ಲಾ ಧರ್ಮಗಳು ಜಗತ್ತಿನಲ್ಲಿ ಕ್ರಿಯೇಟಿವ್ ಆಗಿರಬೇಕು. ಸೂಫಿಗಳಿಂದಲೇ ಈ ದೇಶದ ಪರಂಪರೆ ಶ್ರೀಮಂತವಾಗುತ್ತದೆ. ಸಮೃದ್ಧವಾಗುತ್ತದೆ. ಜನರ ಬದುಕು ಸುಂದರಮಯ ಮಾಡಲು ಸಾಂಸ್ಕೃತಿಕ ಬದುಕು ಬೇಕಾಗಿದೆ, ಇಸ್ಲಾಂ ಅನ್ನು ಒಂದು ಸಂಕುಚಿತ ಧರ್ಮವಾಗಿ ಪ್ರತಿಬಿಂಬಿಸುವುದು, ಸಂಪ್ರದಾಯವಾದಿಗಳು ಭಾರತದಲ್ಲಿ ಇಸ್ಲಾಂ ಅನ್ನು ಯಾವ ಕಡೆಗೆ ಕರೆದೊಯ್ಯುತ್ತಿದ್ದಾರೆ ಎಂಬುದರ ಪ್ರತೀಕ ಎಂದರು.

ಮೊಹರಂ ಬೇಡ, ಸೂಫಿ ಬೇಡ ಎಂದರೆ ಕೋಮುವಾದಿಗಳಿಗೆ ನಾವೇ ದಾರಿ ಮಾಡಿಕೊಟ್ಟಂತೆ ಆಗುತ್ತದೆ ಎಂದು ಪ್ರೊ. ತರೀಕೆರೆ ಕಳವಳ ವ್ಯಕ್ತಪಡಿಸಿದರು. ಭಾರತದ ಮುಸಲ್ಮಾನರು ನಮ್ಮ ದೇಶದಲ್ಲಿ ನೆಮ್ಮದಿಯಾಗಿ ಬದುಕಲು ಬೇಕಾಗಿರುವ ಮಾರ್ಗ ಈ ಸಾಂಸ್ಕೃತಿಕ ವೈವಿಧ್ಯತೆ . ದುರದೃಷ್ಟವಶಾತ್ ಸಂಗೀತ ಲೋಕದಲ್ಲಿನ ಕೊಂಡಿ ಒಂದೊಂದಾಗಿ ಕಳಚಿ ಹೋಗುತ್ತಿವೆ ಎಂದ ತರೀಕೆರೆ, ಸಾಂಸ್ಕೃತಿಕ ಲೋಕವಿಲ್ಲದೆ ಬದುಕು ದುಸ್ತರ ಎಂದರು.

ಸಾಂಸ್ಕೃತಿಕ ಜಗತ್ತು ಎತ್ತ ಸಾಗುತ್ತಿದೆ? ಪಾಕಿಸ್ತಾನ – ಬಾಂಗ್ಲಾದಲ್ಲಿ ಕಳೆದ ಆರು ತಿಂಗಳಿನಲ್ಲಿ ಒಟ್ಟು 16 ಜನ ಸೂಫಿಗಳು ಸೂಫಿ ಗಾಯಕರನ್ನು ಹತ್ಯೆ ಮಾಡಲಾಗಿದೆ ಎಂದರು. ಇದು ನಾವೆಲ್ಲರೂ ಯೋಚಿಸಬೇಕಾದ ವಿಚಾರ. ಭಾರತದಲ್ಲಿ ಮುಸಲ್ಮಾನರ ಘನತೆಯಿಂದ ಬಾಳಲು ಸಾಂಸ್ಕೃತಿಕ ವೈವಿಧ್ಯ ಬೇಕಾಗಿದೆ ಎಂದರು.

ಅತೀ ಧಾರ್ಮಿಕತೆ ನಮ್ಮ ಸಾಂಪ್ರದಾಯಿಕ ಸಾಂಸ್ಕೃತಿಕ ಕೊಡುಗೆಗಳನ್ನು ಮರೆಸುತ್ತಿವೆ ಅಥವಾ ಅಳಿಸಿ ಹಾಕುತ್ತಿವೆ. ಜೀವಂತ ಸೃಜನಶೀಲ ಸಮೃದ್ಧ ಸಮಾಜಕ್ಕೆ ಇವುಗಳನ್ನು ಕಾಪಿಟ್ಟುಕೊಳ್ಳುವುದು ಆವಶ್ಯಕ. ಇದು ಭಾರತೀಯ ಮುಸ್ಲಿಮರ ಅಸ್ತಿತ್ವದ ಮತ್ತು ಪ್ರಜಾಪ್ರಭುತ್ವದ ಪ್ರಶ್ನೆ ಕೂಡಾ ಎಂದು ಪ್ರೊ. ತರೀಕೆರೆ ಒತ್ತಿ ಹೇಳಿದರು.

ಮುಸ್ಲಿಮರಿಗೆ ಮೀಸಲಾತಿಯನ್ನು ಕೇಂದ್ರ ಕಡೆಗಣಿಸುತ್ತಿದೆ: ಅಮಾನುಲ್ಲಾಖಾನ್



ಮುಸಲ್ಮಾನರಲ್ಲಿ ಹಿಂದೂಗಳಿಗೆ ಹೋಲಿಸಿದರೆ ಮಾಸಿಕ ವೇತನ ಪಡೆಯುವ ವಿಭಾಗಗಕ್ಕಿಂತ ಸ್ವ–ಉದ್ಯೋಗಿಗಳು ಶೇಕಡಾವಾರು ಹೆಚ್ಚಿಗೆ ಇದ್ದಾರೆ. ಹಾಗಾಗಿ ಉದ್ಯೋಗದಲ್ಲಿ ಹಾಗೂ ಶಿಕ್ಷಣದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರಿಗೆ ಮೀಸಲಾತಿಯ ಅವಶ್ಯಕತೆಯಿದೆ. ಓಬಿಸಿ ವೃತ್ತಿ ಮಾಡುವ ಹಿಂದೂಗಳಿಗೆ ಮೀಸಲಾತಿ ಕೊಡಬಹುದಾದರೆ, ಅದೇ ವೃತ್ತಿ ಮಾಡುವ ಮುಸ್ಲಿಮರಿಗೆ ಏಕೆ ಕೊಡಬಾರದು? ದಲಿತರ ವೃತ್ತಿ ಮಾಡುವ ಮುಸಲ್ಮಾನರಿಗೆ ಮೀಸಲಾತಿ ಯಾಕೆ ಕೊಡಬಾರದು ಎಂಬುದಾಗಿ ಅ.ಬಾ.ವಿಮಾ ನೌಕರರ ಸಂಘದ ರಾಷ್ಟ್ರಾಧ್ಯಕ್ಷ ಅಮಾನುಲ್ಲಾ ಖಾನ್ ಪ್ರಶ್ನಿಸಿದರು.

ಧರ್ಮದ ಹೆಸರಲ್ಲಿ ಮೀಸಲಾತಿ ನೀಡಬಾರದು ಅಂತ ಸಂವಿಧಾನದಲ್ಲಿ ಹೇಳಲಾಗಿದೆ ಎಂದು ಈಗ ಹೆಚ್ಚಾಗಿ ಪ್ರಚಾರ ಮಾಡಲಾಗುತ್ತಿದೆ. ಹಾಗಿದ್ದರೆ ಸಿಖ್ಖರಿಗೆ, ಆ ಬಳಿಕ ಬೌದ್ಧರಿಗೆ ಯಾ–ಕೆ ಮೀಸಲಾತಿ ನೀಡಲಾಯಿತು? ನವ ಉದಾರೀಕರಣ ನೀತಿಯಿಂದ ಮುಸ್ಲಿಮರ ಕರಕುಶಲ ವೃತ್ತಿಗಳು, ಉದ್ದಿಮೆಗಳು ನಾಶವಾಗುತ್ತಿವೆ; ಅವರು ಉದ್ಯೋಗ ಹೀನರಾಗುತ್ತಿದ್ದಾರೆ. ಧರ್ಮಗಳಿಗೆ ಮೀಸಲಾತಿ ಇಲ್ಲ ಎಂಬ ಕಾರಣ ಒಡ್ಡಿ ವೇತನದಾರ ವರ್ಗದಿಂದಲೂ ಮುಸ್ಲಿಮರು ಹೊರಗುಳಿಯಲ್ಪಡುತ್ತಿದ್ದಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರದಲ್ಲಿ ದುರ್ಬಲ ವರ್ಗಗಳ ಅವಕಾಶಗಳು ರಾಜಕೀಯವಾಗಿ ಮಾತ್ರವಲ್ಲ, ಆರ್ಥಿಕವಾಗಿಯೂ ಕುಸಿಯುತ್ತಾ ಇವೆ.

ಸಬಲೀಕರಣ ಪ್ರಶ್ನೆಯನ್ನು ಅದನ್ನು ಅಪೇಕ್ಷಿಸುವ ವರ್ಗಗಳ ಪಾರ್ಟಿಗಳೇ ಮಾಡಬೇಕೆಂದು ಹೇಳಿ ಪಾರ್ಟಿ ಕಟ್ಟುವ ಪ್ರಯತ್ನಗಳು ವಿಫಲವಾಗಿವೆ. ದಲಿತರ ಪಕ್ಷವೆನಿಸಿದ ಬಿಎಸ್‌ಪಿ ವಿಫಲವಾಗಿದೆ. ಮುಸ್ಲಿಮರಿಗಾಗಿ ಕಟ್ಟಿದ ಮುಸ್ಲಿಂ ಲೀಗ್ ಆಗಲೀ ಅಥವಾ ಇನ್ನಾವುದೇ ಮುಸ್ಲಿಂವಾದೀ ಪಕ್ಷಗಳಾಗಲೀ ಮುಸ್ಲಿಮರ ಹಿತ ರಕ್ಷಿಸಲಾರದು. ದಲಿತರು, ಮುಸ್ಲಿಮರನ್ನು ಪ್ರತ್ಯೇಕಿಕರಿಸಲಾಗುತ್ತಿದೆ. ಎಲ್ಲ ವಂಚಿತ ಕೆಳ ವರ್ಗದವರ ಬಗ್ಗೆ ಸಕ್ರಿಯರಾಗಿರುವುದು ಎಡಪಕ್ಷಗಳು ಮಾತ್ರ. ಯಾವುದು ತಮ್ಮ ಆಯ್ಕೆಯಾಗಿರಬೇಕೆಂಬುದು ಮುಸ್ಲಿಮರ ಆಯ್ಕೆಯಾಗಿದೆ. ತಮ್ಮ ಜನಾಂಗದವರಿಗೆ ಮತದಾನ ಮಾಡಿದರೆ ಅದರಿಂದ ಮುಸ್ಲಿಮರಿಗೇ ನಷ್ಟ; ಎಲ್ಲ ಜನಾಂಗದವರಿಗೆ ಪ್ರಯೋಜನಕ್ಕಾಗಿ ಪ್ರಯತ್ನಿಸುವ ಪಕ್ಷಕ್ಕೆ ಮತದಾನ ಮಾಡಿದರೆ, ದೀರ್ಘಾವಧಿಯಲ್ಲಿ ಅದು ಮುಸ್ಲಿಮರಿಗೂ ಲಾಭ ಎಂಬುದಾಗಿ ಅಮಾನುಲ್ಲಾ ಖಾನ್ ವಿವರಿಸಿದರು.

“ಹೆಚ್ಚುತ್ತಿರುವ ಕೋಮುವಾದ, ಮುಸ್ಲಿಂ ಯುವಜನರ ಮುಂದಿರುವ ದಾರಿ” ಗೋಷ್ಠಿ

ಶಾಂತಿ ನೆಮ್ಮದಿಗಾಗಿ ಮತನಿರಪೇಕ್ಷ ಶಕ್ತಿಗಳೊಡನೆ ಕೈಗೂಡಿಸಿ : ಫೈಸಲ್



ಮುಸ್ಲಿಂ ನೆಲೆಯ ಸಂಘಟನೆ ಅಥವಾ ಪಕ್ಷಗಳಾದ ಕೂಡಲೇ ಮುಸ್ಲಿಮರ ಪ್ರಶ್ನೆಗಳು ಮುಕ್ತಾಯಗೊಳ್ಳುವುದಿಲ್ಲ. ಮುಸ್ಲಿಮರು ಇತರ ದುಡಿಯುವ ಜನರಂತೆಯೇ ಬಡವರು. ವಿವಿಧ ರೀತಿಯ ಶ್ರಮಜೀವನದ ವೃತ್ತಿಯವರು. ಭಾರತವು ಅಸಮಾನತೆಯ ನಾಡಾಗಿದೆ. ಈ ಅಸಮಾನತೆಯನ್ನು ನಿವಾರಿಸುವಲ್ಲಿ ಮಾತ್ರ ಪರಿಹಾರಗಳು ಸಾಧ್ಯ. ಬಹುಮತೀಯ ಕೋಮುವಾದವನ್ನು ಅಲ್ಪ ಮತೀಯ ಕೋಮುವಾದದಿಂದ ಎದುರಿಸಲಾಗದು. ಮುಸ್ಲಿಮರ ಸಮಸ್ಯೆ ಎಂದರೆ ಎಲ್ಲ ದುಡಿಯುವ ಜನರ ಸಮಸ್ಯೆ. ಶಾಂತಿ, ನೆಮ್ಮದಿಗಾಗಿ ಮುಸ್ಲಿಮರು ಮತನಿರಪೇಕ್ಷ ಶಕ್ತಿಗಳೊಂದಿಗೆ ಕೈಗೂಡಿಸಿ ಎಂಬುದಾಗಿ ಡಿವೈಎಫ್‌ಐ ಮಲಪ್ಪುರಂ ಜಿಲ್ಲಾಧ್ಯಕ್ಷ ಎಂ.ಬಿ.ಫೈಸಲ್ ಕರೆ ನೀಡಿದರು.

ದೇಶಪ್ರೇಮ ಎಂಬ ಪದವನ್ನು ಈಗ ಚಲಾವಣೆಗೆ ಬಿಡಲಾಗಿದೆ. ಬೆಜೆಪಿ, ಆರೆಸ್ಸೆಸ್ ವಿಚಾರವನ್ನು ಒಪ್ಪದೇ ಇರುವವರನ್ನು ದೇಶಪ್ರೇಮವಿಲ್ಲದವರು ಎಂದು ನಿರೂಪಿಸಲಾಗುತ್ತಿದೆ. ಆರೆಸ್ಸೆಸ್ಸಿನವರು ಕಪಟ ದೇಶಪ್ರೇಮ ಎಂಬುದರಲ್ಲಿ ಅನುಮಾನವಿಲ್ಲ. ಇದ–ಕ್ಕೆ ವಿರುದ್ಧವಾಗಿರುವ ಅಲ್ಪಸಂಖ್ಯಾಕರ ಸಂಘಟನೆಗಳಾದ ಎಸ್‌ಡಿಪಿಐ, ಎನ್‌ಡಿಎಫ್, ಜಮಾತೇ ಇಸ್ಲಾಮೀ ಸಂಘಟನೆಗಳು ಹಿಂದೂತ್ವದಷ್ಟೇ ಅಪಾಯಕಾರಿ. ಕೇರಳದಲ್ಲಿ ಎಸ್‌ಡಿಪಿಐ, ಎನ್‌ಡಿಎಫ್‌ಗಳು ಹಲವಾರು ಕೊಲೆ ಪಾತಕ ನಡೆಸಿದ್ದು, ಅವರಿಗೆ ಬಲಿಯಾಗಿರುವವರು ಕಮ್ಯೂನಿಸ್ಟರಾಗಿದ್ದಾರೆ. ಅವರಲ್ಲೂ ಹೆಚ್ಚಿನವರು ಮುಸ್ಲಿಮರು. ಇದು ಮುಸ್ಲಿಂ ಯುವಜನತೆ ಎಚ್ಚರಗೊಳ್ಳಬೇಕಾದ ಸಂದರ್ಭವಾಗಿದೆ ಎಂದು ಫೈಸಲ್ ವಿವರಿಸಿದರು.

“ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಮರು”

ಬ್ರಿಟಿಷರ ವಿರುದ್ಧ ಮೊದಲು ಹೋರಾಟ ಮಾಡಿದ್ದು ಮುಸ್ಲಿಮರು: ದಿನೇಶ್ ಅಮಿನ್ ಮಟ್ಟು



ಮೊದಲ ಗೋಷ್ಠಿಯಲ್ಲಿ ದಿನೇಶ್ ಅಮೀನ್‌ಮಟ್ಟು, ವಿಷಯ ಮಂಡನೆ ಮಾಡಿ ಮಾತನಾಡಿದರು.

ಸಾಮಾನ್ಯವಾಗಿ ಭಾರತದ ಸಂದರ್ಭದಲ್ಲಿ ಜಾತಿ ಸಮ್ಮೇಳನ ಧಾರ್ಮಿಕ ಸಮ್ಮೇಳನಗಳ ಅಗತ್ಯ ಇದ್ದು ಮುಸ್ಲಿಮರ, ಬಿಲ್ಲವರ, ಮೊಗವೀರರ, ದಲಿತರ ಸಮ್ಮೇಳನಗಳನ್ನೂ ಮಾಡಿದರೆ ತಪ್ಪೇನಿಲ್ಲ. ಆಯಾ ಸಮುದಾಯದ ಸಮಸ್ಯೆಗಳ ಬಗ್ಗೆ ತಿಳಿಯಲು ಇಂತಹ ಸಮಾವೇಶಗಳು ಅನಿವಾರ್ಯ. ಸಮಾವೇಶಗಳನ್ನು ಮಾಡುವವರ ಉದ್ದೇಶ ಆಯಾ ಸಮಾಜದ ಕಟ್ಟಕಡೆಯ ಮನುಷ್ಯನೆಡೆಗೆ ಇರಬೇಕೇ ಹೊರತು ಮೇಲ್ವರ್ಗದಲ್ಲಿರುವ ವ್ಯಕ್ತಿಯ ಬಗ್ಗೆ ಅಲ್ಲ ಎಂದು ಪತ್ರಕರ್ತ, ಅವರು ಹೇಳಿದರು.

ಮುಸ್ಲಿಮರು ಇತಿಹಾಸವನ್ನು ತೆರೆದು ನೋಡಬೇಕು, ಇಲ್ಲಿ ಕೇವಲ ದಾವೂದ್ ಇಬ್ರಾಹಿಂ ಇಲ್ಲ, ಚಾಂದ್‌ಬೀಬಿ, ಅಬೂಬಕರ್‌ರಂತಹ ಮಹನೀಯರಿದ್ದು ಅಂತಹ ಮಹನೀಯ ವ್ಯಕ್ತಿಗಳ ಸ್ಮರಣೆ ಮಾಡಿದಾಗ ಮುಸ್ಲಿಮರಲ್ಲಿ ಆತ್ಮಸ್ಥೈರ್ಯ ಬರಲು ಸಾಧ್ಯ ಎಂದು ದಿನೇಶ್ ಅಮೀನ್‌ಮಟ್ಟು ಅಭಿಪ್ರಾಯಪಟ್ಟರು. ಉದಾರವಾದಿ ಮುಕ್ತ ಚಿಂತನೆಯ ನಾಯಕರನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಸಮುದಾಯಕ್ಕಿದ್ದು ಹಾಗೆ ಮುಕ್ತ ಉದಾರವಾದಿ ನಾಯಕರನ್ನು ಒಪ್ಪಿಕೊಳ್ಳದಿರುವುದು ಮುಸ್ಲಿಂ ಸಮುದಾಯದ ಸಮಸ್ಯೆಯಾಗಿದೆ ಎಂದೂ ಅವರು ಹೇಳಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಮರ ಪಾತ್ರದ ಬಗ್ಗೆ ನಾವು ಹೆಚ್ಚು ಚರ್ಚೆ ಮಾಡುವುದಿಲ್ಲ. ಹಾಗೆ ಚರ್ಚೆ ಮಾಡದಿರುವುದು ಒಂದು ಲೋಪ ಎಂದು ಏಕೆ ಅನ್ನಿಸುತ್ತದೆ ಎಂದರೆ ಮುಸ್ಲಿಮರು ರಣರಂಗದ ಮಧ್ಯೆ ಜೀವ ತೆತ್ತಿದ್ದಾರೆ, ಸ್ವಾತಂತ್ರ್ಯ ಹೋರಾಟಕ್ಕೆ ಅವರ ಕೊಡುಗೆ ತುಂಬ ದೊಡ್ಡದು, ವಾಸ್ತವದಲ್ಲಿ ಬ್ರಿಟಿಷರ ವಿರುದ್ಧ ಮುಸ್ಲಿಮರು ಮೊದಲು ಹೋರಾಟ ಮಾಡಿದ್ದರು. ಮುಸ್ಲಿಮ ಅರಸರು ತಮ್ಮ ಅಸ್ತಿತ್ವಕ್ಕಾಗಿ ಹೋರಾಡಬೇಕಿತ್ತು. ಅದಾದ ನಂತರದಲ್ಲೂ ಮುಸ್ಲಿಮರ ಸಂಖ್ಯೆ ಹೆಚ್ಚಿತ್ತು, ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದದ್ದು ಮುಸ್ಲಿಮರೇ. ಜಾಕೀರ್ ಖಾನ್ ಅವರ ಒಂದು ಪುಸ್ತಕದಲ್ಲಿ ಈ ಬಗ್ಗೆ ವಿವರಗಳಿವೆ. ಮುಸ್ಲಿಮರ ಸ್ವಾತಂತ್ರ್ಯ ಹೋರಾಟದ ಬಗ್ಗೆ ಚರ್ಚೆ ಮಾಡದಿರಲು ಕಾರಣ ಗಾಂಧಿಯವರ ಹೋರಾಟದ ಮೂಲಕವೇ ಸ್ವಾತಂತ್ರ್ಯ ಸಿಕ್ಕಿತೆಂದು ನಾವು ಒಪ್ಪಿಕೊಂಡಿರುವುದು ಎಂದು ದಿನೇಶ್ ಹೇಳಿದರು. ಖಿಲಾಫತ್ ಚಳುವಳಿಯ ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದೂಗಳು ಕಾಣಿಸಿಕೊಂಡರು. ಇಂದು ದೇಶಪ್ರೇಮದ ಬಗ್ಗೆ ಪಾಠ ಮಾಡುವ ಜನ ಅವರ ನಾಯಕರು ಸ್ವಾತಂತ್ರ್ಯ ಹೋರಾಟದಲ್ಲಿ ಎಷ್ಟು ಜನ ಭಾಗವಹಿಸಿದರೆಂಬ ಬಗ್ಗೆ ಇನ್ನೂ ಅಂಕಿ ಅಂಶ ಕೊಟ್ಟಿಲ್ಲ ಎಂದು ನುಡಿದರು.

ಹಿಂದೂ ಮತ್ತು ಮುಸ್ಲಿಮರ ನಡುವೆ ದ್ವೇಷದ ಅಪನಂಬಿಕೆಯ ಅನುಮಾನದ ಸಂಬಂಧ ಬೆಳೆಯಲು ಮುಖ್ಯ ಕಾರಣ ಬ್ರಿಟಿಷರು. ಬ್ರಿಟಿಷರು ಮೂಲತಃ ವ್ಯಾಪಾರಿಗಳು, ಒಡೆದಾಳುವ ನೀತಿಯನ್ನು ಅವರು ಅನುಸರಿಸಿದರು. ದಕ್ಷಿಣ ಕನ್ನಡವನ್ನು ಕೋಮುವಾದದ ಪ್ರಯೋಗಶಾಲೆ ಎನ್ನುತ್ತಾರೆ. ಇದರ ಆಳಕ್ಕೆ ಹೋದರೆ ಇದರ ಹಿಂದೆ ಕೂಡ ವ್ಯಾಪಾರಿಗಳೇ ಇದ್ದಾರೆ ಎಂದು ಅಮೀನ್‌ಮಟ್ಟು ಹೇಳಿದರು. ಸ್ವಾತಂತ್ರ್ಯ ಹೋರಾಟ ಎಲ್ಲೆಲ್ಲಿ ಜೋರಾಗಿ ನಡೆಯುತ್ತಿತ್ತೋ ಅಲ್ಲೆಲ್ಲ ಕೋಮು ಗಲಭೆಗಳು ನಡೆಯುತ್ತಿದ್ದವು. ಯುಪಿ ಚುನಾವಣೆಗೂ ಮೊದಲು ಮುಜಾಫ್ಫರ್ ನಗರದ ಕೋಮುಗಲಭೆಗಳನ್ನು ಗಮನಿಸಬಹುದು. ಒಡೆದು ಆಳುವ ನೀತಿ ಈಗ ಹೇಗೆ ಮುಂದುವರೆದಿದೆ ಎಂದು ನೋಡಬಹುದು. ಹೀಗಾಗಿ ಮೆಳ್ಳೆಗಣ್ಣಿನ ಇತಿಹಾಸಕಾರರ ಇತಿಹಾಸವನ್ನು ನಿರಾಕರಿಸಬೇಕಿದೆ ಎಂದು ದಿನೇಶ್ ಹೇಳಿದರು.

ಮುಸ್ಲಿಂ ಅರಸರು ಮತಾಂತರ ಮಾಡಿದರು ಎಂದು ಹೇಳುತ್ತಾರೆ. ಮುಸ್ಲಿಂ ಅರಸರು 700 ವರ್ಷಗಳ ಕಾಲ ದೇಶವನ್ನು ಆಳಿದ್ದಾರೆ. ಹಾಗೊಂದು ವೇಳೆ ಮತಾಂತರ ತೀವ್ರವಾಗಿ ನಡೆದಿದ್ದರೆ ಇಂದು ದೇಶದ ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಂರ ಸಂಖ್ಯೆ ಶೇಕಡಾ 14 ಮಾತ್ರ ಎಂದವರು ಹೇಳಿದರು.

ಕೋಮುವಾದವನ್ನು ವಿರೋಧಿಸುವುದು ಸರಿ ಅದನ್ನು ಹೊಡೆದೋಡಿಸುವುದು ಹೇಗೆ? ಅದನ್ನು ಹೊಡೆದೋಡಿಸಬೇಕಾದರೆ ಅದು ಹೇಗೆ ಹುಟ್ಟುತ್ತದೆ ಎಂದು ನೋಡಬೇಕು. ಬಹುಸಂಖ್ಯಾತರ ಕೋಮುವಾದ ಮೇಲರಿಮೆಯಿಂದ ಹುಟ್ಟಿಕೊಳ್ಳುತ್ತದೆ. ಅಲ್ಪಸಂಖ್ಯಾತರ ಕೋಮುವಾದ ಕಡಿಮೆ ಸಂಖ್ಯೆಯಲ್ಲಿದ್ದಾರೆಂಬ ಕಾರಣಕ್ಕೆ ಹುಟ್ಟುವ ಅಭದ್ರತೆಯ ಹಿನ್ನೆಲೆಯಲ್ಲಿ ಹುಟ್ಟುತ್ತದೆ ಎಂದು ಅವರು ಹೇಳಿದರು.

ದೇಶದ ಬಹುಸಂಖ್ಯಾತರ ಕೋಮುವಾದ ದೇಶವನ್ನು ನಾಶ ಮಾಡಿದರೆ, ಅಲ್ಪಸಂಖ್ಯಾತರ ಕೋಮುವಾದ ಅಲ್ಪಸಂಖ್ಯಾತರನ್ನೇ ನಾಶ ಮಾಡುತ್ತದೆ ಎಂದು ಮೊಯಿದ್ದೀನ್ ಸಂವಾದದ ಸಂದರ್ಭದಲ್ಲಿ ಹೇಳಬಯಸಿದ್ದು ಹೇಳಮರೆತರು ಎಂದೂ ತಿಳಿಸಿದರು.

“ಮಾಧ್ಯಮ, ಪೂರ್ವಗ್ರಹ, ಮುಸ್ಲಿಮರು” ಗೋಷ್ಠಿ

ಪೂರ್ವಗ್ರಹಗಳನ್ನು ಹುಟ್ಟುಹಾಕಿದ್ದೇ ಹಿಂದುತ್ವ : ಫಣಿರಾಜ್



ಕರಾವಳಿಯಲ್ಲಿ ನಿತ್ಯವೂ ಕೋಮು ಹಿಂಸೆ ನಡೆಯುತ್ತಿದೆ. ಕರಾವಳಿ ಪತ್ರಕರ್ತರಲ್ಲಿ ಹಿಂದೂತ್ವ ಕಾರ್ಯಕರ್ತರು ಕೆಲವರಿದ್ದಾರೆ. ಇನ್ನುಳಿದವರಲ್ಲೂ ಕೆಲವರು ಗುಪ್ತವಾಗಿ ಹಿಂದೂತ್ವದ ಬೆಂಬಲಿಗರು. ಹಿಂದೆ ಸಕ್ಯುಲರ್ ಆಗಿದ್ದ ಮುಖ್ಯವಾಹಿನಿಯ ಪತ್ರಿಕೆಗಳೂ ಇವತ್ತು ಕೋಮುವಾದೀ ದಾಟಿಯಲ್ಲಿ ವರದಿಗಾರಿಕೆ ಮಾಡುತ್ತಿವೆ. ಇವರ ವರದಿಗಾರಿಕೆಯಲ್ಲಿ ಜನ ಯಾರು ವೈಯುಕ್ತಿಕ ಸ್ವಾತಂತ್ರ್ಯ ಬಳಸುತ್ತಿದ್ದಾರೋ ಅವರು ಅಪರಾಧಿಗಳಾಗಿ ನಿರೂಪಿಸಲ್ಪಡುತ್ತಿದ್ದಾರೆ. ಪತ್ರಿಕೆಗಳು ತಾವೇ ವಿಚಾರಣೆ ನಡೆಸಿ, ತಾವೇ ತೀರ್ಮಾನಕ್ಕೆ ಬಂದು ತಾವೇ ಯಾರಿಗೆ ಯಾವ ಶಿಕ್ಷೆಯಾಗಬೇಕೆಂದು ತೀರ್ಪು ಕೊಡುತ್ತಾರೆ ಎಂಬುದಾಗಿ ಮಣಿಪಾಲ ಎಂಐಟಿ ಪ್ರಾಧ್ಯಾಪಕ ಪ್ರೊ.ಕೆ.ಫಣಿರಾಜ್ ಹೇಳಿದರು.

ಮಾಧ್ಯಮಗಳ ವಿಷಯದಲ್ಲಿ ನಾವು ಅಗ್ನಿಶಾಮಕ ಕ್ರಮ ಕೈಗೊಳ್ಳಲೇಬೇಕಾಗಿದೆ. ಮಾಧ್ಯಮಗಳು ಬಿತ್ತುವ ಪೂರ್ವಗ್ರಹಗಳನ್ನು ಎದುರಿಸುವ ಬೌದ್ಧಿಕ ಕವಾಯತು ಮಾಡಬೇಕಾಗಿದೆ. ವಾರ್ತಾಭಾರತಿ, ಜನಶಕ್ತಿಯಂಥ ಸತ್ಯನಿರೂಪಕ ಪತ್ರಿಕೆಗಳನ್ನು ಬಲಪಡಿಸಬೇಕಾಗಿದೆ ಎಂಬ ಕರೆಯನ್ನು ಪ್ರೊ.ಫಣಿರಾಜ್ ನೀಡಿದರು.

ಕೋಮುವಾದಿ ಪತ್ರಕರ್ತರಿಗೆ ಲಜ್ಜೆಯಿಲ್ಲ: ಬಶೀರ್



1990ಕ್ಕೂ ಹಿಂದೆ ಪತ್ರಿಕೆಗಳನ್ನು ಇದು ಕೋಮುವಾದಿ ಇದು ಅಲ್ಲ ಎಂದು ಪ್ರತ್ಯೇಕಿಸಬಹುದಾಗಿತ್ತು. ಇವತ್ತು ಕೋಮುವಿಷದ ಸುದ್ದಿಗಳನ್ನು ಪ್ರಕಟಿಸಲು ಪತ್ರಿಕೆಗಳು ಪರಸ್ಪರ ಸ್ಪರ್ಧಿಸುತ್ತಿವೆ. ಕೆಲವು ಪತ್ರಿಕೆಗಳಂತೂ ತಾವು ಪ್ರಕಟಿಸಿದ ಸುದ್ದಿಗಳಿಗೆ ತಾವು ಹೊಣೆಗಾರರಲ್ಲವೆಂಬಂತೆ ವರ್ತಿಸುತ್ತಿವೆ. ತಾವು ನೀಡಿದ ತಪ್ಪು ಸುದ್ದಿಗಳ ಬಗ್ಗೆ ಅರಿವಾದಾಗಲೂ ಸಕಾಲಕ್ಕೆ ತಿದ್ದುಪಡಿ, ಕ್ಷಮಾಪಣೆ ಪ್ರಕಟಿಸುವುದಿಲ್ಲ. ತಾವು ಬರೆದುದರ ಬಗ್ಗೆ ಅವರಿಗೆ ಒಂದಿಷ್ಟೂ ಲಜ್ಜೆ ಇಲ್ಲ ಎಂಬುದಾಗಿ ಪತ್ರಕರ್ತ ಬಿ.ಎಂ.ಬಶೀರ್ ಹೇಳಿದರು.

ಸಾಮಾನ್ಯವಾಗಿ ಯಾವುದೇ ಪತ್ರಿಕೆ ಪ್ರಾರಂಭವಾದಾಗ ಅದು ಆ ಜಾತಿಯವರ ಪತ್ರಿಕೆ, ಈ ಜಾತಿಯವರ ಪತ್ರಿಕೆ ಎಂದು ಯಾರೂ ಮಾತನಾಡುವುದಿಲ್ಲ. ಆದರೆ ಕ್ರಿಶ್ಚಿಯನ್ನರು, ಮುಸ್ಲಿಮರು ಬಂಡವಾಳ ಹಾಕಿ ಪತ್ರಿಕೆ ಪ್ರಾರಂಭಿಸಿದಾಗ ಅದನ್ನು ಕ್ರಿಶ್ಚಿಯನ್ ಪತ್ರಿಕೆ, ಮುಸ್ಲಿಂ ಪತ್ರಿಕೆ ಎಂದು ನಾಮಕರಣ ಮಾಡಲಾಗುತ್ತಿದೆ. ಇವತ್ತೂ ಮುಸ್ಲಿಮರು ದಲಿತರ ಮೇಲೆ ಆಕ್ರಮಣ ದಾಳಿಗಳು ನಡೆದಾಗ ಪೋಲೀಸು ಠಾಣೆಗಳಲ್ಲಿ ಮಾತ್ರವಲ್ಲ ಪತ್ರಿಕೆಗಳಲ್ಲೂ ಪೆಟ್ಟು ತಿಂದವರನ್ನೇ ಆರೋಪಿಯೆಂದೂ, ಕೊಟ್ಟವನನ್ನು ಸಂಸ್ಕೃತಿ ರಕ್ಷಕ ತಂಡದ ಸದಸ್ಯನೆಂದೂ ನಿರೂಪಿಸಲಾಗುತ್ತಿದೆ. ಅಂಥ ಸಂದರ್ಭದಲ್ಲಿ ದಲಿತ ಮುಸ್ಲಿಮರೊಂದಿಗೆ ಗುರುತಿಸಿಕೊಳ್ಳಲು ಪ್ರಗತಿಪರರಿಗೂ ಹಿಂಜರಿಕೆ ಇರುವುದು ಖೇದದ ಸಂಗತಿ ಎಂಬುದಾಗಿ ಬಿ.ಎಂ.ಬಶೀರ್ ವಿವರಿಸಿದರು.

ಸಮಾನತೆಗೆ ಹೋರಾಡುವ ಎಲ್ಲರಿಗೂ........ ಪುಟ 8 ರಿಂದ

ಬೆಂಬಲಿಸಿದ ಮೊಯಿದ್ದೀನ್ ಅಭಿಪ್ರಾಯಪಟ್ಟರು. ಜಾತ್ಯಾತೀತತೆಯೇ ಈ ದೇಶದ ಉಸಿರು. ಇಸ್ಲಾಂ ಸಮಾನತೆಯ ಧರ್ಮ. ಆದ್ದರಿಂದ ಜಾತ್ಯಾತೀತತೆ ಮತ್ತು ಸಮಾನತೆಗಾಗಿ ಯಾರೇ ಹೋರಾಟ ಮಾಡಲಿ ಅವರ ಜತೆಗೆ ನಾವು ಇರುತ್ತೇವೆ. ಎಂದರು. ಇದಕ್ಕೆ ಮೊದಲು ಅವರು ಈ ಸಂದರ್ಭದಲ್ಲಿ ಕ್ರಿಯಾ ಪುಸ್ತಕ ಪ್ರಕಟಿಸಿದ “ಇಂಡಿಯನ್ ಮುಸ್ಲಿಂ ಸಾಧಕರ ಹಾದಿಯಲ್ಲಿ” ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದರು.

ಮತ್ತೋರ್ವ ಅತಿಥಿ ಪತ್ರಕರ್ತ ರಂಜಾನ್ ದರ್ಗಾ ಮಾತನಾಡಿ, ಜ್ಞಾನವನ್ನು ಬಯಸುವವರಿಗೆ ದೇವರು ರೆಕ್ಕೆಗಳನ್ನು ನೀಡುತ್ತಾನೆಂದು ಪ್ರವಾದಿಗಳು ಹೇಳಿದ್ದಾರೆ. ಅಂತಹ ರೆಕ್ಕೆಗಳನ್ನು ಹೊಂದಿದ ದೇವದೂತ ಹರೇಕಳ ಹಾಜಬ್ಬ ಎಂದು ಹೇಳುವ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಹಾಜಬ್ಬರ ಸೇವೆಯನ್ನು ಸ್ಮರಿಸಿದರು. ಈ ನಗರದ ಶಾಂತಿಗಾಗಿ ನಾವಿಲ್ಲಿ ಸೇರಿದ್ದೇವೆ ಎಂದ ದರ್ಗಾ, ನಾನು ಭಾರತದಲ್ಲಿಲ್ಲ ನನ್ನೊಳಗೆ ಭಾರತವಿದೆ ಎಂದು ಮಾರ್ಮಿಕವಾಗಿ ನುಡಿದರು. ಅವರು ಬಿಡುಗಡೆಯಾದ ಪುಸ್ತಕ ಕರ್ನಾಟಕದಲ್ಲೇ ಬಹುಶಃ ಭಾರತದಲ್ಲೇ ಪ್ರಕಟವಾದ ಇಂತಹ ಮೊದಲ ಪುಸ್ತಕ. ಇದನ್ನು ಇಂಗ್ಲೀಷ್ ಮತ್ತು ಹಿಂದಿಗೂ ಅನುವಾದ ಮಾಡಿ ದೇಶದ ತುಂಬಾ ಪ್ರಚಾರ ಮಾಡಬೇಕು ಎಂದು ಕರೆ ಕೊಟ್ಟರು.

ಭಾರತದಲ್ಲಿ ಸ್ವಾತಂತ್ರ್ಯದ ನಂತರ ಅಂದಾಜು 35 ಸಾವಿರ ಗಲಭೆಗಳಾಗಿವೆ. ಇವುಗಳಲ್ಲಿ ದಲಿತರು, ಬಡ ಹಿಂದೂಗಳು ಬಡ ಮುಸ್ಲಿಮರೇ ಜೀವ ತೆತ್ತಿದ್ದಾರೆ ವಿನಹ ಯಾವುದೇ ಸಮಾಜದ ಶ್ರೀಮಂತರಲ್ಲ ಎಂದರು. ಕಾರ್ಮಿಕರು, ಮಹಿಳೆಯರು, ಬಡವರು, ಅಲ್ಪಸಂಖ್ಯಾತರು ದುಡಿಯುವ ವರ್ಗ, ಕೂಲಿಗಳು ಈ ದೇಶವನ್ನು ಆಳಬೇಕೆಂಬುದು ನನ್ನ ಬಯಕೆ ಎಂದು ರಂಜಾನ್ ದರ್ಗಾ ಹೇಳಿದರು. ಕೋಮುವಾದಿಗಳ ಹಿಂದುತ್ವದಲ್ಲಿ ಹಿಂದೂ ಧರ್ಮಕ್ಕೂ ಸ್ಥಾನವಿಲ್ಲ. ಭಾರತದ ಧರ್ಮ ಅದು ಪ್ರಜಾಪ್ರಭುತ್ವ, ಭಾರತದ ಧರ್ಮಗ್ರಂಥ ಸಂವಿಧಾನ, ನಾವು ನಮ್ಮ ಧರ್ಮಗಳನ್ನು ನಮ್ಮ ಮನೆಯಲ್ಲಿ ಇಟ್ಟುಕೊಳ್ಳಬೇಕು. ವಿನಹ ರಸ್ತೆ ಮೇಲೆ ತರಬಾರದು. ಹೀಗಾಗಿಯೇ ಇದು ಸಮಾವೇಶ ಮಾತ್ರ ಮುಸ್ಲಿಂ ಯುವ ಸಮಾವೇಶ. ಆದರೆ ಭಾಗವಹಿಸಿದವರೆಲ್ಲರೂ ಭಾರತೀಯರು ಎಂದರು.

ಇನ್ನೋರ್ವ ಅತಿಥಿ ಅಖಿಲ ಭಾರತ ಜೀವ ವಿಮಾ ಉದ್ಯೋಗಿಗಳ ಒಕ್ಕೂಟ (ಎಐಐಇಎ) ರಾಷ್ಟ್ರಾಧ್ಯಕ್ಷರಾದ ಅಮಾನುಲ್ಲಾ ಖಾನ್ ಮಾತನಾಡಿ, ಮುಸ್ಲಿಮರು ಭಾರತದ ಬೆಳವಣಿಗೆಗೆ ಬಹಳ ಕೊಡುಗೆ ಇದೆ ಎಂದರು. ಮುಸ್ಲಿಮರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಮೇಲೆ ಚರ್ಚೆಗಳು ನಡೆಯದ ಹೊರತು ಭಾರತದ ಬೆಳವಣಿಗೆ ಸಾಧ್ಯವಿಲ್ಲ ಎಂದು ಖಚಿತವಾಗಿ ನುಡಿದರು.

ಭಾರತದ ಶೇಕಡಾ 85 ರಷ್ಟು ಮುಸ್ಲಿಮರು ಬಡತನ ರೇಖೆಯ ಕೆಳಗಿದ್ದಾರೆ, ಇದು ಕೇವಲ ಧರ್ಮದ ಚರ್ಚೆಯಲ್ಲ, ವರ್ಗದ ಚರ್ಚೆಯಾಗಿದೆ ಎಂದರು. ಸಾಚಾರ್ ಸಮಿತಿ ಹೇಳಿದ್ದು ಮುಸ್ಲಿಮರ ಪರಿಸ್ಥಿತಿ ದಲಿತ ಸಮಾಜಕ್ಕೆ ಸಮನಾಗಿ ಇದೆ ಎಂದು. ಶೈಕ್ಷಣಿಕ ಪರಿಸ್ಥಿತಿಯಲ್ಲಿ ಅವರಿಗಿಂತಲೂ ಕೆಳಮಟ್ಟದಲ್ಲಿದೆ ಎಂದರು. 76 ವಿಷಯಗಳನ್ನೊಳಗೊಂಡ ಬೇಡಿಕೆ ಸಮಸ್ಯೆಗಳ ಪರಿಹಾರಕ್ಕಾಗಿ ಸಾಚಾರ್ ಸಮಿತಿ ಸರ್ಕಾರಕ್ಕೆ ಸಲ್ಲಿಸಿ 10 ವರ್ಷಗಳಾದರೂ ಕೂಡ ಕಾರ್ಯರೂಪಕ್ಕೆ ಬಂದಿಲ್ಲ ಎಂದರು.

2011 ರಲ್ಲಿ ನಡೆದ ಜನಗಣತಿ ಪ್ರಕಾರ ಶೇಕಡಾ 54 ರಷ್ಟು ಅನಕ್ಷರಸ್ಥರು ಮುಸ್ಲಿಂ ಸಮುದಾಯದಲ್ಲಿದ್ದಾರೆ. 2011 ರ ಜನಗಣತಿಯ ಪ್ರಕಾರ ಮುಸ್ಲಿಮರ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ ಎಂದು ಹೇಳಿದರು. ರಂಗನಾಥ್ ಮಿಶ್ರಾ ಕಮಿಟಿಯು ಸಾಚಾರ್ ಕಮಿಟಿ, ಅರ್ಜುನ್ ಸೇನ್ ಗುಪ್ತಾ ಸಮಿತಿ ಶೇಕಡಾ 16 ರಷ್ಟು ಧಾರ್ಮಿಕ ಅಲ್ಪಸಂಖ್ಯಾತರ ಬಗ್ಗೆ ವರದಿ ತಯಾರಿಸಿ ಸಂವಿಧಾನದಲ್ಲಿ ಕೊಂಚ ಬದಲಾವಣೆ ತರಹುದೆಂದು ತಿಳಿಸಿತು. ಜಾತಿಯಾಧಾರದ ಮೇಲೆ ಮೀಸಲಾತಿ ಬೇಡವೆಂದು ಕಸುಬುಗಳ ಆಧಾರದ ಮೇಲೆ ಮೀಸಲಾತಿ ಕೊಡಬೇಕಾಗಿ ವರದಿ ತಯಾರಿಸಲಾಯಿತು. ಆದರೆ ಈ ವರದಿಯ ಪಾಲನೆಯು ಶೂನ್ಯವಾಯಿತು ಎಂದು ಮುಸ್ಲಿಮರ ಬಗ್ಗೆ ಸರ್ಕಾರಗಳು ತೋರಿದ ನೆಪ ಮಾತ್ರ ಕಾಳಜಿಗಳ ಬಗ್ಗೆ ಬೆಳಕು ಚೆಲ್ಲಿದರು. ಇದರ ಹೊರತಾಗಿ ಕರ್ನಾಟಕದ ಮುಸ್ಲಿಮರ ಪೈಕಿ ಜಮೀನು ಹೊಂದಿದವರ ಪ್ರಮಾಣ ಕಡಿಮೆ ಇದೆ, ಅಲ್ಲದೆ ಶೈಕ್ಷಣಿಕವಾಗಿ ಸಮುದಾಯ ಸಾಕಷ್ಟು ಹಿಂದುಳಿದಿದೆ ಎಂಬ ಅಂಶಗಳು ಸಮೀಕ್ಷೆಯಲ್ಲಿ ಗೊತ್ತಾಗಿದೆ ಎಂದರು.

ಡಿ.ವೈ.ಎಫ್.ಐ.ನ ಜಿಲ್ಲಾಧ್ಯಕ್ಷ ಇಮ್ತಿಯಾಜ್ ಕಾರ್ಯಕ್ರಮ ನಿರೂಪಿಸಿದರು. ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ವಂದಿಸಿದರು.

ಆ ನಂತರ ಮೊದಲ ದಿನ ಮೂರು ಮತ್ತು ಎರಡನೇ ದಿನ ನಾಲ್ಕು ಗೋಷ್ಠಿಗಳು ಸೇರಿದಂತೆ ಏಳು ಗೋಷ್ಠಿಗಳಲ್ಲಿ ಭಾರತೀಯ ಮುಸ್ಲಿಮರ ನೋವು–ನಲಿವುಗಳ ಬಗ್ಗೆ, “ಜಾತ್ಯತೀತೆ, ಸಬಲೀಕರಣ, ಮುನ್ನಡೆ”ಗಳ ಕಣ್ಣೋಟವಿಟ್ಟುಕೊಂಡು ವಿವಿಧ ಪರಿಣತರು ವಿಷಯ ಮಂಡನೆ ಮಾಡಿದರು. ಇದರ ಬಗ್ಗೆ ಉತ್ತಮ ಮಟ್ಟದ ಚರ್ಚೆ ನಡೆಯಿತು. ಮೊದಲ ದಿನದ ಸಂಜೆ ಹುಸೇನ್ ಕಾಟಿಪಳ್ಳ ಮತ್ತು ತಂಡದವರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ○

ವರದಿ : ಎನ್. ನಾಗರಾಜ್

ಸಂವಿಧಾನ ಹಕ್ಕುಗಳ ಉಳಿವಿಗಾಗಿ, ಮುಂದಿನ ಪೀಳಿಗೆಯ ರಕ್ಷಣೆಗಾಗಿ

ದಲಿತ ಸರಕಾರಿ ನೌಕರರ ಬೃಹತ್ ರ್‍ಯಾಲಿ



ಕರ್ನಾಟಕ ಸರ್ಕಾರದ ಎಸ್‌ಸಿ/ಎಸ್.ಟಿ ನೌಕರರ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಬೃಹತ್ ರ್‍ಯಾಲಿ ಮೇ 8, 2017 ರಂದು ಆಯೋಜಿಸಲಾಗಿತ್ತು. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 5000 ಕ್ಕೂ ಹೆಚ್ಚು ದಲಿತ ನೌಕರರು ರ್‍ಯಾಲಿಯಲಿ ನೆರೆದಿದ್ದರು. ರ್‍ಯಾಲಿಯಲ್ಲಿ "ಬಡ್ತಿ ಮೀಸಲಾತಿ" ರದ್ಧತಿ ಮಾಡುವಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದಾಗಿ, ಸಂವಿಧಾನದ ಹಕ್ಕುಗಳು ಹಾಗೂ ಸಾಮಾಜಿಕ ನ್ಯಾಯಕ್ಕೆ ದ್ರೋಹವೆಸಗಲಾಗಿದೆ ಎಂದು ನೆರೆದಿದ್ದ ವಿವಿಧ ದಲಿತ ಹಕ್ಕುಗಳ ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದರು. ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷರಾದ ಡಿ. ಶಿವಶಂಕರ್, ದಲಿತ ನೌಕರರ ವಿಷಯದಲ್ಲಿ ಸರ್ವೋಚ್ಚ ನ್ಯಾಯಲಾಯದ ತೀರ್ಪುಗಳು ಸಂವಿಧಾನದ ಆಶಯಗಳನ್ನೇ ಬುಡಮೇಲು ಮಾಡುವ ಸಂಚು ನಡೆಸುತ್ತಿರುವಂತಿದೆ ಎಂದರು. ಇಡೀ ರಾಜ್ಯವನ್ನು ಪ್ರವಾಸ ಮಾಡಿ, ನೌಕರರ ಮಧ್ಯೆ ಜಾಗೃತಿ ಮೂಡಿಸಿ, ಇಂದು ಇಲ್ಲಿ ಈ ಬೃಹತ್ ಸಭೆಯನ್ನು ನಡೆಸುತ್ತಿದ್ದೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಚ್ಚೆತ್ತುಕೊಂಡು ಸೂಕ್ತ ಪರಿಹಾರ ಕಂಡುಹಿಡಿಯದಿದ್ದರೆ, ಮುಂದೆ ಬಾರೀ ದೊಡ್ಡ ಹೋರಾಟವನ್ನು ಸಂಘಟಿಸುವುದಾಗಿ ಎಚ್ಚರಿಕೆ ಕೊಟ್ಟರು.

ಮುಖ್ಯ ಅತಿಥಿಗಳಾಗಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶ್ರೀಯುತ ದಾಸಯ್ಯನವರು, ನಿವೃತ್ತ ಕೆ.ಪಿ.ಎಸ್.ಸಿ ಆಯುಕ್ತರು ತೀರ್ಪಿನ ಹಿನ್ನೆಲೆಯನ್ನು ತಿಳಿಸಿದರು. ಸರ್ವೋಚ್ಚ ನ್ಯಾಯಾಲಯ ಇಂದಿರಾ ಸಹಾನ ಪ್ರಕರಣದಲ್ಲಿ ನೀಡಿದ್ದ ತೀರ್ಪು ದೇಶದ ದಲಿತರಿಗೆ ಹಾಗೂ ಹಿಂದುಳಿದ ವರ್ಗಗಳ ಹಿತಕ್ಕೆ ಧಕ್ಕೆ ತಂದಿತ್ತು. ಆ ನಂತರ 1995 ರಲ್ಲಿ ನಮ್ಮ ಸಂಸತ್ತಿನಲ್ಲಿ ಸಂವಿಧಾನದ 77ನೇ ತಿದ್ದುಪಡಿ ತಂದು ಅನುಚ್ಛೇದ 16(4) ಅನ್ನು ಸೇರಿಸಿ, ಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿಯನ್ನು ಕಲ್ಪಿಸಿತು. 2000 ನೇ ಇಸವಿಯಲ್ಲಿ ಸಂವಿಧಾನದ 85ನೇ ತಿದ್ದುಪಡಿ ತಂದು ಬಡ್ತಿ ರಿಯಾಯಿತಿಯನ್ನು ನೀಡಲು ಅವಕಾಶ ಕಲ್ಪಿಸಿತು. ಎಂ. ನಾಗರಾಜ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಲಾಯಿತು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ 2002 ರಲ್ಲಿ ಕಾಯಿದೆ ತಂದು ಬಡ್ತಿಯಲ್ಲಿ ಮೀಸಲಾತಿಯನ್ನು ಸೇವಾ ಜೇಷ್ಠತೆ ಒದಗಿಸಿತು. ಇದರ ಸಿಂಧುತ್ವವನ್ನು ಕರ್ನಾಟಕ ನ್ಯಾಯಾಲಯದಲ್ಲಿ ಎಂ. ನಾಗರಾಜ್ ಪ್ರಶ್ನಿಸಿದರು. 2011 ರಲ್ಲಿ ಮತ್ತೆ ಕರ್ನಾಟಕ ಸರ್ಕಾರದ ಕಾಯಿದೆಯನ್ನು ಸಂವಿಧಾನ ಬದ್ಧವಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿಯಿತು. 2017 ರಲ್ಲಿ ಬಿ.ಕೆ. ಪವಿತ್ರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಕರ್ನಾಟಕ ಸರ್ಕಾರ ತಂದ ಕಾಯಿದೆಯನ್ನು ಅಸಿಂಧು ಎಂದು ತೀರ್ಪು ನೀಡಿ, ರದ್ದುಗೊಳಿಸಿದೆ. ಇದಕ್ಕೆ ಕಾರಣಗಳು ಮೂರು. ಹಿಂದುಳಿಯುವಿಕೆ, ಕಾರ್ಯದಕ್ಷತೆ ಹಾಗೂ ಪ್ರಾತಿನಿಧ್ಯ ಮೀಸಲು ಮಾನದಂಡಗಳನ್ನು ಸರಿಯಾಗಿ ಅನುಸರಿಸಿಲ್ಲವಾದ್ದರಿಂದ ಕಾಯಿದೆ ಅಸಿಂಧು ಎಂದಿದೆ ಎಂದು ದಾಸಯ್ಯನವರು ವಿವರಿಸಿದರು.

ಆ ನಂತರ, ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಹಾಗೂ ಮಾಜಿ ವಿಧಾನ ಸಭಾ ಸದಸ್ಯರಾದ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಸುಪ್ರೀಂ ಕೋರ್ಟಿನ ಈ ತೀರ್ಪು ಸಂವಿಧಾನದ ಆಶಯವಾದ ಮೀಸಲಾತಿಯನ್ನೇ ಪ್ರಶ್ನಿಸುವಂತಿದೆ ಎಂಬ ಆತಂಕ ವ್ಯಕ್ತಪಡಿಸಿದರು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪ್ರತಿಗಾಮಿ ಬಿಜೆಪಿ ಸರ್ಕಾರಕ್ಕೆ ಸಂವಿಧಾನದ ಮೇಲೆ ನಂಬಿಕೆಯೇ ಇಲ್ಲದಿರುವಾಗ, ಇಂತಹ ದಲಿತ ವಿರೋಧಿ ಸಾಮಾಜಿಕ ನ್ಯಾಯದ ವಿರೋಧಿ ತೀರ್ಪುಗಳು ಸಹಜವೇ ಆಗಿದೆ, ಇದಕ್ಕೆ ಆಶ್ಚರ್ಯ ಪಡುವುದು ಏನು ಇಲ್ಲ. ಒಂದು ಕಡೆ ಅಂಬೇಡ್ಕರ್‌ರವರನ್ನೂ ನೆಪಮಾತ್ರಕ್ಕೆ ಕೊಂಡಾಡುವ ಬಿಜೆಪಿಯು, ಮತ್ತೊಂದು ಕಡೆ ಸಂವಿಧಾನದ ಬದ್ಧವಾಗಿರುವ ಎಲ್ಲ ರೀತಿಯ ಹಕ್ಕುಗಳನ್ನು ನಾಶಗೊಳಿಸುವ ಕಾರ್ಯಕ್ರಮ ಹೊಂದಿರುವುದು ಬಯಲಾಗುತ್ತಿವೆ. ಇವರ ಆಡಳಿತದಲ್ಲಿ ಸಂವಿಧಾನದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಕಾರ್ಪೋರೇಟರ್‌ಗಳ ಪರವಿದೆಯೇ ಹೊರತು, ದೀನ-ದಲಿತರ ಹಾಗೂ ಶೋಷಿತರ ಪರವಾಗಿ ಇಲ್ಲವೆಂದರು.

ಇತ್ತೀಚೆಗೆ, ಸಂಸತ್ತಿನಲ್ಲಿ ಅನುಮೋದನೆಗೊಂಡ ಹಣಕಾಸು ಮಸೂದೆ (ಮನಿ ಬಿಲ್) ದೇಶದ ಜನರ ಪಾಲಿಗೆ ಹಾಗೂ ಅವರ ಆರ್ಥಿಕ ವಿನಾಶಕ್ಕೆ ನಾಂದಿಯಾಗಿದೆ. ಮಾತ್ರವಲ್ಲದೆ ಸಂವಿಧಾನದ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಂಡು, ಆರ್ಥಿಕ ಅಸಮಾನತೆ ಹೆಚ್ಚಾಗಿ – ದೇಶ ಹಾಗೂ ಜನರು ದಿವಾಳಿ ಅಂಚಿಗೆ ತಲುಪುವಂತಾಗುತ್ತದೆ. ಅಂಬೇಡ್ಕರ್ ರವರು ಸಂವಿಧಾನವನ್ನು ದೇಶಕ್ಕೆ ಅರ್ಪಿಸುವಂತ ಸಂದರ್ಭದಲ್ಲಿ ಹೇಳಿದ ವೈರುಧ್ಯಗಳು ಇಂದಿಗೂ ಪ್ರಸ್ತುತವಾಗಿವೆ. ನಮಗೆ ರಾಜಕೀಯ ಸಮಾನತೆ, ಮತದಾನಕ್ಕೆ ಮಾತ್ರ ಧಕ್ಕಿದೆ. ಆದರೆ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ ಹಾಗೆಯೇ ಮುಂದುವರಿದಿದೆ. ಈ ವೈರುಧ್ಯಗಳನ್ನು ಆದಷ್ಟು ಬೇಗ ಪರಿಹರಿಸಿಕೊಳ್ಳಬೇಕು, ಇಲ್ಲವಾದರೆ ಅಸಮಾನತೆಯಿಂದ ನೊಂದಿರುವ ಜನ ಈ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನೇ ವಿನಾಶಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂದರು. ಜಾತಿ ವ್ಯವಸ್ಥೆ ವಿನಾಶಗೊಳ್ಳುವವರಿಗೂ ಮೀಸಲಾತಿ ಸೌಲಭ್ಯದ ಅಗತ್ಯತೆ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ "ಸಿ.ಎಂ. ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ದಿನದಿಂದಲೂ, ಹೋದ ಹೋದ ಕಡೆಯಲೆಲ್ಲಾ ನಾನು ದಲಿತ ಮುಖ್ಯಮಂತ್ರಿ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಆದರೆ ಇದೀಗ ದಲಿತರಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು, ಇಲ್ಲವಾದರೆ ಅವರನ್ನು ನಕಲಿ ದಲಿತ ಮುಖ್ಯಮಂತ್ರಿ ಎಂದು ಕರೆಯಬೇಕಾಗುತ್ತದೆ. ಕಾಲಮಿತಿಯೊಳಗೆ ಪರಿಹಾರ ಒದಗಿಸದಿದ್ದರೆ ಸಿ.ಎಂ. ಮನೆಯ ಮುಂದೆ ಧರಣಿ ನಡೆಸಲು ಎಲ್ಲರೂ ಸಿದ್ದರಾಗಿ ಎಂದು ಕರೆಕೊಟ್ಟಾಗ ನೆರೆದಿದ್ದವರು ಚಪ್ಪಾಳೆ ತಟ್ಟುವ ಮೂಲಕ ಒಪ್ಪಿಗೆ ಸೂಚಿಸಿದರು.

ದಲಿತ ಕವಿ ಡಾ। ಸಿದ್ದಲಿಂಗಯ್ಯ ನವರು ಮಾತನಾಡುತ್ತಾ, ರಾಜ್ಯ ಸರ್ಕಾರದ ಎಸ್.ಸಿ./ಎಸ್.ಟಿ. ನೌಕರರ ಸಮನ್ವಯ ಸಮಿತಿ ಆಯೋಜಿಸಿರುವ ಈ ರ್‍ಯಾಲಿಯ ಮೂಲಕ ಪ್ರಧಾನಿ ಮೋದಿಗೆ ಒತ್ತಾಯ ಮಾಡುತ್ತೇನೆ. ಕೇಂದ್ರದ ಆಡಳಿತ ತರಬೇತಿ ಇಲಾಖೆಯ 4 ಜನ ಸದಸ್ಯರಲ್ಲಿ ದಕ್ಷಿಣ ಭಾರತವನ್ನು ನಾನು ಪ್ರತಿನಿಧಿಸುತ್ತಿದೇನೆ. ದಲಿತ ವರ್ಗದ ನೌಕರರಿಗೆ ಬಡ್ತಿ ಮೀಸಲು ಸೌಲಭ್ಯ ಒದಗಿಸಲು ಕೇಂದ್ರದ ಆಡಳಿತ ತರಬೇತಿ ಇಲಾಖೆ ಶಿಫಾರಸನ್ನು ಜಾರಿಗೊಳಿಸಲು ಪ್ರಧಾನಿಗೆ ಒತ್ತಾಯ ತರುತ್ತೇನೆ ಎಂದರು.

ಬಡ್ತಿ ಮೀಸಲು ವಿಚಾರದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ದಲಿತ ವಿರೋಧಿಯಾಗಿದೆ. ತೀರ್ಪು ನೀಡುವ ವೇಳೆ ತ್ರಿಸದಸ್ಯ ಪೀಠವು ಹಿಂದಿನ ಐತಿಹಾಸಿಕ ಇಂದಿರಾ ಸಹಾನಿ ಪ್ರಕರಣವನ್ನು ಪರಿಗಣಿಸಿಲ್ಲದಿರುವುದು ವಿಷಾದನೀಯವೆಂದರು. ಬಡ್ತಿ ಪರಿಗಣಿಸುವಾಗ ಹಿಂದುಳಿಯುವಿಕೆ, ಕಾರ್ಯದಕ್ಷತೆ, ಪ್ರಾತಿನಿಧ್ಯ ಮಾನದಂಡವನ್ನು ಅನುಸರಿಸುವುದು ಸರಿಯಾದ ಕ್ರಮವಲ್ಲ, ಏಕೆಂದರೆ ಈ ಸಮಾಜದ ಕಾರ್ಯದಲ್ಲಿ ದಕ್ಷತೆ ಹೊಂದಿರುವವರು ದಲಿತರೆ ಹೊರೆತು ಮೇಲ್ವರ್ಗದ ಬ್ರಾಹ್ಮಣರಲ್ಲ. ಮಹಾಭಾರತವನ್ನು ಬರೆದವನು ಕುಮಾರವ್ಯಾಸ, ರಾಮಾಯಣ ವಾಲ್ಮೀಕಿ ರಚಿಸಿದ್ದು, ಭಗವದ್ಗೀತೆ ಭೋದಿಸಿದ್ದು ಗೊಲ್ಲನಾದ ಕೃಷ್ಣ, ಇವರ್‍ಯಾರು ಮೇಲ್ಜಾತಿಯವರಲ್ಲ, ದಲಿತರೆ ಎಂದರು. ಸಂವಿಧಾನ ರಚನೆಕಾರರು ಡಾ। ಬಾಬಾಸಾಹೇಬ್ ಅಂಬೇಡ್ಕರ್‌ರವರು, ಇವರೂ ಕೂಡ ದಲಿತರೇ. ದಲಿತರು ಅವಕಾಶಗಳಿಂದ ವಂಚಿತರಾಗಿದ್ದಾರೆ. ಅವಕಾಶ ದೊರಕಿದರೆ ಇವರು ಕಾರ್ಯದಕ್ಷತೆಯಲ್ಲಿ ಯಾರಿಗೂ ಕಡಿಮೆಯಿಲ್ಲ. ಆದ್ದರಿಂದ ಶಿಕ್ಷಣ, ಉದ್ಯೋಗದಲ್ಲಿ, ಬಡ್ತಿಯ ಮೀಸಲಾತಿ ಅಗತ್ಯವಿದೆ ಮಾತ್ರವಲ್ಲ ಖಾಸಗೀ ಕ್ಷೇತ್ರದಲ್ಲಿಯೂ ಮೀಸಲಾತಿ ಒದಗಿಸಬೇಕಾದ ಅವಶ್ಯಕತೆ ಇದೆ ಎಂದರು.

ಆನಂತರ ದಲಿತ ಹಕ್ಕುಗಳ ಸಮಿತಿಯ ಪರವಾಗಿ ಮಾರುತಿ ಮಾನ್ಪಡೆ ಮಾತನಾಡಿ, ಮೀಸಲಾತಿ ಸಂರಕ್ಷಣೆಗಾಗಿ ಐಕ್ಯತೆಯಿಂದ ಕೂಡಿದ ಹೋರಾಟದ ಅಗತ್ಯತೆ ಬಗ್ಗೆ ತಿಳಿಸಿದರು.

"ಬಡ್ತಿ ಮೀಸಲಾತಿ ಹಾಗೂ ಸಾಮಾಜಿಕ ನ್ಯಾಯ" ಎಂಬ ಕಿರು ಪುಸ್ತಕವನ್ನು ಡಾ। ಸಿದ್ದಲಿಂಗಯ್ಯ ನವರು ಬಿಡುಗಡೆ ಮಾಡಿದರು. ಕರ್ನಾಟಕದ ನಿವೃತ್ತ ನ್ಯಾಯಮೂರ್ತಿಗಳಾಗಿದ್ದ ಹೆಚ್.ಎನ್. ನಾಗಮೋಹನ್ ದಾಸ್ ರವರ ಲೇಖನಗಳನ್ನು ದಲಿತ ಹಕ್ಕುಗಳ ಸಮಿತಿಯ ವತಿಯಿಂದ ಅದರ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿಯವರ 'ಸಂಗ್ರಹ' ಈ ಪುಸ್ತಕವಾಗಿತ್ತು.

ಒಂದು ಕಡೆ ಗುಜರಾತ್‌ನಲ್ಲಿ ಪಟೇಲ್ ಸಮುದಾಯ, ಹರಿಯಾಣದಲ್ಲಿ ಜಾಟ್ ಸಮುದಾಯ, ರಾಜಸ್ತಾನದಲ್ಲಿ ಮೇಲ್ಜಾತಿಯವರೆಲ್ಲಾ ಮೀಸಲಾತಿ ಬೇಕೆಂದು ಚಳುವಳಿ ನಡೆಸುತ್ತಿದ್ದಾರೆ. ಇಲ್ಲಿನ ಬಿಜೆಪಿ ರಾಜ್ಯ ಸರ್ಕಾರಗಳು ಈ ಚಳುವಳಿಗೆ ಕುಮ್ಮಕ್ಕು ಕೊಡುತ್ತಿವೆ. ಇದರ ಹಿಂದೆ ಮೀಸಲಾತಿಯನ್ನು ಸಂವಿಧಾನದಿಂದ ಕಿತ್ತುಹಾಕುವ ಪಿತೂರಿ ನಡೆಯುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಆ ನಂತರ, ದಲಿತ ಸಂಘರ್ಷ ಸಮಿತಿಯ ಅಂಬೇಡ್ಕರ್ ವಾದದ ಮಾವಳ್ಳಿ ಶಂಕರ್, ಸಮತಾ ಸೇನೆಯ ವೆಂಕಟಸ್ವಾಮಿ, ದಲಿತ ಸ್ವಾಭೀಮಾನಿ ಸಂಘರ್ಷ ಸಮಿತಿಯ ಆರ್. ಮೋಹನ್‌ರಾಜುರವರು, ಲಕ್ಷ್ಮಿನಾರಾಯಣ ನಾಗವಾರ, ಅಣ್ಣಯ್ಯ, ಶಿವರುದ್ರಯ್ಯ ಹೀಗೆ ಅನೇಕ ದಲಿತ ನಾಯಕರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕೊನೆಯಲ್ಲಿ, ಸಂವಿಧಾನದ ಹಕ್ಕುಗಳ ಉಳಿವಿಗಾಗಿ, ಮುಂದಿನ ಪೀಳಿಗೆಯ ರಕ್ಷಣೆಗಾಗಿ – ಪ್ರತಿಜ್ಞೆ ಸ್ವೀಕರಿಸಲಾಯಿತು.

ಒಟ್ಟಾರೆಯಾಗಿ, ದಲಿತ ನೌಕರರು ರಾಜ್ಯದ ವಿವಿಧ ಜಿಲ್ಲೆಗಳಿಂದ ಬೆಂಗಳೂರಿಗೆ ಬಂದು, ತಮ್ಮ ಸಂವಿಧಾನ ಹಕ್ಕುಗಳ ಸಂರಕ್ಷಣೆಗಾಗಿ ನಡೆಸಿದ ಈ ರ್‍ಯಾಲಿ ಐತಿಹಾಸಿಕವಾದದ್ದು ಹಾಗೂ ನವಉದಾರವಾದದ ನೀತಿಗಳ ದುಷ್ಪರಿಣಾಮದಿಂದ ದೇಶದ ದುಡಿಯುವ ವರ್ಗದ ಮೇಲೆ ನಡೆಯುತ್ತಿರುವ ದಾಳಿಯ ವಿರುದ್ಧ ನಡೆಯುತ್ತಿರುವ ಪ್ರಜಾಸತ್ತಾತ್ಮಕ ಚಳುವಳಿಗಳ ಸಾಲಿಗೆ 'ದಲಿತರ ಈ ರ್‍ಯಾಲಿಯನ್ನು ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಎಂದು ಪರಿಗಣಿಸಲಾಯಿತು. ○




ಅಂತರಾಷ್ಟ್ರೀಯ ಬಂಡವಾಳ ನಿಯಂತ್ರಿಸುತ್ತದೆ.... ಪುಟ 8 ರಿಂದ

ಮಾಯಾವತಿಯವರು ಅಧಿಕಾರದಲ್ಲಿ ಇದ್ದಾಗಲೂ ಉಳುವ ದಲಿತರಿಗೆ ಭೂಮಿ ಕೊಡಿಸುವುದಾಗಲಿಲ್ಲ. ಬಂಗಾಳ, ಕೇರಳಗಳಲ್ಲಿ ದಲಿತರು ಮುಖ್ಯಮಂತ್ರಿಗಳಾಗಿರದಿದ್ದರೂ, ಉಳುಮೆ ಮಾಡುವ ದಲಿತ, ಮುಸ್ಲಿಮರಿಗೆ ಭೂಮಿ ದೊರೆಯಿತು. ದಲಿತರು ಮಂತ್ರಿಗಳಾದ ಕೂಡಲೇ ದಲಿತರ ಸಮಸ್ಯೆ ಪರಿಹಾರವಾಗುವುದಿಲ್ಲ, ಹಾಗಿದ್ದರೂ ದಲಿತರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಬೇಕು. ಕೋಮುವಾದಿ ಶಕ್ತಿಗಳನ್ನು ಬೆಳೆಸುವಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳ ಜೊತೆಗೆ ಐಡೆಂಟಿಟಿ ರಾಜಕಾರಣದ ಪಾತ್ರವೂ ಇದೆ. ಜನತೆಯ ಹೋರಾಟಗಳನ್ನು ದುರ್ಬಲಗೊಳಿಸಲು ಅಂತಾರಾಷ್ಟ್ರೀಯ ಬಂಡವಾಳ ಐಡೆಂಟಿಟಿ ರಾಜಕೀಯಕ್ಕೆ ಬೆಂಬಲಿಸುತ್ತಿರುವುದನ್ನು ನಾವು ಗುರುತಿಸಬೇಕಾಗಿದೆ.

ತನ್ನ ಸಾವಿನ 30 ವರ್ಷಗಳ ಬಳಿಕ ತನ್ನ ಪುಸ್ತಕ ಪ್ರಕಟಿಸಲು ಕೋರಿದ್ದ ಅಬುಲ್ ಕಲಾಂ ಅಜಾದ್ ಅವರು ತಮ್ಮ ಆ ಪುಸ್ತಕದಲ್ಲಿ ಕಾಂಗ್ರೆಸ್ ಒಂದು ಸೆಕ್ಯುಲರ್ ಪಕ್ಷವಲ್ಲ ಎಂದಿದ್ದಾರೆ. ಕಾಂಗ್ರೆಸ್ ಸೆಕ್ಯುಲಾರಿಸಂ ಸಂದೇಹಾಸ್ಪದ ಅಂಶಗಳಿಂದ ಕೂಡಿದೆ ಎಂಬುದಾಗಿ ಹಲವು ವಿವರಗಳನ್ನು ನೀಡಿದ್ದಾರೆ. ಘೋಷಿತ ಸೆಕ್ಯುಲಾರ್ ಪಾರ್ಟಿ ಎಂದು ನಾವು ನಂಬಿರುವ ಕಾಂಗ್ರೆಸ್ ಪಕ್ಷದ ಬಗ್ಗೆನೇ ಹೀಗಿರುವಾಗ, ಉಳಿದಿರುವ ಪಕ್ಷಗಳ ಮಾತೇನು? ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರ ಸೆಕ್ಯುಲರಿಸಂ ಅನ್ನು ಉಳಿಸಬಲ್ಲುದು ಎಂಬುದಾಗಿ ಜಿ.ವಿ.ಶ್ರೀರಾಮರೆಡ್ಡಿ ಸ್ಪಷ್ಟಪಡಿಸಿದರು. ○

ಚುನಾವಣೆಗೆ ವಿದೇಶಿ ಕಾರ್ಪೊರೇಟ್ ಹಣ ಪಡೆದದ್ದನ್ನು ಮರೆಮಾಚಲು ಮತ್ತೆ ಎಫ್‌ಸಿಆರ್‌ಎ ತಿದ್ದುಪಡಿ!



ದಿಲ್ಲಿಯ ಈಗಿನ ಆಳುವ ಪಕ್ಷ ಮತ್ತು ಹಿಂದಿನ ಆಳುವ ಪಕ್ಷ ವಿದೇಶಿ ನಿಧಿ ನಿಯಂತ್ರಣ ಕಾನೂನಿನ ಉಲ್ಲಂಘನೆ ಮಾಡಿದ್ದಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ ಏಕೆ ಎಂದು ಅಚ್ಛೇದಿನ್ ಸರಕಾರ ಮತ್ತೆ ದಿಲ್ಲಿ ಹೈಕೋರ್ಟ್‌ನಿಂದ ತರಾಟೆಗೆ ಗುರಿಯಾಗಬೇಕಾಗಿ ಬಂದಿದೆ. ಇಂಗ್ಲೆಂಡಿನ ವೆದಾಂತ ಕಂಪನಿಯ ಎರಡು ಉಪ ಕಂಪನಿಗಳಿಂದ ಬಿಜೆಪಿ ಮತ್ತು ಕಾಂಗ್ರೆಸ್ ವಿದೇಶಿ ನಿಧಿ ಪಡೆದಿರುವುದು ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ),1976ರ ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆಯ ಉಲ್ಲಂಘನೆಯಾಗಿದ್ದು ಈ ಎರಡು ಪಕ್ಷಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ದಿಲ್ಲಿ ಹೈಕೋರ್ಟ್ 2014ರಲ್ಲಿ ಆದೇಶ ನೀಡಿತ್ತು. ಏಕೆಂದರೆ ಈ ಕಾಯ್ದೆಗಳು ರಾಜಕೀಯ ಪಕ್ಷಗಳು ವಿದೇಶಿ ವಂತಿಗೆಗಳನ್ನು ಪಡೆಯುವುದನ್ನು ನಿಷೇಧಿಸಿವೆ. ಎರಡೂ ಪಕ್ಷಗಳು ಈ ತೀರ್ಪಿನ ವಿರುದ್ಧ ಸುಪ್ರಿಂ ಕೋರ್ಟಿಗೆ ಅರ್ಜಿ ಸಲ್ಲಿಸಿದವು. ನಂತರ ಅದನ್ನು ಹಿಂತೆಗೆದುಕೊಂಡವು.

ಏಕೆಂದರೆ ಈ ನಡುವೆ ಇದರಿಂದ ತಪ್ಪಿಸಿಕೊಳ್ಳಲು ಮೋದಿ ಸರಕಾರ ಆಗ ಈ ಕಾಯ್ದೆಯನ್ನೇ ತಿದ್ದುಪಡಿ ಮಾಡಲು ಮುಂದಾಯಿತು. ಇದಕ್ಕೆ ರಾಜ್ಯಸಭೆಯಲ್ಲಿ ಮಂಜೂರಾತಿ ಸಿಗಲಿಕ್ಕಿಲ್ಲ ಎಂದು ಅದನ್ನು ಹಣಕಾಸು ಮಸೂದೆಯಾಗಿ ತಂದಿತು. ಅದಕ್ಕಾಗಿ 'ವಿದೇಶಿ ಕಂಪನಿಗಳು 'ಎಂಬುದರ ನಿರೂಪಣೆಯನ್ನೇ ಬದಲಿಸಲಾಯಿತು. ಇದನ್ನು ಹಿಂದಿನಿಂದಲೇ ಅನ್ವಯವಾಗುವಂತೆಯೂ ಮಾಡಿ ಈ ಉಲ್ಲಂಘನೆಯ ಕಳಂಕ ಹೋಯಿತು ಎಂದು ಅದು ನಿರಾಳವಾಯಿತು.

ಆದರೆ ಈ ತಿದ್ದುಪಡಿ ಎಫ್‌ಸಿಆರ್‌ಎ ಕಾಯ್ದೆಗೆ 2010ರಿಂದಷ್ಟೇ ಅನ್ವಯವಾಗಲು ಸಾಧ್ಯ, ಏಕೆಂದರೆ 1976ರ ಈ ಕಾಯ್ದೆಯನ್ನು 2010ರಲ್ಲಿ ತಿದ್ದುಪಡಿ ಮಾಡಲಾಗಿತ್ತು. ಆದ್ದರಿಂದ ನಂತರದ ತಿದ್ದುಪಡಿಯ ಅನ್ವಯ ಕೂಡ 2010ಕ್ಕಿಂತ ಹಿಂದೆ ಹೋಗುವಂತಿಲ್ಲ, ಈ ಮೂಲಕ ಹೈಕೋರ್ಟಿನ ಆದೇಶದ ಪಾಲನೆ ಮಾಡಿಲ್ಲ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್(ಎಡಿಆರ್) ಈ ಮಾರ್ಚ್ ತಿಂಗಳಲ್ಲಿ ಕೇಂದ್ರ ಗೃಹ ಮಂತ್ರಾಲಯದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಹಾಕಿತು. ಏಕೆಂದರೆ ಈ ಆದೇಶ ವೆದಾಂತ ಕಂಪನಿಯಿಂದ 2004ರಿಂದ 2012ರ ನಡುವೆ ವಿದೇಶಿ ವಂತಿಗೆಗಳನ್ನು ಪಡೆದಿರುವುದರ ಕುರಿತಾದದ್ದಾಗಿತ್ತು.

ಈ ಕಾಯ್ದೆ ಉಲ್ಲಂಘನೆಗೆ ಶಿಕ್ಷೆ ಎಂದರೆ ರಾಜಕೀಯ ಪಕ್ಷಗಳು ಈ ವಂತಿಗೆ ಪಡೆಯಲು ನೆರವಾದವರಿಗೆ 5 ವರ್ಷಗಳ ಜೈಲುವಾಸ ಅಥವ ದಂಡ ಅಥವ ಎರಡೂ.

ಹೈಕೋರ್ಟಿನ ತರಾಟೆಯ ನಂತರ ಕೇಂದ್ರ ಗೃಹ ಮಂತ್ರಾಲಯ ಏನು ಮಾಡಬಹದು ಎಂದು ಅಟಾರ್ನಿ ಜನರಲ್ ಅವರ ಸಲಹೆ ಕೇಳಿದೆಯಂತೆ. ಉದಾರೀಕರಣದ ನಂತರ ಎಫ್‌ಡಿಐ ನಿಯಮಾವಳಿಗಳನ್ನು ಉದಾರಗೊಳಿಸಿದ ಮೇಲೆ ಭಾರತೀಯ ಡೈರೆಕ್ಟರುಗಳನ್ನು ಹೊಂದಿರುವ ಕಂಪನಿಯಲ್ಲಿ 50%ಕ್ಕಿಂತ ಹೆಚ್ಚು ವಿದೇಶಿ ಹೂಡಿಕೆ ಇದ್ದರೂ ಅದು ಭಾರತೀಯ ಕಂಪನಿ ಎಂಬುದೀಗ ಮೋದಿ ಸರಕಾರದ ತರ್ಕ. ಎಫ್‌ಸಿಆರ್‌ಎ ಕಾಯ್ದೆಯನ್ನು ಇದಕ್ಕನುಗುಣವಾಗಿ ಮತ್ತೆ ತಿದ್ದುಪಡಿ ಮಾಡಬಹುದೇ ಎಂಬ ಚಿಂತನೆಯನ್ನು ಸರಕಾರ ನಡೆಸುತ್ತಿರುವಂತೆ ಕಾಣುತ್ತದೆ.

ಆದರೆ ಎಫ್‌ಸಿಆರ್‌ಎ, 1976 ಎಂಬುದು ಈಗ ಇಲ್ಲವೇ ಇಲ್ಲ, ಹಾಗಿರುವಾಗ ಅದರ ತಿದ್ದುಪಡಿ ಹೇಗೆ ಸಾಧ್ಯ ಎಂಬುದು ಎಡಿಆರ್ ವಕ್ತಾರರ ತರ್ಕ.

ಕಾನೂನು ತರ್ಕಗಳೇನೇ ಇರಲಿ, ಮಾತುಗಳ ಅಬ್ಬರವೇ ಜೀವಾಳವಾಗಿರುವ ಸರಕಾರ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಹೇಳಿರುವಂತೆ, ಚುನಾವಣೆಗಳಿಗಾಗಿ ವಿದೇಶಿ ಕಾರ್ಪೊರೇಟ್ ಹಣ ಪಡೆದದ್ದಂತೂ ವಾಸ್ತವ. ಅದನ್ನು ಮರೆ ಮಾಚಲು ಮತ್ತೆ ಎಫ್‌ಸಿಆರ್‌ಎ ತಿದ್ದುಪಡಿಗೆ ಮುಂದಾದರೆ ಅದರಲ್ಲಿ ಆಶ್ಚರ್ಯವಿಲ್ಲ.

ಕಸಾಯಿಖಾನೆಗಳ ಲೈಸೆನ್ಸ್‌ಗಳನ್ನು ನವೀಕರಿಸಿ- ಯೋಗಿ ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ

ಅಲಹಾಬಾದ್ ಹೈಕೋರ್ಟಿನ ಲಕ್ನೌ ಪೀಠ ಜೀವನಾಧಾರದ ಹಕ್ಕು(ಕಲಮು 19) ಮತ್ತು ಆಹಾರದ ಆಯ್ಕೆಯ ಹಕ್ಕು (ಕಲಮು 21) ಇವುಗಳಲ್ಲಿ ಯಾವುದೇ ಸರಕಾರ ಹಸ್ತಕ್ಷೇಪ ಮಾಡುವಂತಿಲ್ಲ ಎಂದು ಉತ್ತರಪ್ರದೇಶದ ಯೋಗಿ ಆದಿತ್ಯನಾಥ ಸರಕಾರಕ್ಕೆ ನೆನಪಿಸಿದೆ. ಕಾನೂನುಬಾಹಿರ ಎಂದು ಕಸಾಯಿಖಾನೆಗಳನ್ನು ಮುಚ್ಚುವ ಈ ಸರಕಾರದ ನಿರ್ದೇಶನವನ್ನು ಹೈಕೋರ್ಟ್ ತೀವ್ರ ತರಾಟೆಗೆ ತಗೊಂಡಿದೆ.

ಈಗಿರುವ ಲೈಸೆನ್ಸ್‌ಗಳನ್ನು ನವೀಕರಿಸಬೇಕು ಮತ್ತು ಹೊಸ ಪರವಾನಿಗೆಗಳನ್ನು ಕೊಡಬೇಕು ಎಂದು ಉತ್ತರಪ್ರದೇಶ ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಮಾಂಸಾಹಾರಿಗಳಿಗೆ ಆರೋಗ್ಯಕರ ಆಹಾರವನ್ನು ಒದಗಿಸುವುದು ಸರಕಾರದ ಕರ್ತವ್ಯ. ಯೋಗಿ ಆದಿತ್ಯನಾಥ ಸರಕಾರ ನಮ್ಮ ಜಾತ್ಯತೀತ ಸಂವಿಧಾನದ ಅಡಿಯಲ್ಲಿ ಒಂದು ಮಾದರಿ ಸಾಮಾಜಿಕ ಕಲ್ಯಾಣದ ಪ್ರಭುತ್ವವಾಗಿ ಕಾನೂನನ್ನು ಜಾರಿ ಮಾಡಬೇಕು ಎಂದು ಅದು ಹೇಳಿದೆ.

ಸರಕಾರ ಈ ದಿಕ್ಕಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಉನ್ನತಾಧಿಕಾರದ ಸಮಿತಿಯನ್ನು ರಚಿಸಿರುವುದಾಗಿ ಹೇಳಿತು. ಆದರೆ 2006ರ ಕಾನೂನಿನ ಮತ್ತು ಅದರಡಿಯಲ್ಲಿ ರೂಪಿಸಿದ ನಿಯಮಾವಳಿಗಳ ಸಾಂವಿಧಾನಿಕ, ಕಾನೂನಾತ್ಮಕ ಹಾಗೂ ವಾಸ್ತವಿಕ ಜಾರಿಯ ಪ್ರಶ್ನೆಗಳ ಅಧ್ಯಯನ ಮಾಡಿ, ತನ್ನ ನಿರ್ದೇಶನಗಳನ್ನು ನೀಡುವ ಮೊದಲು ಈ ಕುರಿತು ಕೂಲಂಕಷವಾಗಿ ಯೋಚಿಸಿದ್ದರೆ ಇಂತಹ ತೊಂದರೆಗಳು ಉಂಟಾಗುತ್ತಿರಲಿಲ್ಲ ಎಂದೂ ಟಿಪ್ಪಣಿ ಮಾಡಿರುವ ನ್ಯಾಯಾಲಯ ಈ ವಿಷಯದಲ್ಲಿ ಇನ್ನಷ್ಟು ಮೀನಮೇಷ ಮಾಡದೆ ಸಾಧ್ಯವಾದಷ್ಟು ಬೇಗನೇ ಈ ಪ್ರಶ್ನೆಯನ್ನು ಪರಿಹರಿಸಬೇಕು ಎಂದು ನಿರ್ದೇಶನ ನೀಡಿದೆ.

ಕೇಂದ್ರ ಸರಕಾರವೇ ಕೋಳಿಸಾಕಣೆ, ಮೀನುಗಾರಿಕೆ, ಹಂದಿ ಸಾಕಣೆ ಮುಂತಾದವಕ್ಕೆ ಉತ್ತೇಜನೆ ನೀಡುತ್ತಿರುವಾಗ ಸಾರ್ವಜನಿಕ ಬಳಕೆಯೊಂದಿಗೆ ನೇರ ಸಂಬಂಧವಿರುವ ಇಂತಹ ಚಟುವಟಿಕೆಗಳಿಗೆ ಅಡ್ಡಿ ಪಡಿಸುವ ಬದಲು ಉತ್ತೇಜನೆ ನೀಡಬೇಕಾದ್ದು ರಾಜ್ಯ ಸರಕಾರದ ಕರ್ತವ್ಯ ಎಂದು ಹೈಕೋರ್ಟ್ ಹೇಳಿದೆ.

2 ಕೋಟಿ ಪ್ರಧಾನಿ ಪತ್ರ, 10 ಕೋಟಿ ಎಸ್‌ಎಂಎಸ್, 400 ಪತ್ರಿಕೆಗಳಲ್ಲಿ ಹಾಜೀರಾತು ಇತ್ಯಾದಿ ಇತ್ಯಾದಿ

3 ವರ್ಷಗಳ ವಿಫಲತೆ ಮರೆಮಾಚಲು 15 ದಿನಗಳ ಪ್ರಚಂಡ ಆಚರಣೆ

ಅಚ್ಛೇ ದಿನ್ ಸರಕಾರ ಮೂರು ವರ್ಷಗಳನ್ನು ಪೂರೈಸುತ್ತಿರುವ ಮೇ 26ರಿಂದ 15 ದಿನಗಳ ಪ್ರಚಂಡ ಆಚರಣೆಗೆ ಆಳುವ ಪಕ್ಷ ಭರದ ಸಿದ್ಧತೆ ನಡೆಸುತ್ತಿದೆ ಎಂದು ಎಎನ್‌ಐ ವರದಿ ಮಾಡಿದೆ. ಅದರ ಮುನ್ನಾದಿನ ಅಂದರೆ ಮೇ 25ರಂದು 'ನವಭಾರತ' ಎಂಬ ಒಂದು ಹೊಸ ಸರಕಾರೀ ಪ್ರಚಾರ ಆರಂಭಿಸಲಾಗುತ್ತಿದೆಯಂತೆ.

ಬಿಜೆಪಿ ಮೊತ್ತಮೊದಲ ಬಾರಿಗೆ ಸರಕಾರ ರಚಿಸಿದ ಅಸ್ಸಾಂನ ರಾಜಧಾನಿ ಗುವಾಹಾಟಿಯಲ್ಲಿ ಪ್ರಧಾನ ಮಂತ್ರಿಗಳು ದೇಶವನ್ನುದ್ದೇಶಿಸಿ ಮಾತಾಡುವುದರೊಂದಿಗೆ ಈ ಮೆಗಾ ಆಚರಣೆ ಆರಂಭವಾಗುತ್ತದಂತೆ. ನಂತರ ಇನ್ನೂ ನಾಲ್ಕು ನಗರಗಳಲ್ಲಿ ಹೀಗೆ ್ರಧಾನ ಮಂತ್ರಿಗಳು ದೇಶವನ್ನುದ್ದೇಶಿಸಿ ಮಾತಾಡುತ್ತಾರಂತೆ. ಈ ನಾಲ್ಕು ನಗರಗಳಲ್ಲಿ ಮುಂದಿನ ವರ್ಷ ಚುನಾವಣೆ ನಡೆಯಲಿರುವ ಕರ್ನಾಟಕವೂ ಇರಬಹುದಂತೆ.

ದೇಶದ 900 ನಗರಗಳಲ್ಲಿ ಈ ಮೆಗಾ ಫೆಸ್ಟ್ ನಡೆಯುತ್ತದೆ, ಪ್ರತಿಯೊಬ್ಬ ಮಂತ್ರಿ ಇವುಗಳಲ್ಲಿ ನಾಲ್ಕು ನಗರಗಳಿಗೆ ಹೋಗುತ್ತಾರಂತೆ. 500 ನಗರಗಳಲ್ಲಿ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಕಾರ್ಯಕ್ರಮಗಳನ್ನು ನಡೆಸಲಾಗವುದಂತೆ. ಇದಕ್ಕೆ ಇನ್ನೂ ಅರ್ಥ ಉಳಿದಿದೆ ಎಂದು ತೋರಿಸಲು ಇರಬಹುದು.

ಇಷ್ಟೇ ಅಲ್ಲ, ಈ 15 ದಿನಗಳ ಇನ್ನೂ ಕೆಲವು ಅಂಕಿ-ಅಂಶಗಳು:

* ಪ್ರಧಾನಿಗಳಿಂದ ಎರಡು ಕೋಟಿ ಜನಸಾಮಾನ್ಯರಿಗೆ ಪತ್ರ
* 10 ಕೋಟಿ ಎಸ್‌ಎಂಎಸ್‌ಗಳು
* ಮೇ 26 ರಂದು 400 ಪತ್ರಿಕೆಗಳಲ್ಲಿ ಮೊದಲ ಪುಟದ ಜಾಹೀರಾತು
* ಟಿವಿ, ರೇಡಿಯೋದಲ್ಲಿ 30 ಮತ್ತು 60 ಸೆಕೆಂಡುಗಳ ಜಾಹೀರಾತು
* 300 ಮಲ್ಟಿಮಿಡಿಯಾ ಪ್ರದರ್ಶನಗಳು-ವಿಶೇಷವಾಗಿ ಬಿಜೆಪಿ ಬಲಿಷ್ಟವಾಗಿರದ, ಚುನಾವಣೆಯ ಕ್ಯೂನಲ್ಲಿರುವ ರಾಜ್ಯಗಳಲ್ಲಿ
* ಪ್ರತಿ ಮಂತ್ರಾಲಯದಿಂದ 'ಅಂದು-ಇಂದು' ಎಂಬ ಸಾಧನೆಗಳ ಪುಸ್ತಕಗಳು
* ಮೇ 27-28: ಪ್ರತಿಯೊಬ್ಬ ಸಂಪುಟ ಮಂತ್ರಿಯಿಂದ ಪತ್ರಿಕಾ ಸಮ್ಮೇಳನ

'ದೇಶ್ ಬದಲ್ ರಹಾ ಹೈ' ಎಂಬ ಟ್ಯಾಗ್‌ಲೈನ್‌ಗೆ ಇನ್ನು 'ಭಾರತ್ ಉಭರ್ ರಹಾ ಹೈ' ಎಂಬ ಸಾಕು ಸೇರಿಸಲಾಗುತ್ತದೆಯಂತೆ.

ಮೋದಿ ಫೆಸ್ಟ್



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ನಜೀಬ್ ಕಾಣೆ ವಿಚಾರಣೆ ಸಿಬಿಐಗೆ: ದಿಲ್ಲಿ ಪೋಲಿಸ್‌ಗೆ ಹೈಕೋರ್ಟಿನ ತೀವ್ರ ತರಾಟೆ

ಅಚ್ಛೇದಿನ್ ಆಳ್ವಿಕೆಗೆ ಮೂರು ವರ್ಷಗಳಾಗುತ್ತಿರುವ ವೇಳೆಗೆ ಈ ದಿನಗಳ ಹಲವು ಆಡಂಬರಪೂರ್ಣ ಘೋಷಣೆಗಳಲ್ಲಿ ಒಂದಾದ 'ಉತ್ತಮ 'ಆಳ್ವಿಕೆ'ಯ ಪೊಳ್ಳು ಮತ್ತೊಮ್ಮೆ ಬಯಲಾಗಿದೆ. ಇನ್ನೊಂದು ಹೈಕೋರ್ಟ್‌ನ ಮತ್ತೊಂದು ತೀರ್ಮಾನ ಇದನ್ನು ಬಯಲು ಮಾಡಿದೆ.

ಅಕ್ಟೋಬರ್ 15 ರಂದು ದಿಲ್ಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯುದ ವಿದ್ಯಾರ್ಥಿ ನಜೀಬ್ ಅಹ್ಮದ್ ಎಬಿವಿಪಿ ಮಂದಿಯೊಂದಿಗೆ ತಿಕ್ಕಾಟದ ನಂತರ ಕಾಣೆಯಾದ. ಆದರೆ ನೇರವಾಗಿ ಕೇಂದ್ರ ಸರಕಾರದ ಅಡಿಯಲ್ಲಿರುವ ದಿಲ್ಲಿ ಪೋಲೀಸರಿಗೆ ಇನ್ನೂ ಆತನಿಗೆ ಏನಾಗಿದೆ ಎಂದು ಪತ್ತೆ ಮಾಡಲು ಸಾಧ್ಯವಾಗಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿರುವ ದಿಲ್ಲಿ ಹೈಕೋರ್ಟ್ ಈ ವಿಚಾರಣೆಯನ್ನು ಮೇ 16ರಂದು ಸಿಬಿಐಗೆ ವರ್ಗಾಯಿಸಿದೆ. ಒಬ್ಬ ಡಿಐಜಿ ಶ್ರೇಣಿಯ ಅಧಿಕಾರಿ ಉಸ್ತುವಾರಿಯಲ್ಲಿ ಈ ವಿಚಾರಣೆ ನಡೆಸಬೇಕು ಎಂದು ಅದು ಹೇಳಿದೆ.

ಇದಕ್ಕೆ ಮೊದಲು ದಿಲ್ಲಿ ಪೋಲೀಸ್ ಸರಿಯಾದ ವಿಚಾರಣೆ ನಡೆಸುತ್ತಿರುವಂತೆ ಕಾಣುತ್ತಿಲ್ಲ ಎಂದು ಹೈಕೋರ್ಟ್ ಛೀಮಾರಿ ಹಾಕಿತ್ತು.

ನಜೀಬ್ ಕಾಣೆಯಾಗಲು ಕಾರಣರು ಎಂದು ಸಂದೇಹಕ್ಕೆ ಒಳಗಾಗಿರುವ ಒಂಭತ್ತು ವಿದ್ಯಾರ್ಥಿಗಳನ್ನು (ಇವರೆಲ್ಲ ಎಬಿವಿಪಿ ಮಂದಿ) ಮೊದಲ ದಿನವೇ ಕಸ್ಟಡಿಗೆ ತಗೊಂಡು ಏಕೆ ವಿಚಾರಣೆಗೆ ಒಳಪಡಿಸಿಲ್ಲ, ಮೊದಲು ಅವರ ವಿಚಾರಣೆ ನಡೆಸದೆ ದೇಶದೆಲ್ಲೆಡೆ 400 ಮಂದಿಯನ್ನು ಕಳಿಸುವುದರಲ್ಲಿ ಏನು ಅರ್ಥವಿದೆ ಎಂದು ಹೈಕೋರ್ಟ್ ದಿಲ್ಲಿ ಪೋಲಿಸರನ್ನು ತೀವ್ರ ತರಾಟೆಗೆ ತಗೊಂಡಿತು.

ಈ ನಡುವೆ ನಜೀಬ್ ಇಸ್ಲಾಮೀ ಭಯೋತ್ಪಾದಕರ ವೆಬ್‌ಸೈಟ್‌ಗಳನ್ನು ನೋಡುತ್ತಿದ್ದರು ಎಂಬ ಸುದ್ದಿಯನ್ನು ಪೋಲೀಸ್ ಮೂಲಗಳಿಂದ ಹರಿಯ ಬಿಡಲಾಯಿತು. ಇದು ಈ ಹಿಂದೆ ಜೆಎನ್‌ಯು ವಿದ್ಯಾರ್ಥಿಗಳ ಮೇಲೆ 'ರಾಜದ್ರೋಹ'ದ ಆಪಾದನೆಗೆ ನೆವವಾದ ಸುಳ್ಳು ವೀಡಿಯೋಗಳಂತೆ ಶುದ್ಧ ಸುಳ್ಳು ಮಾಹಿತಿ ಎಂದು ಬೇಗನೇ ಬಯಲಿಗೆ ಬಂತು. ದಿಲ್ಲಿ ಪೋಲೀಸ್ ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯಲ್ಲಿ ಆತ ಮೂಲಭೂತವಾದಿ ವೆಬ್‌ಸೈಟ್‌ಗಳನ್ನು ನೋಡುತ್ತಿದ್ದ ಎಂಬ ಪ್ರಸ್ತಾಪವೇನೂ ಇಲ್ಲ. ಈ ಸುಳ್ಳು ಮಾಹಿತಿಯನ್ನು ನೆಟ್ಟ ಅಥವ ಸೋರುವಂತೆ ಮಾಡಿದ ಅಧಿಕಾರಿ ಯಾರೆಂದು ಆಂತರಿಕ ವಿಚಾರಣೆ ನಡೆಸಬೇಕಾಗಿತ್ತು ಎಂದು ಹೇಳಿದ ನ್ಯಾಯಾಲಯ **ಪೋಲೀಸರು ಇದನ್ನು ಉದ್ರೇಕಕಾರಿಯಾಗಿಸಲು ಅಥವ ತಪ್ಪಿಸಿಕೊಳ್ಳುವ ದಾರಿ ಹುಡುಕಿಕೊಳ್ಳುತ್ತಿರಬಹುದು** ಎಂಬ ಕಟು ಟಿಪ್ಪಣಿಯನ್ನೂ ಮಾಡಿದೆ.

ವಾಸ್ತವವಾಗಿ ದಿಲ್ಲಿ ಪೋಲೀಸಿನ ವಿಫಲತೆ 'ಅಚ್ಛೇದಿನ್'ವಾಲಾಗಳ ಹುನ್ನಾರದ ವಿಫಲತೆ ಎಂದು ಬೇರೆ ಹೇಳಬೇಕಾಗಿಲ್ಲ.


ಆಡಂಬರದ ಘೋಷಣೆಗಳು ಮತ್ತು ಹಿಂದಿಯಲ್ಲಿ ಇಂಗ್ಲಿಷ್ ಪದಗಳ ಮೊದಲಕ್ಷರಗಳಾಟ ಒಂದು ಗೀಳೇ ಆಗಿಬಿಟ್ಟಿರುವ ಈ ದಿನಗಳಲ್ಲಿ ಪ್ರಧಾನಿಗಳು ಮೇ 9 ರಂದು ಹೊಸದೊಂದು ಸಮೀಕರಣ ಪ್ರಕಟಿಸಿದರು:

ಐಟಿ+ಐಟಿ=ಐಟಿ. ಅಂದರೆ

ಮಾಹಿತಿ ತಂತ್ರಜ್ಞಾನ +ಭಾರತೀಯ ಪ್ರತಿಭೆ= ನಾಳಿನ ಭಾರತ ....

-ಇದು ಸುದ್ದಿ 1 . ಅದೇ ದಿನದ ಸುದ್ದಿ 2....


ಭಾರತದ ದೊಡ್ಡ ಐಟಿ ಕಂಪನಿಗಳು, ದೊಡ್ಡ ಪ್ರಮಾಣದಲ್ಲಿ 'ಭಾರತೀಯ ಪ್ರತಿಭೆ'ಗಳನ್ನು ನಿಮಗಿನ್ನು ಕೆಲಸ ಇಲ್ಲ ಎಂದು ಮನೆಗೆ ಕಳಿಸುತ್ತಿದ್ದಾರೆ. ವಿಪ್ರೊ 2000, ಕಾಂಗ್ನಿಸೆಂಟ್ 6000 ಮತ್ತು ಇನ್ಫೊಸಿಸ್ 1000 'ಮಂದಿಯನ್ನು ಲೇ ಆಫ್ ಮಾಡುತ್ತಾರೆ. ಅವರು ಇನ್ನು 'ಅಮೆರಿಕನ್ ಪ್ರತಿಭೆ'ಗಳಿಗೆ ಜಾಗ ಮಾಡಿ ಕೊಡಬೇಕು.



ಕೃಪೆ: ರೆಬೆಲ್ ಪೊಲಿಟಿಕ್@ನ್ಯೂಸ್‌ಕ್ಲಿಕ್.ಇನ್

ಮೋದಿ ಸರಕಾರದ ಮೂರು ವಿಫಲ ವರ್ಷಗಳಲ್ಲಿ..

ಪ್ರಧಾನ ಮಂತ್ರಿಗಳು ‘ಅಚ್ಛೇ ದಿನ್’ಗಳ ಆಶ್ವಾಸನೆಗಳನ್ನು ನೀಡಿ ಮೂರು ವರ್ಷಗಳಾಗುತ್ತಿವೆ. ಆ ಆಶ್ವಾಸನೆಗಳೆಲ್ಲ ಎಲ್ಲಿ ಮಾಯವಾದವು ಎಂದು ಜನಗಳು ಆಶ್ಚರ್ಯ ಪಡುತ್ತಿದ್ದರೆ, ಪ್ರಧಾನ ಮಂತ್ರಿಗಳಾದಿಯಾಗಿ ಆಳುವ ಪಕ್ಷದ ಮುಖಂಡರೆಲ್ಲ ಭವಿಷ್ಯದ ಚುನಾವಣೆಗಳನ್ನು ಗೆಲ್ಲುವುದು ಹೇಗೆ ಎಂಬುದರ ಮೇಲೆಯೇ ಗಮನ ಕೇಂದ್ರೀಕರಿಸಿದಂತಿದೆ. ಅದಕ್ಕಾಗಿ ಪ್ರತಿದಿನ ಎಂಬಂತೆ ವಿಐಪಿ ಕಾರುಗಳ ಮೇಲೆ ಕೆಂಪು ದೀಪಗಳನ್ನು ತೆಗೆಯುವುದು ಮುಂತಾದ ಹೊಸ ಹೊಸ ಟ್ರಿಕ್ಕುಗಳು, ಪದಗಳ ಕಸರತ್ತು ನಡೆಯುತ್ತಲೇ ಇವೆ. ದೇಶದ ಎರಡು ಮುಖ್ಯ ಜನವಿಭಾಗಗಳಾದ ಕಾರ್ಮಿಕರು ಮತ್ತು ರೈತರಿಗೆ ನೀಡಿದ ಆಶ್ವಾಸನೆಗಳ ಗತಿಯೇನಾಗಿದೆ ಎಂಬುದರ ಒಂದು ಪಕ್ಷಿನೋಟ ಇಲ್ಲಿದೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಕಾರ್ಮಿಕ ಮಂತ್ರಾಲಯ ಕಾರ್ಮಿಕರ ಒಳಿತಿಗಾಗಿ ಅಲ್ಲ, ಕಾರ್ಪೊರೇಟ್‌ಗಳ ‘ ಸುಗಮ ವ್ಯವಹಾರ’ಗಳಿಗಾಗಿ!

ಈ ಮೇ ದಿನದಂದು ಮೋದಿ ಸರಕಾರದ ಕಾರ್ಮಿಕ ಮಂತ್ರಾಲಯ ನಡೆಸಿದ ಸಮಾರಂಭದ ಬಹುಪಾಲು ಸಮಯವನ್ನು ಮಂತ್ರಾಲಯದ ಅಧಿಕಾರಿಗಳು ತರಹಾವಾರಿ ಪೋರ್ಟಲ್‌ಗಳನ್ನು, ಆಪ್‌ಗಳನ್ನು ತೋರಿಸುವುದರಲ್ಲೇ ಕಳೆದರು. ಇವೆಲ್ಲ ಕಾರ್ಮಿಕರ ಸೌಲಭ್ಯಗಳನ್ನು ಹೆಚ್ಚಿಸಲಿಕ್ಕಾಗಿ ಅಲ್ಲ, ಬದಲಿಗೆ ‘ವ್ಯಾಪಾರ-ವ್ಯವಹಾರಗಳ ಸುಗಮತೆ’ಗಾಗಿ. ಇದು ಕಳೆದ ಮೂರು ವರ್ಷಗಳಲ್ಲಿ ಈ ಸರಕಾರ ಕೊಟ್ಟಿರುವದೇನು ಎಂಬುದರ ಒಂದು ಇಣುಕು ನೊಟವೂ ಆಗಿತ್ತು.

* ಕಾರ್ಮಿಕ ವರ್ಗವನ್ನು ಕುರಿತಂತೆ ಮೋದಿ ಸರಕಾರದ ಧೋರಣೆ ಈ ಮೂರು ವರ್ಷಗಳಲ್ಲಿ ಸ್ಪಷ್ಟವಾಗಿದೆ: ಅದೆಂದರೆ ವಿದೇಶಿ ಹೂಡಿಕೆದಾರರು ಮತ್ತು ಉದ್ದಿಮೆಗಳಿಗೆ ಭವ್ಯ ಸ್ವಾಗತ ನೀಡಲು ಹೈರ್ ಅಂಡ್‌ಫೈರ್ ಧೋರಣೆ ಮತ್ತು ಅದಕ್ಕಾಗಿ ಕಾರ್ಮಿಕರ ಹಕ್ಕುಗಳು ಮತ್ತು ಸಂಬಳಗಳ ಮೇಲೆ ಕ್ರೂರ ದಾಳಿ. ಜತೆಗೆ 4ಲಕ್ಷ ಉದ್ಯೋಗಗಳನ್ನು ನಾಶಪಡಿಸಿದ ನೋಟುರದ್ಧತಿ.
* ಕಾರ್ಮಿಕರ ಮೇಲೆ ದಾಳಿ 2014ಮೇನಲ್ಲಿ ಈ ಸರಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಆರಂಭವಾಯಿತು. ಇದಕ್ಕಾಗಿ ಬಿಜೆಪಿ ಆಳ್ವಿಕೆಯ ರಾಜಸ್ತಾನಲ್ಲಿ ‘ಕಾರ್ಮಿಕ ಕಾನೂನು ಸುಧಾರಣೆಯ ಪ್ರಯೋಗಾಲಯ’ವನ್ನೇ ತೆರೆಯಲಾಯಿತು, ನಂತರ ಇದನ್ನು ಬಿಜೆಪಿ ಆಳ್ವಿಕೆಯ ಮಹಾರಾಷ್ಟ್ರ, ಮಧ್ಯಪ್ರದೇಶ ಇತ್ಯಾದಿಗಳಿಗೆ ವಿಸ್ತರಿಸಲಾಯಿತು.
* ಕಾರ್ಪೊರೇಟ್ ಹಿತಗಳಿಗಾಗಿ ಕಾರ್ಮಿಕ ಕಾನೂನುಗಳ ಸರಳೀಕರಣ ಈ ಪ್ರಯೋಗಾಲಯದ ಮುಖ್ಯ ಗುರಿ!
* ಸಣ್ಣ ಫ್ಯಾಕ್ಟರಿಗಳ ಕಾಯ್ದೆಯ ಮೂಲಕ 40ಕ್ಕಿಂತ ಕಡಿಮೆ ಕಾರ್ಮಿಕರಿರುವ ಘಟಕಗಳಿಗೆ ಆರು ಪ್ರಮುಖ ಕಾರ್ಮಿಕ ಕಾಯ್ದೆಗಳಿಂದ ವಿನಾಯ್ತಿ.
* ಅಪ್ರೆಂಟಿಸ್ ಕಾಯ್ದೆಗೆ ತಿದ್ದುಪಡಿಯ ಮೂಲಕ 250ಕ್ಕಿಂತ ಕಡಿಮೆ ಕಾರ್ಮಿಕರಿರುವ ಕಂಪನಿಗಳಲ್ಲಿ ಅಪ್ರೆಂಟಿಸ್‌ಗಳ ಅರ್ಧದಷ್ಟು ವೆಚ್ಚವನ್ನು ಭರಿಸಬೇಕು ಎಂದು ರಾಜ್ಯ ಸರಕಾರಗಳಿಗೆ ನಿರ್ದೇಶನ. ಈ ಮೂಲಕ ಕಂಪನಿಗಳು ನಿಯಮಿತ ಕಾರ್ಮಿಕರ ಬದಲು ಅಪ್ರೆಂಟಿಸ್ ಕಾರ್ಮಿಕರನ್ನು ನೇಮಿಸಿಕೊಳ್ಳಲು ಅನುಕೂಲ ಕಲ್ಪಿಸಲಾಗಿದೆ.
* ಫ್ಯಾಕ್ಟರಿ ಕಾಯ್ದೆ ಮತ್ತು ಅಪ್ರೆಂಟೀಸ್ ಕಾಯ್ದೆಗಳಿಗೆ ತಿದ್ದುಪಡಿಗಳು ಮತ್ತು ಸಣ್ಣ ಉದ್ದಿಮೆಗಳಿಗೆ ಪ್ರತ್ಯೇಕ ಕಾಯ್ದೆ. ಫ್ಯಾಕ್ಟರಿ ಕಾಯ್ದೆಯ ಅನ್ವಯ ಮಿತಿಯನ್ನು 20 ಕಾರ್ಮಿಕರಿಂದ 50ಕ್ಕೇ ಏರಿಸಲಾಗಿದೆ. ಈ ಕ್ರಮಗಳ ಮೂಲಕ 80ಶೇ. ಕಾರ್ಮಿಕರಿಗೆ ಕಾರ್ಮಿಕ ಕಾನೂನುಗಳು ಅನ್ವಯವೇ ಆಗದಂತೆ ಮಾಡಲಾಗಿದೆ.
* 300 ಕಾರ್ಮಿಕರ ವರೆಗೆ ದುಡಿಸಿಕೊಳ್ಳುತ್ತಿರುವ ಕಂಪನಿಗಳು ರಿಟ್ರೆಂಚ್‌ಮೆಂಟ್, ಲೇ ಆಫ್ ಮತ್ತು ಕ್ಲೋಶರ್‌ಗಳಿಗೆ ಸರಕಾರದ ಅನುಮತಿಯನ್ನು ಪಡೆಯಬೇಕಾಗಿಲ್ಲ ಎಂಬ ತಿದ್ದುಪಡಿ.
* 44 ಕೇಂದ್ರೀಯ ಕಾನೂನುಗಳನ್ನು ಐದು ಸಂಹಿತೆಗಳಾಗಿ ಕ್ರೋಡೀಕರಿಸಿ ಕಾರ್ಪೊರೇಟ್‌ಗಳಿಗೆ ಸುಗಮಗೊಳಿಸುವ ‘ಭವ್ಯ ಚಿಂತನೆ’!
* ಕಾರ್ಮಿಕ ಸಂಘಗಳ ನೋಂದಾವಣೆಗೆ ಸದಸ್ಯರ ಕನಿಷ್ಟ ಮಿತಿ 15% ಕಾರ್ಮಿಕರು ಎಂದಿದ್ದನ್ನು 30%ಕ್ಕೆ ಏರಿಸಿ ಸಂಘ ರಚನೆಯನ್ನು ಇನ್ನಷ್ಟು ದುರ್ಗಮಗೊಳಿಸಲಾಗಿದೆ.
* ಜತೆಗೆ ಖಾಸಗೀಕರಣ, ಕಾಂಟ್ರಾಕ್ಟೀಕರಣ ಮತ್ತು ಕ್ಯಾಶುವಲೀಕರಣ ನಿಲುವುಗಳನ್ನು ಆಕ್ರಮಣಕಾರೀ ರೀತಿಯಲ್ಲಿ ತೀವ್ರಗೊಳಿಸಲಾಗಿದೆ. ಅಲ್ಲದೆ ಮೋದಿ ಸರಕಾರಕ್ಕೆ ಇದರಲ್ಲಿ ಸಲಹೆ, ನೆರವು ನೀಡಲು ರಿಲಯಂಸ್ ಮ್ಯುಚುವಲ್ ಫಂಡ್ ನೇಮಕ!
* ಹೆಚ್ಚುತ್ತಿರುವ ಕಾಂಟ್ರಾಕ್ಟೀಕರಣ ಮತ್ತು ಕ್ಯಾಶುವಲೀಕರಣದಿಮದಾಗಿ 90% ಕಾರ್ಮಿಕರು ಯಾವುದೇ ಸಾಮಾಜಿಕ ಭದ್ರತೆಯಿಂದ ವಂಚಿತರು.
* ಕಾರ್ಮಿಕರ ಭವಿಷ್ಯನಿಧಿಯನ್ನೂ ‘ಉತ್ತಮ ಪ್ರತಿಫಲ’ದ ಹೆಸರಿನಲ್ಲಿ ಶೇರು ಮಾರುಕಟ್ಟೆಗೆ ಒದಗಿಸಿ ಅಪಾಯಕ್ಕೆ ಸಿಲುಕಿಸುವ ಪ್ರಯತ್ನ

ಸಹಜವಾಗಿ ಇಂತಹ ಬಹುಮುಖೀ ದಾಳಿಗಳಿಂದಾಗಿ ಈ ಮೂರು ವರ್ಷಗಳಲ್ಲಿ ನಡೆದ ಎರಡು ರಾಷ್ಟ್ರವ್ಯಾಪಿ ಮುಷ್ಕರಗಳಲ್ಲಿ 15ರಿಂದ 18 ಕೋಟಿ ಕಾರ್ಮಿಕರು ಭಾಗವಹಿಸಿದ್ದಾರೆ. ಅಲ್ಲದೆ ಕರ್ನಾಟಕದ ಗಾರ್ಮೆಂಟ್ ಕಾರ್ಮಿಕರ ಭಾರೀ ಪ್ರತಿಭಟನೆ ಸೇರಿದಂತೆ ದೇಶಾದ್ಯಂತ ನೂರಾರು ಮುಷ್ಕರಗಳು ನಡೆದಿವೆ.

ಕಾರ್ಪೊರೇಟ್ ತಿಜೋರಿ ತುಂಬಲು ರೈತರ ಲೂಟಿಯ ಮೂರು ವರ್ಷಗಳು

ರೈತರಿಗೆ ಮತ್ತು ಕೃಷಿಕೂಲಿಕಾರರಿಗೆ ‘ಅಚ್ಛೇ ದಿನ್’ ಆಶ್ವಾಸನೆಗಳು– ರೈತರ ಆತ್ಮಹತ್ಯೆಗಳನ್ನು ಕೊನೆಗೊಳಿಸುವುದು, ಕೃಷಿ ಉತ್ಪನ್ನಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸುಗಳಂತೆ ಉತ್ತಮ ಪ್ರತಿಫಲದಾಯಕ ಬೆಲೆಗಳು, ಎಲ್ಲ ಗದ್ದೆಗಳಿಗೆ ನೀರಾವರಿ, ಪರಿಣಾಮಕಾರಿ ವಿಮಾ ರಕ್ಷಣೆ, ಪೆನ್ಶನ್‌ಗಳು, ವೈಜ್ಞಾನಿಕ ಭೂಸ್ವಾಧೀನ, ಕೃಷಿಯಲ್ಲಿ ಹೆಚ್ಚಿನ ಹೂಡಿಕೆ, ಮನರೇಗದಲ್ಲಿ ಹೆಚ್ಚಿನ ಉದ್ಯೋಗ ಮತ್ತು ಹೆಚ್ಚಿನ ಕೂಲಿ ಇತ್ಯಾದಿ ಇತ್ಯಾದಿ.

ಆದರೆ ಮೂರು ವರ್ಷಗಳಲ್ಲಿ ಈಡೇರಿಸಿದ್ದು?

* ರೈತರ ಆತ್ಮಹತ್ಯೆಗಳು ನಿಲ್ಲದೆ ಸಾಗಿವೆ. ಇದರಲ್ಲಿ ಬಿಜೆಪಿ ಆಳ್ವಿಕೆಯ ಮಹಾರಾಷ್ಟ್ರದ್ದೇ ಮೇಲುಗೈ. ಒಟ್ಟು ರೈತ ಆತ್ಮಹತ್ಯೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಆಳ್ವಿಕೆಯ ರಾಜ್ಯಗಳಲ್ಲೇ 61.28%! ಅದರೂ ಏನೂ ಆಗಿಲ್ಲ ಎಂಬಂತಹ ನಿಲುವು.
* ರೈತರ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿನಷ್ಟು ಕನಿಷ್ಟ ಬೆಂಬಲ ಬೆಲೆ ಕೊಡಬೇಕೆನ್ನುವ ಸ್ವಾಮಿನಾಥನ್ ಆಯೋಗದ ಶಿಫಾರಸನ್ನು ಜಾರಿ ಮಾಡುವ ಆಶ್ವಾಸನೆ ನೀಡಿದ ಪಕ್ಷದ ಸರಕಾರವೇ ಇದನ್ನು ಕೊಡಲು ಸಾಧ್ಯವಿಲ್ಲ ಎಂದು ಸುಪ್ರಿಂ ಕೋರ್ಟಿನಲ್ಲೇ ಅಫಿಡವಿಟ್ ಸಲ್ಲಿಸಿದೆ! ಸಾಲದ್ದಕ್ಕೆ ತಾನು ನಿರ್ಧರಿಸಿದ ಕನಿಷ್ಟ ಬೆಂಬಲ ಬೆಲೆಗಿಂತ ಹೆಚ್ಚು ಬೆಂಬಲ ಬೆಲೆ ನೀಡಬಾರದೆಂದು ರಾಜ್ಯ ಸರಕಾರಗಳಿಗೆ ಬೆದರಿಕೆ ಹಾಕಿದೆ! ಏಕೆಂದರೆ ಇದು ‘ಮಾರುಕಟ್ಟೆಯನ್ನು ವಿರೂಪ’ಗೊಳಿಸುತ್ತದೆಯಂತೆ! ಇದರಿಂದ ರೈತರು ಹತಾಶರಾಗಿ ಕಡಿಮೆ ಬೆಲೆಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಬೇಕಾದ ಪರಿಸ್ಥಿತಿ.
* **ರೈತರು ಕಡಿಮೆ ಬೆಲೆ ಪಡೆಯುತ್ತಿರುವಾಗಲೇ ಅದಾನಿ ವಿಲ್ಮರ್‌ನಂತಹ ಕೃಷಿ ಕಾರ್ಪೊರೇಟ್‌ಗಳಿಗೆ ಸೂಪರ್ ಲಾಭಗಳು!**
* ಕೇಂದ್ರದಲ್ಲಿ ಕರಾಳ ಭೂಸ್ವಾಧೀನ ಮಸೂದೆಯನ್ನು ಭಾರೀ ಪ್ರತಿಭಟನೆಗಳಿಂದಾಗಿ ಹಿಂತೆಗೆದುಕೊಳ್ಳಬೇಕಾಗಿ ಬಂದರೂ ಕೃಷಿಯನ್ನು ಕಾರ್ಪೊರೇಟ್‌ಗಳು ವಹಿಸಿಕೊಳ್ಳಲು ಅನುಕೂಲವಾಗುವಂತೆ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿ ಭೂಮಿ ಕಾಯ್ದೆಗಳನ್ನು ತಿದ್ದುಪಡಿ ಮಾಡಲು ನೇತೃತ್ವ!
* ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಹಣ ನೀಡಿಕೆಯನ್ನು ಕಡಿತಗೊಳಿಸಿ ಅದನ್ನು ಕಳಚಿ ಹಾಕುವ ವ್ಯವಸ್ಥಿತ ಪ್ರಯತ್ನ.

ಈ ವರ್ಷ ಬೇಕಾಗಿದ್ದದ್ದು 80,000 ಕೋಟಿರೂ. ಕೊಟ್ಟದ್ದು ಕೇವಲ 48,000 ಕೋಟಿ ರೂ. ಅದೂ ಸುಪ್ರಿಂ ಕೋರ್ಟ್ ಮಧ್ಯಪ್ರವೇಶದ ನಂತರ. 20,000 ಕೋಟಿ ರೂ.ಗಳಷ್ಟು ಕೂಲಿಗಳನ್ನು ನಿಗದಿತ 15 ದಿನಗಳೊಳಗೆ ಕೊಟ್ಟಿಲ್ಲ. ಕಳೆದ ವರ್ಷದ 2000 ಕೋಟಿ ರೂ.ಗೂ ಹೆಚ್ಚಿನ ಕೂಲಿ ಹಣವನ್ನು ಬಡ ಗ್ರಾಮೀಣ ಕೆಲಸಗಾರರಿಗೆ ಇನ್ನೂ ಕೊಟ್ಟಿಲ್ಲ.

* ಪ್ರಧಾನ ಮಂತ್ರಿ ಬೆಳೆ ವಿಮಾಯೋಜನೆ ಈಗ 40%ಕ್ಕೂ ಹೆಚ್ಚು ರೈತರಿಗೆ ರಕ್ಷಣೆ ನೀಡುತ್ತಿದೆ ಎಂದು ಹೇಳಿಕೊಂಡರೂ ಇದಕ್ಕೆ ಕೊಟ್ಟಿರುವ ಹಣವನ್ನು 13,240 ಕೀಟು ರೂ.ಗಳಿಂದ 9000 ಕೋಟಿ ರೂ.ಗಳಿಗೆ ಇಳಿಸಲಾಗಿದೆ. ರೈತರಿಂದ ಈ ವಿಮಾರಕ್ಷಣೆಗೆಂದು ಸಂಗ್ರಹಿಸಿದ 21,000 ಕೋಟಿ ರೂ.ಗಳು ಬಹುರಾಷ್ಟ್ರೀಯ ವಿಮಾಕಂಪನಿಗಳ ಜೇಬು ಸೇರಿದೆ. ಕಳೆದ ಮುಂಗಾರು ಅವಧಿಯಲ್ಲಿ ನೊಂದಾಯಿಸಲ್ಪಟ್ಟ ಒಟ್ಟು ದಾವೆ ಕೇವಲ ರೂ.4270.55 ಕೋಟಿ, ಅದರಲ್ಲಿ ಈ ವಿಮಾಕಂಪನಿಗಳು ತೆತ್ತದ್ದು ಕೇವಲ ರೂ.714.14 ಕೋಟಿ.



ವ್ಯಂಗ್ಯಚಿತ್ರ ಕೀರ್ತಿಶ್, ಬಾಮುಲಹಿಜ.ಕಾಂ

* ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸುವ ವಚನ ಮರೆತೇ ಹೋಗಿದೆ. ಬದಲು ನೋಟು ರದ್ಧತಿ ಮೂಲಕ ಸಹಕಾರಿ ಬ್ಯಾಂಕ್ ವಲಯದ ಕೈಕಟ್ಟಿ ಹಾಕಿ ಗ್ರಾಮಿಣ ಸಾಲದ ಈ ಅತ್ಯಂತ ವ್ಯಾಪಕ ಜಾಲವನ್ನು ಕೂಡ ಕುಂಠಿತಗೊಳಿಸಲಾಯಿತು.
* ತೆಲಂಗಾಣದ ರೈತರು ಉತ್ಪಾದಿಸಿದ ಮೆಣಸಿಗೆ ಬೆಲೆ ಕ್ವಿಂಟಾಲಿಗೆ 13,000–15,000 ರೂ.ಇದ್ದದ್ದು 1500–5000ರೂ.ಗೆ ಕುಸಿದಿದೆ. ಇವರಿಗೆ ಬೆಳೆ ವಿಮಾ ಯೋಜನೆಯಾಗಲೀ, ಬೇರೆ ಯಾವ ಯೋಜನೆಯಾಗಲಿ ನೆರವು ಒದಗಿಸಿಲ್ಲ. ರಬ್ಬರ್, ಮಸಾಲೆ ಸಾಮಗ್ರಿಗಳು ಮತ್ತು ಇತರ ಹಣದ ಬೆಳೆಗಳ ಬೆಲೆಗಳೂ ಕುಸಿದು ಇದೇ ಪರಿಸ್ಥಿತಿ ಎದುರಿಸುತ್ತಿರುವ ರೈತರಿಗೂ ಯಾವುದೇ ನೆರವಿಲ್ಲ.
* ಪ್ರಧಾನ ಮಂತ್ರಿ ಕೃಷಿ ನೀರಾವರಿ ಯೋಜನೆಯ ಬಗ್ಗೆ ಅಬ್ಬರದ ಮಾತುಗಳು ಕೇಳಬಂದವು. ಈ ವರ್ಷದ ಬಜೆಟಿನಲ್ಲಿ 5000 ಕೋಟಿ ರೂ.ಗಳನ್ನು ಇದಕ್ಕೆ ನಮೂದಿಸಲಾಗಿದೆ, ದೀರ್ಘಾವಧಿ ನೀರಾವರಿ ನಿಧಿಯನ್ನು 20 ಸಾವಿರ ರೂ.ನಿಂದ 40 ಸಾವಿರ ರೂ.ಗೆ ಏರಿಸಲಾಗಿದೆ ಎನ್ನಲಾಗಿದೆ. ಆದರೆ ಇದರಲ್ಲಿ ಹೂಡಿಕೆಯಾದ್ದೆಷ್ಟು, ನೀರಾವರಿ ಮೂಲರಚನೆ ನಿರ್ಮಾಣವಾದ್ದೆಷ್ಟು ಎಂದು ಹಣಕಾಸು ಮಂತ್ರಿಗಳು ಹೇಳಿಲ್ಲ. ದಕ್ಷಿಣ ಭಾರತದ ಈ ವರ್ಷದ ಅಭೂತಪೂರ್ವ ನೀರಿನ ಕೊರತೆಯನ್ನು ಸರಕಾರ ಎದುರಿಸಲಾರದೆ ಹೋಗಿರುವುದು ಇವೆಲ್ಲ ಪೊಳ್ಳು ಮಾತುಗಳಷ್ಟೇ ಎಂದಲ್ಲದೆ ಬೇರೇನನ್ನು ಸೂಚಿಸುತ್ತದೆ? ತಮಿಳುನಾಡಿನ ರೈತರು ರಾಷ್ಟ್ರದ ರಾಜಧಾನಿಯಲ್ಲಿ ತಮ್ಮ ದಾರುಣ ಪರಿಸ್ತಿತಿಯನ್ನು ತೋಡಿಕೊಳ್ಳುತ್ತಿದ್ದಾಗ ಈ ‘ಅಚ್ಛೇ ದಿನ್’ ಸರಕಾರ ಅವರ ಬಗ್ಗೆ ತೋರಿದ ವರ್ತನೆಯೇನು?

ಕೋಮುವಾದಿ ಧ್ರುವೀಕರಣದ ಮೂಲಕ ಜನಗಳ ಗಮನವನ್ನು ಬೇ- ರೆಡೆಗೆ ತಿರುಗಿಸುವ ಹುನ್ನಾರಗಳನ್ನೂ ಮೀರಿ ನಿಂತು ರೈತರು ದೇಶಾದ್ಯಂತ ಈ ವಿಶ್ವಾಸಘಾತಗಳ ವಿರುದ್ಧ ಅಣಿನೆರೆಯುತ್ತಿದ್ದಾರೆ. ದಲಿತರು, ಆದಿವಾಸಿಗಳು ನೀರು, ಕಾಡು, ಭೂಮಿ ಮತ್ತು ಖನಿಜ ಸಂಪತ್ತಿನ ಲೂಟಿಯ ಮೊದಾನಿ ಮಾದರಿಯ ಲೂಟಿಯ ವಿರುದ್ಧ ಎದ್ದು ನಿಲ್ಲುತ್ತಿದ್ದಾರೆ.

ಮೋದಿ ಸರಕಾರದ ಜನ–ವಿರೋಧಿ ಧೋರಣೆಗಳ ವಿರುದ್ಧ ಪ್ರಚಾರಾಂದೋಲನ

ಕಳೆದ ತಿಂಗಳು ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಜನಗಳ ಮೇಲೆ ಅಪಾರ ಯಾತನೆಗಳನ್ನು ಹೇರುತ್ತಿರುವ ಸರಕಾರದ ಇತ್ತೀಚಿನ ನಿರ್ಧಾರಗಳ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳ ಒಂದು ವಾರದ ಕಾರ್ಯಕ್ರಮಗಳನ್ನು ಸಂಘಟಿಸಲು ಕರೆ ನೀಡಿದೆ. ಕರ್ನಾಟಕದಲ್ಲಿ ಇದರ ಭಾಗವಾಗಿ ಮೇ 25 ರಂದು ರಾಜ್ಯವ್ಯಾಪಿ ಪ್ರತಿಭಟನೆ ನಡೆಯಲಿದೆ.

ಈ ಪ್ರಚಾರಾಂದೋಲನದ ಎರಡು ಮುಖ್ಯ ಬೇಡಿಕೆಗಳ ಚಿತ್ರ ಇಲ್ಲಿದೆ:



ಆಹಾರ ಭದ್ರತೆಯ ಕಾಯ್ದೆಯನ್ನು ಇನ್ನೂ ಪಾಲಿಸದ ಸರಕಾರ

* 2013ರಲ್ಲಿ ಆಹಾರ ಭದ್ರತಾ ಕಾಯ್ದೆಯನ್ನು ತರಲಾಯಿತು. ಇದು ಆಹಾರದ ಲಭ್ಯತೆ ಪ್ರತಿಯೊಬ್ಬ ನಾಗರಿಕರ ಹಕ್ಕು ಎಂದು ಮಾನ್ಯ ಮಾಡಿದೆ. ಆದರೆ ಇದರ ಜಾರಿಯಲ್ಲಿ ಹಲವಾರು ಸಮಸ್ಯೆಗಳು ಉಂಟಾಗಿದ್ದವು

* ಮೋದಿ ಸರಕಾರಕ್ಕಂತೂ ಈ ಕಾಯ್ದೆಯ ಜಾರಿಯ ಬಗ್ಗೆಯೇ ಬದ್ಧತೆಯಿಲ್ಲ. ಅದು ಯೋಜನಾ ಆಯೋಗವನ್ನು ರದ್ದು ಮಾಡಿ ರಚಿಸಿದ 'ನೀತಿ ಆಯೋಗ' ಬಹಿರಾಂಗವಾಗಿಯೇ ಆಹಾರ ಸಬ್ಸಿಡಿಯನ್ನು ಕಡಿತ ಮಾಡಬೇಕು ಎಂದು ಸಲಹೆ ಮಾಡಿದೆ.

* ಈ ಕಾಯ್ದೆಯಲ್ಲಿ ಆರಂಭದಲ್ಲೇ ಇದ್ದ ಒಂದು ದೌರ್ಬಲ್ಯವೆಂದರೆ ಇದು ದೇಶದ ಜನರನ್ನು ಎರಡು ವಿಭಾಗಗಳಾಗಿ ಮಾಡುತ್ತದೆ– ಆದ್ಯತೆಯ ವಿಭಾಗಗಳು, ಸಾಮಾನ್ಯ ವಿಭಾಗಗಳು ಎಂದು. ಈ ಮೂರು ವರ್ಷಗಳಲ್ಲಿ ಈ ಸಮಸ್ಯೆ ಉಲ್ಬಣಗೊಂಡಿದ್ದರೆ, ಜತೆಗೆ ಹೊಸ 'ಸಮಸ್ಯೆಗಳನ್ನೂ ಸೇರಿಸಲಾಗಿದೆ.

ಹಳೆಯ ಮತ್ತು ಹೊಸ ಸಮಸ್ಯೆಗಳು

* ಆದ್ಯತೆಯ ವಿಭಾಗ ಮತ್ತು ಸಾಮಾನ್ಯ ವಿಭಾಗ ಎಂದು ವಿಭಜಿಸಿರುವಾಗ ಆದ್ಯತೆಯ ವಿಭಾಗಗಳನ್ನು ಗುರುತಿಸುವುದು ಹೇಗೆ –ಇದು ಪ್ರಮುಖ ಸಮಸ್ಯೆ. ಇದರಿಂದಾಗಿ ಎಡ ಆಳ್ವಿಕೆಯ ರಾಜ್ಯಗಳಲ್ಲಿ ಬಿಟ್ಟರೆ, ಉಳಿದ ರಾಜ್ಯಗಳಲ್ಲಿ ಬಹಳಷ್ಟು ವಿಭಾಗಗಳಿಗೆ ಈ ಹಕ್ಕು ಲಭ್ಯವಾಗದಂತಾಗಿದೆ. ಕರ್ನಾಟಕ ವ, ಮಹಾರಾಷ್ಟ್ರ, ಹಿಮಾಚಲ ಪ್ರದೇಶದ ಮುಂತಾದವುಗಳಲ್ಲಿ ಅಂತ್ಯೋದಯ, ಬಿಪಿಎಲ್ ಮುಂತಾದ ಸ್ಕೀಮುಗಳು ಈ ಮೊದಲೇ ಆದ್ಯತೆಯವು ಎಂದು ಎನಿಸಿಕೊಂಡಿದ್ದವು. ಅಂತಹ ಕಡೆಗಳಲ್ಲಿ ಈ ಕಾಯ್ದೆ ಬೇರೆ ವಿಭಾಗಗಳಿಗೆ ಯಾವ ಹಕ್ಕನ್ನೂ ಕೊಡದೆ ಕೇವಲ ಹೆಸರು ಬದಲಾವಣೆಯಷ್ಟೇ ಆಗಿದೆ.

* ಇತರ ರಾಜ್ಯಗಳಲ್ಲಿ ಆದ್ಯತೆಯವು ಮತ್ತು ಅಲ್ಲದವು ಎಂಬ ಮರುವರ್ಗೀಕರಣಕ್ಕೇ ಮೂರು ವರ್ಷಗಳು ಹಿಡಿದಿವೆ. ಆದ್ದರಿಂದ ಜಾ–ರಿಯ ಪ್ರಶ್ನೆ ಇತ್ತೀಚೆಗಷ್ಟೇ ಬಂದಿದೆ. ಇದರಲ್ಲಿ 'ಗುಜರಾತ್ ಮಾದರಿ'ಯೂ ಒಂದು!

* ಮೋದಿ ಸರಕಾರ ಸೇರಿಸಿದ ಹೊಸ ಸಮಸ್ಯೆ, ಅತ್ಯಂತ ವಿನಾಶಕಾರಿ ಅಂಶ ಎಂದರೆ ಇದನ್ನು ಆಧಾರ್‌ನೊಂದಿಗೆ ತಳುಕು ಹಾಕಿದ್ದು, ಈ ಮೂಲಕ, ಮುಖ್ಯವಾಗಿ ಗ್ರಾಮಾಂತರಗಳಲ್ಲಿ ಆಧಾರ್ ನಿರ್ವಹಣೆಗೆ ಮಾರಕವಾದ ಅಂತರ್ಜಾಲ ಮತ್ತಿತರ ಸಂಬಂಧಪಟ್ಟ ಸಮಸ್ಯೆಗಳಿಂದಾಗಿ ಇನ್ನೂ ಹಲವಾರು ಬಡವಿಭಾಗಗಳಿಗೆ, ಈ ಕಾಯ್ದೆಯ ಸಂರಕ್ಷಣೆ ಅಗತ್ಯವಾಗಿರುವ ಇನ್ನೂ ಸುಮಾರು 30% ದಷ್ಟು ಮಂದಿಗೆ ಈ ಹಕ್ಕನ್ನು ನಿರಾಕರಿಸಲಾಗಿದೆ.

* ಬಿಪಿಎಲ್ ಅಲ್ಲದ ಅಂದರೆ ಎಪಿಎಲ್ ವಿಭಾಗಗಳಿಗೆ ಕೋಟಾಗಳನ್ನು ಬೇಕಾಬಿಟ್ಟಿಯಾಗಿ ಕಡಿತ ಮಾಡಿದರೆ, ಈ ಹಿಂದೆ ಸಬ್ಸಿಡಿ ದರಗಳಲ್ಲಿ 35 ಕೆಜಿ ಧಾನ್ಯಗಳ ಅರ್ಹತೆಯಿದ್ದ ಕುಟುಂಬಗಳಿಗೆ ಈಗ ಅಷ್ಟೂ ಸಿಗದಂತಾಗಿದೆ. ಜತೆಗೆ ಸಕ್ಕರೆ, ಸೀಮೆ ಎಣ್ಣೆ ಪೂರೈಕೆಯನ್ನೂ ನಿಲ್ಲಿಸಲಾಗಿದೆ.

* ಅಂತ್ಯೋದಯ ಸ್ಕೀಮನ್ನು ನಿಲ್ಲಿಸಿಯೇ ಬಿಡಲಾಗಿದೆ. ಈ ಮೂಲಕ ಕೃಷಿ ಬಿಕ್ಕಟ್ಟಿನಿಂದ ಸಂಕಟಪಡುತ್ತಿರುವ ಗ್ರಾಮೀಣ ಕುಟುಂಬಗಳಿಗೆ ಇದ್ದ ಏಕೈಕ ಆಸರೆಯೂ ಇಲ್ಲದಂತಾಗಿದೆ.

* ಈಗ ಮೋದಿ ಸರಕಾರ ಆಹಾರ ಧಾನ್ಯಗಳ ಪೂರೈಕೆಯ ಬದಲು ನೇರ ನಗದು ವರ್ಗಾವಣೆ(ಡಿಬಿಟಿ)ಯ ಕ್ರಮವನ್ನು ಹೇರುವ ತರಾತುರಿಯಲ್ಲಿದೆ. ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇದನ್ನು ಪರೀಕ್ಷಿಸಲಾಗಿದ್ದು, ಅಲ್ಲಿ ವಿಫಲವಾಗಿದ್ದರೂ ಮೋದಿ ಸರಕಾರದ ಡಿಬಿಟಿ ಗೀಳು ಹೋಗಿಲ್ಲ.

* ಆಹಾರ ಭದ್ರತಾ ಕಾಯ್ದೆಯ ಹಲವಾರು ಅಂಶಗಳನ್ನು ಜಾರಿಗೊಳಿಸಿಯೇ ಇಲ್ಲ–

ಆಹಾರಧಾನ್ಯಗಳನ್ನು ಲಭ್ಯಗೊಳಿಸದಿದ್ದರೆ ಆಹಾರ ಭದ್ರತಾ ಭತ್ಯೆ ನೀಡಬೇಕೆಂದಿದೆ, ಅದನ್ನು ಕೊಡಲಾಗುತ್ತಿದೆಯೇ ಎಂಬ ಬಗ್ಗೆ ಮಾಹಿತಿಗಳೇ ಇಲ್ಲ;

ಮನೆಬಾಗಿಲಗೆ ಆಹಾರಧಾನ್ಯಗಳ ಪೂರೈಕೆ ನಡೆಸಬೇಕೆಂದಿದೆ–ಈ ಬಗ್ಗೆಯೂ ಮಾಹಿತಿಗಳಿಲ್ಲ.

ಕುಂದು ಕೊರತೆ ನಿವಾರಣೆ ವ್ಯವಸ್ಥೆ ಕಲ್ಪಿಸಬೇಕೆಂದಿದೆ– ಅದನ್ನು ರೂಪಿಸಿಲ್ಲ.

ಗರ್ಭಿಣಿಯರಿಗೆ ಈ ಕಾಯ್ದೆಯ ಅಡಿಯಲ್ಲಿ 5000ರೂ. ಹೆರಿಗೆ ಸೌಲಭ್ಯ ಕೊಡಬೇಕು. ಅದರ ಪ್ರಸ್ತಾಪವನ್ನೇ ಈ ಸರಕಾರ ಮಾಡುತ್ತಿಲ್ಲ.

* ಆಹಾರಧಾನ್ಯಗಳ ನೀಡಿಕೆಯನ್ನು ಕಡಿತ ಮಾಡಿದ್ದರಿಂದ ಸರಕಾರೀ ಗೋದಾಮುಗಳಲ್ಲಿ ದಾಸ್ತಾನು ಹೆಚ್ಚಿದೆ. ಇದರಿಂದ ರೈತರಿಂದ ಧಾನ್ಯ ಖರೀದಿಯಲ್ಲಿ ಕಡಿತ ಮಾಡಿ ಅವರ ಸಂಕಟ ಹೆಚ್ಚಿಸಿರುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಹೆಚ್ಚಿನ ದಾಸ್ತಾನು ಸಂಗ್ರಹದ ಖರ್ಚಿನಲ್ಲೂ ಹೆಚ್ಚಳ.

ದೇಶದ ಜನರಿಗೆ ಆಹಾರ ಭದ್ರತೆಯ ಹಕ್ಕು ನಿಜವಾಗಿಯೂ ಲಭ್ಯವಾಗಬೇಕಾದರೆ

*** ಒಂದು ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ತರಬೇಕು, ಅದು ಕಾರ್ಯಸಾಧ್ಯವೂ ಆಗಿದೆ.**

*** ಈ ವ್ಯವಸ್ಥೆಯ ಅಡಿಯಲ್ಲಿ ಸಕ್ಕರೆ, ಸೀಮೆ ಎಣ್ಣೆ ಸೇರಿದಂತೆ ಆವಶ್ಯಕ ಸರಕುಗಳನ್ನು ಸಬ್ಸಿಡಿ ದರಗಳಲ್ಲಿ ಪೂರೈಸಬೇಕು.**


*** ಹೆರಿಗೆ ಸೌಲಭ್ಯ ಸೇರಿದಂತೆ ಆಹಾರ ಭದ್ರತಾ ಕಾಯ್ದೆಯ ಎಲ್ಲ ಅಂಶಗಳನ್ನು ಜಾರಿಗೆ ತರಬೇಕು.**

ಇದು ಸಿಪಿಐ(ಎಂ)ನ ಆಗ್ರಹ.

10ಕೋಟಿ ಉದ್ಯೋಗ ಕೇವಲ ಚುನಾವಣಾ ಲೊಳಲೊಟ್ಟೆ!

ವರ್ಷಕ್ಕೆ 2 ಕೋಟಿಯಂತೆ ಮುಂದಿನ ಚುನಾವಣೆಯ ವೇಳೆಗೆ 10 ಕೋಟಿ ಉದ್ಯೋಗಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು– ಮೋದಿಯವರ ಈ ಭರವಸೆ ಕೇವಲ 'ಚುನಾವೀ ಜುಮ್ಲಾ' ಅಂದರೆ ಚುನಾವಣಾ ಪೊಳ್ಳು ಮಾತು ಎಂಬುದು ಮೂರು ವರ್ಷ ಕಳೆಯುವ ವೇಳೆಗೆ ದೃಢಪಟ್ಟಿದೆ.





* ಎಂಟು ಪ್ರಮುಖ ಕೃಷಿಯೇತರ ಉತ್ಪಾದನಾ ವಲಯಗಳಲ್ಲಿ ಮೋದಿ ಸರಕಾರದ ಎರಡನೇ ವರ್ಷದ ಅಂತ್ಯದಲ್ಲೂ ಇದ್ದದ್ದು 2.05 ಕೋಟಿ ಉದ್ಯೋಗಗಳಷ್ಟೇ.

ಈ ಒಂದು ವರ್ಷದಲ್ಲಿ ಅದಕ್ಕೆ ಸೇರಿಸಿದ್ದು ಕೇವಲ 2.3ಲಕ್ಷ. ಇದರಲ್ಲೂ 1.1ಲಕ್ಷದಷ್ಟು ಶಿಕ್ಷಣ ಮತ್ತು ಆರೋಗ್ಯ ಈ ಎರಡು ಕ್ಷೇತ್ರಗಳಿಂದಲೇ.

* ಗ್ರಾಮೀಣ ಉದ್ಯೋಗಾಕಾಂಕ್ಷಿಗಳ ಪಾಡು ಇನ್ನೂ ಶೋಚನೀಯ. ಮಹಾತ್ಮ ಗಾಂಧಿ ಗ್ರಾಮಿಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಉದ್ಯೋಗಗಳ ಬೇಡಿಕೆ ಇದಕ್ಕೆ ಒಂದು ಪ್ರಮುಖ ನಿದರ್ಶನ

2014–15ರಲ್ಲಿ 4.85 ಕೋಟಿ ಕುಟುಂಬಗಳು ಉದ್ಯೋಗ ಕೇಳಿದವು. 2015–16ರಲ್ಲಿ 5.35 ಕೋಟಿಗೇರಿತು.

2016–17ರಲ್ಲಿ 5.69 ಕೋಟಿಗೇರಿತು.

2017–18ರ ಒಂದೇ ತಿಂಗಳಲ್ಲಿ 1.38 ಕೋಟಿ ಕುಟುಂಬಗಳು ಕೇಳಿವೆ.

ಇದು ಅತಿ ಕಡಿಮೆ ಕೂಲಿ ಕೊಟ್ಟು ವರ್ಷಕ್ಕೆ ಕೇವಲ 100 ದಿನಗಳ ಕೆಲಸ ಕೊಡುವ ಸ್ಕೀಮ್. ಇದಕ್ಕೂ ಇಷ್ಟೊಂದು ಬೇಡಿಕೆಯಿದೆ! ಅಷ್ಟೇಅಲ್ಲ, ಇಷ್ಟಾದರೂ ಕೆಲಸ ಸಿಗಲಿ ಎಂದು ಅರ್ಜಿ ಹಾಕಿರುವ ಕುಟುಂಬಗಳಲ್ಲಿ 10–11ಶೇ. ಕುಟುಂಬಗಳಿಗೆ, 2016–17ರಲ್ಲಿ 58ಲಕ್ಷ ಕುಟುಂಬಗಳಿಗೆ ಅದೂ ಸಿಕ್ಕಿಲ್ಲ!

ನಿರುದ್ಯೋಗದಲ್ಲಿ ಎಲ್ಲರಿಗಿಂತ ಮುಂದೆ!

* ಪ್ರತಿವರ್ಷ 1.3 ಕೋಟಿ ಹೊಸ ಯುವಜನ ಉದ್ಯೋಗ ಅರಸಿ ಬರುತ್ತಾರೆ. ಅಂದರೆ ನಿರುದ್ಯೋಗಿಗಳ ಸಾಲಿಗೆ ಮತ್ತೆ 90ಲಕ್ಷಕ್ಕೂ ಹೆಚ್ಚು ಯುವಜನರ ಸೇರ್ಪಡೆ. 15–29ವಯೋಗುಂಪಿನ ಯುವಜನರಲ್ಲಿ 30% ಮಂದಿ ಯಾವುದೇ ಉದ್ಯೋಗ, ತರಬೇತಿ, ಶಿಕ್ಷಣದಿಂದ ಹೊರಗುಳಿದಿದ್ದಾರೆ ಎಂದು ಮೋದಿಯವರ ಆರ್ಥಿಕ ಧೋರಣೆಗಳನ್ನು ಹಾಡಿ ಹೊಗಳುವವರೇ ಲೆಕ್ಕ ಹಾಕಿ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ನಿರುದ್ಯೋಗದದಿಂದ ಆತಂಕಿತರಾಗಿರುವ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲೂ ಇದು ಇನ್ನೂ 14.6%, ಚೀಬಾದಲ್ಲಿ 11.2%. ಅಂದರೆ ನಿರುದ್ಯೋಗದಲ್ಲಿ ಭಾರತ ಎಲ್ಲರಿಗಿಂತಲೂ ಮುಂದೆ!

ಏಕೆ ಲೊಳಲೊಟ್ಟೆ?

* ಮೇಕ್ ಇನ್ ಇಂಡಿಯ', ಸ್ಕಿಲ್ ಇಂಡಿಯಾ. ಸ್ಟಾರ್ಟ್‌ಅಪ್ ಇಂಡಿಯಾ, ಜತೆಗೆ ಎಫ್‌ಡಿಐಗೆ ಭಾರೀ ಸ್ವಾಗತ– ಎಲ್ಲವೂ ಪೊಳ್ಳು ಮಾತುಗಳ ಮಂಟಪವೇ!

  ಈಗ ಟ್ರಂಪ್ ಧೋರಣೆಗಳಿಂದಾಗಿ ಐಟಿ/ಬಿಪಿಒ ವಲಯದ ಉದ್ಯೋಗಗಳೂ 'ಮೇಕ್ ಇನ್ ಅಮೆರಿಕಾ' ಆಗಿ ಬಿಡುತ್ತಿವೆ. 56ಅಂಗುಲ ಎದೆಯವರು ಈ ಬಗ್ಗೆ ತುಟಿಪಿಟಕ್ಕೆನ್ನುತ್ತಿಲ್ಲ.

* ಭಾರತೀಯ ಬಂಡವಾಳಿಗರು(ಉದ್ಯೋಗದಾತರು!) ಮತ್ತು ವಿದೇಶಿ ಬಂಡವಾಳದಾರರಿಗೆ ಸರಕಾರ ಎಷ್ಟೇ 'ಉತ್ತೇಜನೆ'ಗಳನ್ನು ಸುರಿದರೂ ಉತ್ಪಾದನಾ ಚಟುವಟಿಕೆಗಳಲ್ಲಿ ತಮ್ಮ ಬಂಡವಾಳ ಹೂಡಲು ಹಿಂದೇಟು ಹಾಕುತ್ತಿದ್ದಾರೆ.

* ಹೊಸ ಹೂಡಕಿಗಳ ಪ್ರಮಾಣ 2015–16ರಲ್ಲಿ 6.1% ಇದ್ದದ್ದು 2016–17ರಲ್ಲಿ 0.6%ಕ್ಕೆ ಇಳಿದಿದೆ.

* ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಜನವರಿ 2015 ರಿಂದ ಜನವರಿ 2017ರ ನಡುವೆ ಕೇವಲ 1% ಹೆಚ್ಚ ದಾಖಲಿಸಿದೆ!

ಈ ವರ್ಷವಾದರೂ ವಚನ ಪಾಲಿಸಬಹುದೇ?

* ಮೇಲೆ ಹೇಳಿದ ಸೂಚ್ಯಂಕಗಳಲ್ಲಿ ಈ ವರ್ಷ ಭಾರೀ ಬದಲಾವಣೆಯ ಯಾವ ಸಂಕೇತಗಳೂ ಇಲ್ಲ.

* ರಿಝರ್ವ್ ಬ್ಯಾಂಕ್‌ನ ಇತ್ತೀಚಿನ ಮಾಹಿತಿಯ ಪ್ರಕಾರ ಕೈಗಾರಿಕೆಗಳಿಗೆ ಬ್ಯಾಂಕ್ ಸಾಲಗಳ ಪ್ರಮಾಣದಲ್ಲಿ ಆಗಿರುವ ಹೆಚ್ಚಳ ಕೇವಲ 0.3%.

ಅಂದರೆ ಹೊಸ ಹೂಡಿಕೆಗಳಿಲ್ಲ, ಹೊಸ ಉದ್ಯೋಗಗಳ ನಿರೀಕ್ಷೆಯನ್ನೂ ಇಟ್ಟುಕೊಳ್ಳುವಂತಿಲ್ಲ!

ಇಂದಿನ ಜಗತ್ತಿನಲ್ಲಿ ಕಾಲ್ ಮಾರ್ಕ್ಸ್

ಈ ವರ್ಷ ಮೇ 5ರಿಂದ ಕಾರ್ಲ್ ಮಾರ್ಕ್ಸ್ ರವರ ಜನ್ಮ ದ್ವಿಶತಮಾನೋತ್ಸವ ಆರಂಭವಾಗಿದೆ. ವಿಶ್ವಾದ್ಯಂತ ಇದನ್ನು ಆಚರಿಸಲಾಗುತ್ತಿದೆ.

ಹತ್ತೊಂಭತ್ತನೇ ಶತಮಾನದ ಒಬ್ಬ ತತ್ವ ಜ್ಞಾನಿ ಮತ್ತ ದಾಸ್ ಕ್ಯಾಪಿಟಲ್ ಎಂಬ ಪುಸ್ತಕವನ್ನು ಕೂಡ ಬರೆದ ಕಾರ್ಲ್ ಮಾರ್ಕ್ಸ್ ಹತ್ತೊಂಬತ್ತನೇ ಶತಮಾನದಲ್ಲಿ ಬದುಕುತ್ತಿರುವ ಜನರಿಗೆ ಎಷ್ಟು ಪ್ರಸ್ತುತ?

ಕಾರ್ಲ್ ಮಾರ್ಕ್ಸ್ ಹುಟ್ಟಿದ್ದು 1818 ರಲ್ಲಿ, ಮತ್ತು ಬಂಡವಾಳಶಾಹಿಯ ಒಂದು ಸಮಗ್ರ ಅಧ್ಯಯನವಾದ ಕ್ಯಾಪಿಟಲ್‌ನ ಮೊದಲ ಸಂಪುಟ ಪ್ರಕಟವಾದದ್ದು 1867ರಲ್ಲಿ. ಆದ್ದರಿಂದ ಇಂದಿನ ಜಗತ್ತಿನಲ್ಲಿ ಮಾರ್ಕ್ಸ್ ರವರ ವಿಚಾರಗಳು ಮತ್ತು ಕೃತಿಗಳು ಏಕೆ ಪ್ರಸ್ತುತ ಎಂದು ಕೇಳಲು ಸಾಕಷ್ಟು ಕಾರಣಗಳಿವೆ.


ಮಾರ್ಕ್ಸ್ ವಾದಿ ವಿಚಾರಗಳ ಪ್ರಸ್ತುತತೆ ಮತ್ತು ಚೈತನ್ಯಶೀಲತೆ ಈಗಲೂ ಮುಂದುವರಿಯುತ್ತಿರುವುದನ್ನು ಅರ್ಥ ಮಾಡಿಕೊಳ್ಳಲು ನಾವು ವರ್ಷ 2008ದತ್ತ ಹಿಂದಿರುಗಿ ನೋಡೋಣ. ಆ ವರ್ಷ ಒಂದು ಜಾಗತಿಕ ಬಿಕ್ಕಟ್ಟು ಕಾಣಿಸಿಕೊಂಡಿತು. ಅದು ಬಂಡವಾಳಶಾಹಿ ವ್ಯವಸ್ಥೆಯನ್ನು ಜಗತ್ತಿನಾದ್ಯಂತ ಆವರಿಸಿಕೊಂಡಿತು. ಈಗ ಸುಮಾರು ಒಂದು ದಶಕದ ನಂತರವೂ ಜಾಗತಿಕ ಬಂಡವಾಳಶಾಹಿ ಆರ್ಥಿಕ ಇನ್ನೂ ಈ ಬಿಕ್ಕಟ್ಟಿನಿಂದ ಪೂರ್ಣವಾಗಿ ಚೇತರಿಸಿಕೊಂಡಿಲ್ಲ.

ಈ ಬಿಕ್ಕಟ್ಟು ಬೂರ್ಜ್ವಾ ಚಿಂತಕರು ಮತ್ತು ಆರ್ಥಶಾಸ್ತ್ರಜ್ಞರು ಮಾರ್ಕ್ಸ್ ಎಷ್ಟೊಂದು ಸಮಕಾಲೀನರು ಎಂದು ಆಶ್ಚರ್ಯಚಕಿತರಾಗುವಂತೆ ಮಾಡಿದೆ. ಅವರಲ್ಲಿ ಹೆಚ್ಚು ಸೂಕ್ಷ್ಮಗ್ರಾಹಿಗಳಾಗಿರುವವರು ಬಂಡವಾಳಶಾಹಿ ಕುರಿತ ಮಾರ್ಕ್ಸ್ ವಿಶ್ಲೇಷಣೆಯ ದೂರದರ್ಶಿತ್ವವನ್ನು ಒಪ್ಪಿಕೊಳ್ಳಬೇಕಾಗಿ ಬಂದಿದೆ. "ಕಾರ್ಲ್ ಮಾರ್ಕ್ಸ್ ಸರಿಯಾಗಿಯೇ ಗ್ರಹಿಸಿದ್ದರು, ಒಂದೊಮ್ಮೆ ಬಂಡವಾಳಶಾಹಿ ತನ್ನನ್ನೇ ನಾಶಪಡಿಸಿಕೊಳ್ಳುತ್ತದೆ" ಮತ್ತು "ನಾವು ಮಾರುಕಟ್ಟೆಗಳು ಕೆಲಸ ಮಾಡುತ್ತವೆ ಎಂದು ಭಾವಿಸಿದ್ದೆವು.ಅವು ಕೆಲಸ ಮಾಡುತ್ತಿಲ್ಲ" ಎಂದು ಪ್ರಖ್ಯಾತ ಅರ್ಥಶಾಸ್ತ್ರಜ್ಞ ನೂರಿಯೆಲ್ ರೌಬಿನಿ ಆಗ ಹೇಳಿದ್ದರು. ಅವರೇನೂ ಮಾರ್ಕ್ಸ್ ವಾದಿಯಲ್ಲ.

ಸಮಕಾಲೀನ ಕಾಲಘಟ್ಟದಲ್ಲಿ ಪ್ರಾಮುಖ್ಯವಾಗಿರುವ ಪ್ರಶ್ನೆಗಳನ್ನೆಲ್ಲ–ಅದು ಜಾಗತೀಕರಣದ ಪ್ರಭಾವವೇ ಅಗಿರಬಹುದು, ಅಸಮಾನತೆಗಳಲ್ಲಿ ಅಭೂತಪೂರ್ವ ಹೆಚ್ಚಳ ಅಥವ ಪರಿಸರ ಬಿಕ್ಕಟ್ಟಿನ ಪ್ರಶ್ನೆಯಾಗಿರಬಹುದು–ಮಾರ್ಕ್ಸ್ ಮುಂಗಂಡಿದ್ದರು.

ಮಾರ್ಕ್ಸ್ ಮತ್ತು ಎಂಗೆಲ್ಸ್ 1848ರಲ್ಲಿ ಬರೆದ ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಬಂಡವಾಳಶಾಹಿಯ ಜಾಗತೀಕರಣ ಪ್ರಕ್ರಿಯೆಯನ್ನು ವಿಶದಪಡಿಸಿದ್ದರು.

'ಕ್ಯಾಪಿಟಲ್' (ಬಂಡವಾಳ)ನ ಸಂಪುಟ 1 ಮಾರ್ಕ್ಸ್ ಜೀವಿತ ಕಾಲದಲ್ಲಿ ಪ್ರಕಟವಾಯಿತು ಮತ್ತು ನಂತರ ಉಳಿದೆರಡು ಸಂಪುಟಗಳನ್ನು ಎಂಗೆಲ್ಸ್



ಹೊರತಂದರು. ಇದು ಹೊಸದೊಂದು ಉತ್ಪಾದನಾ ವಿಧಾನವಾಗಿದ್ದ ಬಂಡವಾಳಶಾಹಿ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಕುರಿತಾದ ಮಾರ್ಕ್ಸ್ ರವರ ಸೈದ್ಧಾಂತಿಕ ಕೆಲಸದ ಚರಮಘಟ್ಟವಾಗಿತ್ತು. ಅದು ಶ್ರಮಿಕರಿಂದ ಮಿಗುತೆ ಮೌಲ್ಯವನ್ನು ಹೀರಿ ತೆಗೆಯುವ ಬಗೆ, ಉತ್ಪಾದನಾ ಸಾಧನಗಳ ಒಡೆಯರ ಕೈಗಳಲ್ಲಿ ಬಂಡವಾಳ ಮತ್ತು ಸಂಪತ್ತಿನ ಶೇಖರಣೆ, ಹೆಚ್ಚುತ್ತ ಹೋಗುವ ಅಸಮಾನತೆ, ಅತಿ ಉತ್ಪಾದನೆಯ ಬಿಕ್ಕಟ್ಟು ಮತ್ತು ಬಂಡವಾಳಶಾಹಿಯ ವ್ಯವಸ್ಥೆಯೊಳಗಿನ ದೋಷಗಳಿಂದಾಗಿ ಮತ್ತೆ–ಮತ್ತೆ ಬಿಕ್ಕಟ್ಟಿನ ಮರುಕಳಿಕೆ ಇತ್ಯಾದಿ ಬಂಡವಾಳಶಾಹಿಯ ಸಮಸ್ತ ಚಲನೆಯನ್ನು ತೆರೆದಿಟ್ಟಿತು.

ಮಾರ್ಕ್ಸ್ ನಂತರದ ದಿನಗಳಲ್ಲಿ ಕಂಡ ಬೆಳವಣಿಗೆಗಳು ಅವರು ತೆರೆದಿಟ್ಟ ಬಂಡವಾಳಶಾಹಿಯ ಚಲನೆಯ ಸಿದ್ಧಾಂತವನ್ನೇನೂ ಅಮಾನ್ಯಗೊಳಿಸಿಲ್ಲ.

ಮುಂದೆ ಏಕಸ್ವಾಮ್ಯದ ಘಟ್ಟಕ್ಕೆ ಮತ್ತು ಇಂದಿನ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಮಟ್ಟಕ್ಕೆ ಅದರ ಬೆಳವಣಿಗೆಯನ್ನು ಮಾರ್ಕ್ಸ್ ಅಂಗೀಕರಿಸಿದ ವಿಧಾನವನ್ನು ಬಳಸಿಕೊಂಡು ವಿಶ್ಲೇಷಿಸಬಹುದು ಮತ್ತು ಅರ್ಥ ಮಾಡಿಕೊಳ್ಳಬಹುದು. ಮಾರ್ಕ್ಸ್ ರವರ ಸೈದ್ಧಾಂತಿಕ ವಿಧಾನವನ್ನೇ ಅನುಸರಿಸಿ ಲೆನಿನ್ 20ನೇ ಶತಮಾನದ ಆರಂಭದಲ್ಲಿ ಏಕಸ್ವಾಮ್ಯ ಬಂಡವಾಳದ ದಯವನ್ನು ಮತ್ತು ಸಾಮ್ರಾಜ್ಯಶಾಹಿಯನ್ನು ವಿಶ್ಲೇಷಿಸಿದ್ದು.

ಇತಿಹಾಸದ ಪ್ರತಿಯೊಂದು ಪ್ರಮುಖ ಪ್ರವಾಹವನ್ನು, ಫ್ಯಾಸಿಸಂನ ಉದಯ, ವಸಾಹತುಗಳಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಮತ್ತು ಸಮಾಜವಾದದ ಸ್ಥಾಪನೆಯನ್ನು ಮಾರ್ಕ್ಸ್ ರೂಪಿಸಿದ ಸಮಾಜದ ಚಾರಿತ್ರಿಕ ವಿಕಾಸದ ಸಿದ್ಧಾಂತದಿಂದ ಗ್ರಹಿಸಲು ಸಾಧ್ಯವಾಗಿದೆ.

ಬಂಡವಾಳದ ವಿಶ್ಲೇಷಣೆಯಲ್ಲದೆ, ಮಾರ್ಕ್ಸ್ ರವರ ಬೇರೊಂದು ಪ್ರಧಾನ ಕೊಡುಗೆಯೆಂದ–ರೆ ಅದು ಚಾರಿತ್ರಿಕ ಭೌತವಾದ. ಮಾರ್ಕ್ಸ್ ರವರ ತತ್ವಶಾಸ್ತ್ರ ದ್ವಂದ್ವಾತ್ಮಕತೆ ಮತ್ತು ಭೌತವಾದದ ಸಂಯೋಜನೆಯನ್ನು ಆಧರಿಸಿದೆ. ಈ ದ್ವಂದಾತ್ಮಕ ಭೌತವಾದಿ ವಿಧಾನದಿಂದಲೇ ಅವರು ಮಾನವ ಇತಿಹಾಸ ಹೇಗೆ ಅನಾವರಣಗೊಳ್ಳುತ್ತದೆ ಎಂಬುದರ ಒಂದು ವೈಜ್ಞಾನಿಕ ತಿಳುವಳಿಕೆಗೆ ಬಂದದ್ದು.

ಸಮಾಜದಲ್ಲಿ ಉತ್ಪಾದನಾ ವಿಧಾನ ಹೇಗೆ ಒಂದು ಹೊಸ ವಿಧಾನಕ್ಕೆ ಬದಲಾಗುತ್ತದೆ, ಅದು ಹಳೆಯ ಸಮಾಜವನ್ನು ಹೇಗೆ ಹೊಸದೊಂದು ಸಮಾಜದತ್ತ ಒಯ್ಯುತ್ತದೆ ಎಂದು ಮಾರ್ಕ್ಸ್ ತೋರಿಸಿದರು. ಸಮಾಜ ವರ್ಗಗಳಾಗಿ ವಿಭಜನೆಗೊಂಡ ನಂತರ ಬದಲಾವಣೆಗೆ ಒತ್ತಾಸೆ ನೀಡಿದ್ದು ವರ್ಗ ಹೋರಾಟ. ಕಮ್ಯುನಿಸ್ಟ್ ಪ್ರಣಾಳಿಕೆ ಹೇಳಿರುವಂತೆ "ಇದುವರೆಗೆ ಅಸ್ತಿತ್ವದಲ್ಲಿರುವ ಸಮಾಜದ ಇತಿಹಾಸ ವರ್ಗ ಹೋರಾಟಗಳ ಇತಿಹಾಸ".

ಮಾರ್ಕ್ಸ್ ಒಬ್ಬ ಆರ್ಥಿಕಜ್ಞ ಮತ್ತು ಒಬ್ಬ ರಾಜಕೀಯ ಚಿಂತಕ ಮಾತ್ರವೇ ಆಗಿರಲಿಲ್ಲ. ಅವರೊಂದು ಕ್ರಾಂತಿಕಾರಿ ತತ್ವಶಾಸ್ತ್ರವನ್ನು ಮುಂದಿಟ್ಟವರು. ಈ ತತ್ವಶಾಸ್ತ್ರದ ಹರಹು ರಾಜಕೀಯವನ್ನು ಮಾತ್ರವೇ ಅಲ್ಲ, ಸಮಸ್ತ ಮಾನವ ಇತಿಹಾಸವನ್ನು, ಅರ್ಥಶಾಸ್ತ್ರವನ್ನು, ಸಮಾಜ ಮತ್ತು ನಿಸರ್ಗವನ್ನು ಆವರಿಸಿದೆ. ದ್ವಂದಾತ್ಮಕತೆಯ ವಿಧಾನ ಮತ್ತು ಭೌತವಾದವನ್ನು ಬೆಸೆದಿರುವ ಈ ತತ್ವಶಾಸ್ತ್ರ ಕ್ರಾಂತಿಕಾರಿ ಪರಿವರ್ತನೆಯನ್ನು ತರಬಲ್ಲ ಸಿದ್ಧಾಂತ ಮತ್ತು ಆಚರಣೆಯ ಒಂದು ಶಕ್ತಿಶಾಲಿ ಸಂಯೋಜನೆಯನ್ನು ನಿರ್ಮಿಸಿದೆ.

ಮಾರ್ಕ್ಸ್ ರವರೇ ಹೇಳಿರುವಂತೆ "ತತ್ವಜ್ಞಾನಿಗಳು ವಿವಿಧ ರೀತಿಗಳಲ್ಲಿ ಜಗತ್ತಿನ ವ್ಯಾಖ್ಯಾನ ನೀಡಿದ್ದಾರಷ್ಟೇ. ಆದರೆ ಬೇಕಿರುವುದು ಅದನ್ನು ಬದಲಿಸುವುದು ಹೇಗೆ ಎಂಬುದು."

"ಯಾವುದೇ ದೇಶ ಬೇರೆ ದೇಶಗಳನ್ನು ದಮನಿಸುತ್ತಿದ್ದರೆ, ಅದು ಸ್ವತಂತ್ರವಾಗಿರಲು ಸಾಧ್ಯವಿಲ್ಲ" ಎಂದು ಹೇಳಿದವರು ಮಾರ್ಕ್ಸ್ ಮತ್ತು ಎಂಗೆಲ್ಸ್. ಇದು ಇಪ್ಪತ್ತನೇ ಶತಮಾನದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದ ಆರಂಭ ಬಿಂದುವಾಗಿತ್ತು. ಕಾರ್ಲ್ ಮಾರ್ಕ್ಸ್ ರವರಿಗೆ ಭಾರತದ ಬಗ್ಗೆ ಲಭ್ಯವಿದ್ದ ಮಾಹಿತಿ ಬಹಳ ಸೀಮಿತವಾಗಿದ್ದರೂಅವರು ಒಂದು ಲೇಖನಸರಣಿಯನ್ನೇ ಬರೆದರು, ಅದರಲ್ಲಿ ಭಾರತೀಯರು ಬ್ರಿಟಿಶ್ ಆಳ್ವಿಕೆಯ ವಿರುದ್ಧ ಬಂಡೇಳುತ್ತಾರೆ ಎಂದು ಭವಿಷ್ಯ ನುಡಿದಿದ್ದರು.

ಸೋವಿಯೆತ್ ಒಕ್ಕೂಟದ ಪತನದ ನಂತರ ಬೂರ್ಜ್ವಾ ಸಿದ್ಧಾಂತಿಗಳು ಮಾರ್ಕ್ಸ್ ವಾದ ಸತ್ತಿದೆ ಎಂದು ಸಾರಿದರು; 'ಇತಿಹಾಸ ಕೊನೆಗೊಂಡಿದೆ' ಎಂದೂ ಅವರು ಘೋಷಿಸಿದರು. ಆದರೆ ಕಾಲು ಶತಮಾನದ ನಂತರ ಬೂರ್ಜ್ವಾಗಳ ವಿಜಯ ಕೇಕೆಯ ಆ ಭಾವ ಮಾಯವಾಗಿ ಬಿಟ್ಟಿದೆ.

ಎಲ್ಲ ಛಾಯೆಗಳ ಆರ್ಥಿಕಜ್ಞರು ಎಲ್ಲ ಬಂಡವಾಳಶಾಹಿ ದೇಶಗಳನ್ನು ಉನ್ನತ ಮಟ್ಟಗಳ ಅಸಮಾನತೆ ಬಾಧಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಮುಂದುವರೆದಿರುವ ಬಂಡವಾಳಶಾಹಿ ದೇಶಗಳಲ್ಲಿ ಅದು ಕಳೆದ ಎಪ್ಪತ್ತು ವರ್ಷಗಳ ಅತ್ಯುನ್ನತ ಮಟ್ಟಗಳನ್ನು ತಲುಪಿದೆ. ಆರ್ಥಿಕ ಅಸಮಾನತೆಯ ದೃಷ್ಟಿಯಿಂದ ಅಮೆರಿಕಾದಲ್ಲಿನ ಅಸಮಾನತೆಯ ಮಟ್ಟ "ಬಹುಶಃ ಈ ಜಗತ್ತಿನ ಬೇರೆ ಯಾವುದೇ ದೇಶ ಯಾವುದೇ ಕಾಲದಲ್ಲಿ ಹೊಂದಿದ್ದುಕ್ಕಿಂತ ಹೆಚ್ಚಿದೆ" ಎಂದು ಫ್ರೆಂಚ್ ಅರ್ಥಶಾಸ್ತ್ರಜ್ಞ ಥಾಮಸ್ ಪಿಕೆಟಿ ಟಿಪ್ಪಣಿ ಮಾಡಿದ್ದಾರೆ.

ಜಾಗತಿಕ ಮಟ್ಟದಲ್ಲಿ ವಯಸ್ಕರಲ್ಲಿ ಮೇಲಿನ 1ಶೇ. ಮಂದಿ ಜಗತ್ತಿನ ಸಂಪತ್ತಿನ 51ಶೇ.ದ ಮೇಲೆ ಒಡೆತನ ಹೊಂದಿದ್ದಾರೆ. ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳ ಉತ್ಪಾದಿಸಿರುವುದು ಇದನ್ನೇ.


ಕಾರ್ಲ್ ಮಾರ್ಕ್ಸ್ ಗೆ ಇಂದು ಜಗತ್ತನ್ನು ಬಾಧಿಸುತ್ತಿರುವ ಇಂತಹ ಶೋಚನೀಯ ಪರಿಸ್ಥಿತಿಯಿಂದ ಆಶ್ಚರ್ಯವಾಗುತ್ತಿರಲಿಲ್ಲ ಅವರು ಕಾರ್ಮಿಕ ವರ್ಗ ಮತ್ತು ಇತರ ದುಡಿಯುವ ಜನಗಳಿಗೆ ಕೊಟ್ಟಿರುವ ವೈಜ್ಞಾನಿಕ ಸಿದ್ಧಾಂತ ಬಂಡವಾಳಶಾಹಿಯನ್ನು ಮೀರಿ ಹೋಗುವ ಮತ್ತು ವರ್ಗ ಶೋ?ಷಣೆಯಿಂದ ಮತ್ತು ಸಾಮಾಜಿಕ ದಮನದಿಂದ ಮುಕ್ತವಾದ ಒಂದು ಹೊಸ ಸಮಾಜವಾದಿ ಸಮಾಜವನ್ನು ಕಟ್ಟುವ ಕ್ರಿಯೆಗೆ ಮಾರ್ಗದರ್ಶನ ನೀಡಬಲ್ಲದು.

ನಾವೀಗ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವವನ್ನು ಈ ವರ್ಷ ಆಚರಿಸುತ್ತಿದ್ದೇವೆ. ಈ ವರ್ಷದ ಸಪ್ಟಂಬರಿನಲ್ಲಿ ಮಾರ್ಕ್ಸ್ ರವರ 'ದಾಸ್ ಕ್ಯಾಪಿಟಲ್'ನ ಪ್ರಕಟಣೆಯ 150ನೇ ವಾರ್ಷಿಕೋತ್ಸವ ಬರುತ್ತದೆ. ಅದರ ನಂತರ ಕಾರ್ಲ್ ಮಾರ್ಕ್ಸ್ ರವರ 200ನೇ ಜನ್ಮ ವಾರ್ಷಿಕೋತ್ಸವ ಬರುತ್ತದೆ. ಈ ಎಲ್ಲ ಸಂದರ್ಭಗಳನ್ನು ಮಾರ್ಕ್ಸ್ ವಾದ–ಲೆನಿನ್‌ವಾದದ ನಮ್ಮ ತಿಳಿವನ್ನು ತೀಕ್ಷ್ಣಗೊಳಿಸಲು ಮತ್ತು ಆಳಗೊಳಿಸಲು ಹಾಗೂ 21ನೇ ಶತಮಾನದಲ್ಲಿ ಭಾರತದಲ್ಲಿ ಸಮಾಜವಾದಕ್ಕೆ ಒಂದು ನಕಾಶೆಯನ್ನು ರೂಪಿಸಲು ಬಳಸಿಕೊಳ್ಳಬೇಕು. ●

ರೈತ ಸಂಘದ ಅಹೋರಾತ್ರಿ ಧರಣಿ.......... ಪುಟ 16 ರಿಂದ

3. ಸರಕಾರಿ ಹಾಗೂ ಅರಣ್ಯ ಭೂಮಿ ಸಾಗು ನಿರತ ಬಡವರನ್ನು ಭೂಗಳ್ಳರೆಂದು ಕೇಸು ದಾಖಲಿಸಂತೆ ಅಗತ್ಯ ಕ್ರಮಕೈಗೊಳ್ಳಬೇಕು ಮತ್ತು ಸರಕಾರಿ ಹಾಗೂ ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರನೀಡಲು ಅಗತ್ಯ ಕ್ರಮವಹಿಸಬೇಕು.
4. ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರ ಭೂಮಿಯನ್ನೇ ಇತರೆ ಉದ್ದೇಶಗಳಿಗೆ ಸಕಲೇಶಪುರ, ಬೇಲೂರು ತಾಲ್ಲೂಕುಗಳಲ್ಲಿ ಮಂಜೂರು ಮಾಡಲಾಗಿದ್ದು ಇದನ್ನು ರದ್ದುಗೊಳಿಸಿ ಸರ್ವೆ ಕಾರ್ಯ ನಡೆಸಿ ಹಾಲಿ ಉಳುಮೆ ಮಾಡುತ್ತಿರುವ ಬಡ ರೈತರಿಗೆ ಭೂಮಿಯನ್ನು ಮಂಜೂರು ಮಾಡಬೇಕು.
5. ತೆಂಗು ಬೆಳೆ ನಷ್ಟಕ್ಕೆ ಕೇರಳಾ ಮಾದರಿಯಲ್ಲಿ ಪರಿಹಾರ ನೀಡಬೇಕು.
6. 150 ದಿನಗಳ ಕಾಲ ಉದ್ಯೋಗ ನೀಡದಿರುವ ಉದ್ಯೋಗ ಖಾತ್ರಿ ಫಲಾನುಭವಿಗಳಿಗೆ ಉಳಿದ ದಿನಗಳ ನಿರುದ್ಯೋಗ ಭತ್ಯೆಯನ್ನು ಒದಗಿಸಬೇಕು.
7. ಉದ್ಯೋಗ ಖಾತ್ರಿ ದಿನಗಳನ್ನು 200 ದಿನಗಳಿಗೆ ಮತ್ತು ನಗರ ಪ್ರದೇಶಗಳಿಗೆ ವಿಸ್ತರಿಸಿ ಹಾಗೂ ಕೂಲಿಯನ್ನು 600 ರೂಗಳಿಗೆ ಹೆಚ್ಚಿಸಬೇಕು.
8. ಸಮಸ್ಯೆ ಇರುವ ನಗರ ಹಾಗೂ ಗ್ರಾಮಗಳಿಗೆ ಅಗತ್ಯ ಕುಡಿಯುವ ನೀರಿನ ಸರಬರಾಜಿಗೆ ಕ್ರಮವಹಿಸಬೆಕು.
9. ಜಾನುವಾರುಗಳಿಗೆ ಹಾಲು ಉತ್ಪಾದಕ ಸಹಕಾರ ಸಂಘಗಳ ಮೂಲಕ ಅಗತ್ಯ ಮೇವನ್ನು ಒದಗಿಸಬೇಕು. ಪಶು ಆಹಾರವನ್ನು ಶೆ. 50 ಸಹಾಯದನದಲ್ಲಿ ಒದಗಿಸಬೇಕು ಮತ್ತು ಪ್ರತಿ ಗ್ರಾಮದಲ್ಲೂ ಮೇವು ಒದಗಿಸುವ ಬ್ಯಾಂಕುಗಳನ್ನು ತೆರೆಯಬೇಕು.


ಸುರಪುರ


ಶಹಪುರ


ಸಿರುಗುಪ್ಪ

JANASHAKTHI KANNADA VARA PATRIKE May 22-28, 2017 Price : Rs. 10/- Date of Publication : 19 May 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಹಾಸನ


ಗಂಗಾವತಿ


ಮಳವಳ್ಳಿ

ಮೇ 17–18: ರೈತ ಸಂಘದ ಅಹೋರಾತ್ರಿ ಧರಣಿ

ಸಾಲಮನ್ನಾ, ಬೆಳೆ ನಷ್ಟ ಪರಿಹಾರ, ಬಗರ್ ಹುಕುಂ ಹಕ್ಕುಪತ್ರ, ಉದ್ಯೋಗ ಖಾತ್ರಿ. ಇಲ್ಲದಿದ್ದರೆ ನಿರುದ್ಯೋಗ ಭತ್ಯೆ – ಮುಂತಾದ ರೈತ ಕೃಷಿ–ಕೂಲಿಕಾರರ ಹಕ್ಕೊತ್ತಾಯಗಳಿಗೆ ಸರಕಾರದ ಗಮನ ಸೆಳೆಯಲು ಕರ್ನಾಟಕ ಪ್ರಾಂತ ರೈತ ಸಂಘ ಮೇ 17–18ರಂದು ರಾಜ್ಯದಾದ್ಯಂತ ಜಿಲ್ಲಾ–ತಾಲೂಕು ಕೇಂದ್ರಗಳಲ್ಲಿ 48 ಗಂಟೆಗಳ ಅಹೋರಾತ್ರಿ ಧರಣಿಗೆ ಕರೆ ನೀಡಿತ್ತು.

ಈ ಕೆಳಗಿನ ಎಲ್ಲ ಹಕ್ಕೊತ್ತಾಯಗಳನ್ನು ರಾಜ್ಯ ಸರ್ಕಾರ ಕೂಡಲೇ ಈಡೇರಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹಲವು ಜಿಲ್ಲಾ/ತಾಲೂಕು ಕೇಂದ್ರಗಳಲ್ಲಿ ರೈತರು ಧರಣಿ ನಡೆಸಿದ ವರದಿಗಳು ಬಂದಿವೆ. ಇವುಗಳಲ್ಲಿ ಕೋಲಾರ, ತುಮಕೂರು, ಗುಲ್ಬರ್ಗಾ, ಹಾಸನ ಜಿಲ್ಲಾ ಕೇಂದ್ರಗಳಿಂದಲೂ, ಬಂಗಾರಪೇಟೆ, ಮಾಗಡಿ, ಕುಷ್ಟಗಿ, ಕುರುಗೋಡು, ಸಿರುಗುಪ್ಪ, ಮಳವಳ್ಳಿ, ಶಹಪುರ, ಸುರಪುರ, ಶ್ರೀನಿವಾಸಪುರ, ಗಂಗಾವತಿ ತಾಲೂಕು ಕೇಂದ್ರಗಳಿಂದಲೂ ಅಹೋರಾತ್ರಿ ಧರಣಿ ನಡೆಸಿದ ವರದಿಗಳು ಬಂದಿವೆ. ಈ ಎಲ್ಲಾ ಧರಣಿಗಳಲ್ಲಿ ಈ ಕೆಳಗಿನ ಹಕ್ಕೊತ್ತಾಯಗಳನ್ನು ಒಳಗೊಂಡ ಮನವಿ ಸಲ್ಲಿಸಲಾಗಿದೆ:

ಹಕ್ಕೊತ್ತಾಯಗಳು ;

1. ಸಾಲಬಾಧಿತ ರೈತರು, ಗೇಣಿದಾರರ, ಕೂಲಿಕಾರರ ಮತ್ತು ಕಸುಬುದಾರರ ಎಲ್ಲಾ ರೀತಿಯ ಸಾಲಮನ್ನಾ ಮಾಡಬೇಕು, ಇವರ ಮಕ್ಕಳ ಶಾಲಾ – ಕಾಲೇಜು ಫೀಜುಗಳನ್ನು ಮನ್ನಾ ಮಾಡಬೇಕು.
2. ಬೆಳೆ ನಷ್ಟ ಪರಿಹಾರ ಪ್ರತಿ ಎಕರೆಗೆ ಕನಿಷ್ಠ 25,000 ಒದಗಿಸಬೇಕು.

ಪುಟ 15 ಕ್ಕೆ


ಕೋಲಾರ


ಕುರುಗೋಡು


ಕಲಬುರಗಿ


ಮಾಗಡಿ

ಹೆಚ್. ಆರ್. ನವೀನ್‌ಕುಮಾರ್


ಮೋದಿಯ 3 ವಿಫಲ ವರ್ಷಗಳು

ಉದ್ಯೋಗ

ಆಶ್ವಾಸನೆ 2 ಕೋಟಿ ವಾಸ್ತವ 2.3 ಲಕ್ಷ

ಆಶ್ವಾಸನೆ ಈಡೇರಿಸಲು 30 ವರ್ಷಕ್ಕೂ ಹೆಚ್ಚು ಬೇಕು

ರೇಗಾದಲ್ಲಿ ಉದ್ಯೋಗ ಬೇಡಿಕೆ



ಜನವರಿ 2015–2017 ಮಧ್ಯೆ

ಕೈಗಾರಿಕಾ ಉತ್ಪಾದನೆ ಸೂಚಕ ಏರಿಕೆ ಕೇವಲ 1%

ಕೈಗಾರಿಕಾ ಕ್ಷೇತ್ರದ ಸಾಲ ಹೆಚ್ಚಳ ಕೇವಲ 0.3%

ಮುಂದಿನ 1–2 ವರ್ಷಗಳಲ್ಲಿ ಐಟಿ, ಟೆಲಿಕಾಂ, ಬ್ಯಾಂಕ್/ಹಣಕಾಸು ಸೇವಾ ವಲಯಗಳಿಂದ 10 ಲಕ್ಷ ಉದ್ಯೋಗ ಕಡಿತ

ಸ್ಥಿರ ಬಂಡವಾಳ ಹೂಡಿಕೆ ಕಳೆದ 2 ವರ್ಷಗಳಲ್ಲಿ 6.1% ನಿಂದ 0.6% ಕುಸಿದಿದೆ


ಶ್ರೀನಿವಾಸಪುರ



ಬಂಗಾರಪೇಟೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**